ಕನ್ನಡ ವಿಶ್ವವಿದ್ಯಾಲಯ

ಹಂಪಿ

ಽ೨೦೧೫–೧೬ನೇ ಸಾಲಿನಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಎಂ.ಫಿಲ್. ಪದವಿಗಾಗಿ ಅರ್ಪಿಸಿದ ನಿಬಂಧ

“ಬೊಳುವಾರರ ಸ್ವಾತಂತ್ರ್ಯದ ಓಟ–ವಿಮರ್ಶಾತ್ಮಕ ಅಧ್ಯಯನ”

ನಿಬಂಧಕಾರರು

ನೋಂದಣಿ ಸಂಖ್ಯೆ : KVTM/K 150901030051

ಕನ್ನಡ ಎಂ.ಫಿಲ್ ವಿದ್ಯಾರ್ಥಿ (ಹಂಪಿ, ಕ.ವಿ.ವಿ.)

1274

೨೦೧೫–೧೬

ಪರಾಮರ್ಶೆಗೆ ಮಾತ್ರ

"ಸಿರಿಗನ್ನಡ" ಗ್ರಂಥಾಲಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬.

SINO-1274

1274

ಸಿರಿಗನ್ನಡ ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ

AKSHARA GRANTHALAYA
ACC.NO.131915

1274

ಸಿರಿಗನ್ನಡ ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ

[illegible]
[illegible]

ಕನ್ನಡ ವಿಶ್ವವಿದ್ಯಾಲಯ

ಹಂಪಿ

ಸಿರಿಗನ್ನಡ ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ,ಹಂಪಿ.

೨೦೧೫-೧೬ನೇ ಸಾಲಿನಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಎಂ.ಫಿಲ್. ಪದವಿಗಾಗಿ ಅರ್ಪಿಸಿದ ನಿಬಂಧ

"ಬೊಳುವಾರರ ಸ್ವಾತಂತ್ರ್ಯದ ಓಟ-ವಿಮರ್ಶಾತ್ಮಕ ಅಧ್ಯಯನ"

ನಿಬಂಧಕಾರರು
ನೋಂದಣಿ ಸಂಖ್ಯೆ : KVTM/K 150901030051
ಕನ್ನಡ ಎಂ.ಫಿಲ್ ವಿದ್ಯಾರ್ಥಿ (ಹಂಪಿ, ಕ.ವಿ.ವಿ.)

೨೦೧೫-೧೬

131915

8K0.9
Som b

ಬೊಳುವಾರರ ಸ್ವಾತಂತ್ರ್ಯ ಓಟ – ವಿಮರ್ಶಾತ್ಮಕ ಅಧ್ಯಯನ

ಪರಿವಿಡಿ

*****

ಅಧ್ಯಾಯ – ೧

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ಆಧುನಿಕ ಕನ್ನಡ ಸಾಹಿತ್ಯದಲ್ಲಿ ನವೋದಯ, ನವ್ಯ, ಪ್ರಗತಿಶೀಲ, ಬಂಡಾಯ, ದಲಿತ ಮುಂದುವರಿದಂತೆ ಸ್ತ್ರೀವಾದಿ ಮತ್ತು ಮುಸ್ಲಿಂ ಸಾಹಿತ್ಯಗಳು ಕಂಡು ಬರುತ್ತವೆ. ಆಯಾಯ ಧರ್ಮವು ಸಾಹಿತ್ಯಕ್ಕೆ ಅನ್ವಯಿಸುವಂತೆ ಕಾವ್ಯ, ಕಥೆ, ನಾಟಕ, ಕಾದಂಬರಿ ಇವು ಪ್ರಮುಖವಾಗಿ ಸಮಾಜದ ಮುಖ್ಯ ವಾಹಿನಿಗೆ ತೆರೆದುಕೊಂಡಿದೆ. ಈ ನಿಟ್ಟಿನಲ್ಲಿ ಮುಸ್ಲಿಂ ಸಾಹಿತ್ಯವು ಕೂಡ ತನ್ನ ಅಸ್ತಿತ್ವವನ್ನು ವಿಭಿನ್ನ ನೆಲೆಗಳೊಡನೆ ಕವಲೊಡೆದುಕೊಂಡು ಸಾಗಿರುವುದು ಎಪ್ಪತ್ತರ ದಶಕದಲ್ಲಿ ಸಮಾಜಕ್ಕೆ ಹಲವು ಸಂದೇಶವನ್ನು ಅನಾವರಣಗೊಂಡಿರುವುದನ್ನು ಸ್ಪಷ್ಟಪಡಿಸಲಾಗುತ್ತದೆ.

ಎಪ್ಪತ್ತರ ದಶಕದ ಮುಸ್ಲಿಂ ಸಂವೇದನೆಯ ಲೇಖಕರು ಮುಸ್ಲಿಂ ಜೀವನದ ಬದುಕು-ಬವಣೆಯನ್ನು ಸಾಹಿತ್ಯ ಕ್ಷೇತ್ರಕ್ಕೇ ಕೊಟ್ಟಿದ್ದಾರೆ. ಸಾಂಸ್ಕೃತಿಕವಾಗಿಯೂ ಸಾಹಿತ್ಯಕ್ಕೆ ಅವರ ಕೊಡುಗೆ ಅಪಾರವಾಗಿದೆ. ಅವರಲ್ಲಿ ಪ್ರಮುಖರಾದವರು ಸಾರಾ ಅಬೂಬಕ್ಕರ್, ಫಕೀರ್ ಮಹಮ್ಮದ್ ಕಟ್ಪಾಡಿ, ಭಾನು ಮುಷ್ತಾಕ್, ಅಬ್ದುಲ್ ರಶೀದ್, ಮುಮ್ತಾಜ್ ಬೇಗಂ ಹಾಗೂ ರಹಮತ್ ತರೀಕೆರೆ, ರಂಜಾನ್ ದರ್ಗಾ. ಅವರಂತೆ ಪ್ರಮುಖರೆನ್ನಿಸಿಕೊಂಡಿರುವ ಬೊಳುವಾರು ಮಹಮದ್ ಕುಂಞಿ ಅವರ ಕೃತಿಗಳು ಅಪಾರ ಜನಮನ್ನಣೆಗೆ ಪಾತ್ರವಾಗಿವೆ. ಅವರ ಸಣ್ಣಕತೆಗಳು, ಕಾದಂಬರಿಗಳು, ನಾಟಕಗಳು, ಇನ್ನೂ ಹಲವಾರು ಕೃತಿಗಳ ರಚನೆಯೊಂದಿಗೆ ಜೀವನ ಚರಿತ್ರೆಯಂತಹ ಪ್ರಕಾರಗಳಲ್ಲಿ ಸಾಹಿತ್ಯ ಕೃಷಿ ಮಾಡಿದ್ದಾರೆ. ಅಂದರೆ ಕನ್ನಡ ಸಾಹಿತ್ಯ ಚರಿತ್ರೆಯು ಒಂದು ಸಾವಿರ ವರ್ಷಕ್ಕಿಂತ ಹೆಚ್ಚಿನ ಇತಿಹಾಸವನ್ನು ಹೊಂದಿದೆ. ಆಯಾ ಕಾಲಕ್ಕೆ ತಕ್ಕಂತೆ ವಸ್ತು, ಆಶಯ, ಧೋರಣೆ ಭಾಷೆ ಮತ್ತು ಅಭಿವ್ಯಕ್ತಿ ಎಲ್ಲವೂ ಬದಲಾಗುತ್ತಾ ಸಾಗಿರುವುದನ್ನು ಸಾಹಿತ್ಯ ಪರಂಪರೆಯಲ್ಲಿ ಕಾಣುತ್ತೇವೆ. ಈ ಕನ್ನಡ ಸಾಹಿತ್ಯದಂತಹ ಸತ್ವಪೂರ್ಣ ಪರಂಪರೆಯಲ್ಲಿ ಕಾಣಿಸಿಕೊಂಡಿರುವ ಯಾವುದೇ ಶಕ್ತಿನೂ, ಜವಾಬ್ದಾರಿಯುತ ವ್ಯಕ್ತಿತ್ವವುಳ್ಳವನೂ ಆದ ಲೇಖಕನೊಬ್ಬನ ಸಮಗ್ರ ಭಾಷೆ, ಭಾಷೆಗಳ ಅಭಿವ್ಯಕ್ತಿಯ ಅಧ್ಯಯನವು ಹಲವು ಬಗೆಯ ಸಾಂಸ್ಕೃತಿಕ ಮತ್ತು ವೈಚಾರಿಕ ವಿನ್ಯಾಸಗಳ ಬಗೆಗೆ ಖಚಿತವಾದ ನಿಲುವು ಮತ್ತು ಒಳನೋಟಗಳನ್ನು ನೀಡುವಷ್ಟು ಶಕ್ತವಾಗಿರುತ್ತದೆ. ಆಯಾ ಕಾಲಮಾನದ ಸಾಮಾಜಿಕ ಆರ್ಥಿಕ, ರಾಜಕೀಯ ಹಾಗೂ ಸಾಹಿತ್ಯಕ, ಸಾಂಸ್ಕೃತಿಕ ಒತ್ತಡಗಳು ಲೇಖಕದ ಮನೋಧರ್ಮವನ್ನು ಆತನ ಅಭಿವ್ಯಕ್ತಿಗಳ ತಾತ್ವಿಕ ಸ್ವರೂಪವನ್ನು ಹಾಗೂ ಕಲಾತ್ಮಕ ರೂಪವನ್ನು ನಿರ್ಧರಿಸಬಲ್ಲಷ್ಟು ಪ್ರಭಾವಶಾಲಿಯಾಗಿರುತ್ತಾರೆ.

ಆದರೆ ತುಂಬಾ ಸಮರ್ಥನಾದ ಸಾಹಿತಿಯಾದವನು ಮಾತ್ರ ತನ್ನ ಕಾಲದ ಎಲ್ಲಾ ಬಗೆಯ ರೂಪ, ರಸ, ಗಂಧ, ಧ್ವನಿಗಳಿಗೆ ತೀವ್ರವಾದ ಎಚ್ಚರದಿಂದ ಕಣ್ಣು, ಮನಸ್ಸುಗಳನ್ನು ತೆರೆದುಕೊಂಡು ವರ್ತಮಾನವನ್ನು ಗ್ರಹಿಸುತ್ತಾನೆ. ಹೀಗೆ ತಾನು ಗ್ರಹಿಸಿದ್ದನ್ನು ತನ್ನದೇ ಆದ ವಿಶಿಷ್ಟ ಹಿಂದೂ-ಮುಸ್ಲಿಂ ಒಟ್ಟಾರೆ ಬದುಕಿನ ಆಧಾರದ ಮೇಲೆ ಸ್ವಾತಂತ್ರ್ಯದ ಓಟ. ಕೃತಿಯನ್ನು ರಚಿಸಿರುವುದು. ಅವರ ಕಾಣಿಕೆ ಹಾಗೂ ಕಲಾತ್ಮಕತೆಯ ಮಾಂತ್ರಿಕ ಸ್ಪರ್ಶದ ಮೂಲಕ ಅಭಿವ್ಯಕ್ತಿಸುವ ಸೋಪಜ್ಞವಾದ ಮಾರ್ಗವನ್ನು ಕಂಡುಕೊಳ್ಳುತ್ತಾನೆ. ಅಧ್ಯಯನಗಳು ಆಯಾ ಲೇಖಕರ ಅನನ್ಯತೆಯನ್ನು ಮತ್ತು ಪರಂಪರೆಯ ಸತ್ವ ಪೂರ್ಣ ವಿಕಾಸದ ಕ್ರಮಗಳನ್ನು ನಿರೂಪಿಸುತ್ತವೆ. ಚಲನಶೀಲತೆಯನ್ನು ಕಳೆದುಕೊಂಡು ಸಿದ್ದರೂಪಗಳ ಪುನರಾವರ್ತನೆಯ ಸ್ಥಾವರ ಸ್ಥಿತಿಗೆ ಒಳಗಾದ ಸಾಹಿತ್ಯಿಕ ಸಂದರ್ಭಗಳಲ್ಲಿ ಪ್ರಜ್ಞಾವಂತರಾದ ಸಾಹಿತಿಗಳು ಅಂದಂದಿನ ಸಾಂಸ್ಕೃತಿಕ ಒತ್ತಡಗಳಿಗೆ ಅರ್ಥ ಪೂರ್ಣವಾಗಿ ಸೃಜನಶೀಲ ಆಯಾಮಗಳನ್ನು ಕಂಡುಕೊಳ್ಳಬೇಕಾಗುತ್ತದೆ.

ಸಾಹಿತ್ಯದ ರೂಪುರೇಷೆಗಳನ್ನು ಅದಕ್ಕೆ ಅಗತ್ಯವಾದ ಸೈದ್ಧಾಂತಿಕ ಹಾಗೂ ತಾತ್ವಿಕ ಹಿನ್ನೆಲೆಗಳನ್ನು ಕುರಿತು ಸೃಜನಶೀಲ ಗುಣಗಳುಳ್ಳ ಕ್ರಿಯಾಶಾಲಿಗಳು ಬದುಕಿಗೆ ಹೆಚ್ಚು ಬದ್ದರಾಗಿದ್ದು, ಗಂಭೀರವಾಗಿ ತೊಡಗಿಕೊಂಡಾಗ ಅರ್ಥಪೂರ್ಣವಾದ ಸಾಹಿತ್ಯ ಚಳುವಳಿಗಳು ಹುಟ್ಟಿಕೊಳ್ಳುತ್ತವೆ. ಈ ಬಗೆಯ ಹೊಸ ಸಾಂಸ್ಕೃತಿಕ ಚಳುವಳಿಯಿಂದಾಗಿ ಅಂದಂದಿನ ಸೃಜನಶೀಲ ಸಾಹಿತ್ಯ ಹೊಸತತ್ವ ಹಾಗೂ ಹೊಸ ರೂಪಗಳನ್ನು ಪಡೆದು ನಿರಂತರತೆಯ ಬೆಳಕಿನ ಹಾದಿಯಲ್ಲಿ ಚಲನಶೀಲವಾಗುತ್ತದೆ.

ಈ ನಿಟ್ಟಿನಲ್ಲಿ ಅಲ್ಪಸಂಖ್ಯಾತರು, ಬಹುಸಂಖ್ಯಾತರು ಎಂಬ ಶೋಷಿತ ಜನ-ವರ್ಗಗಳ ಹಕ್ಕೊತ್ತಾಯಗಳು ಪ್ರಜಾಸತ್ತಾತ್ಮಕ ಹೋರಾಟ ಚಳುವಳಿಗಳ ರೂಪದಲ್ಲಿ ಸಮುದಾಯದ ನಡುವಿನಿಂದ ಒಡಮೂಡಿದವು. ಹೀಗೆ ವಿಭಿನ್ನಧಾರೆಗಳಲ್ಲಿ ಮೂಡಿ ಬಂದಿರುವ ಈ ಸಾಹಿತ್ಯವನ್ನು ವಿಮರ್ಶೆ, ವಿಶ್ಲೇಷಣೆಗೆ ಒಳಪಡಿಸುವಲ್ಲಿ ಕೂಡಾ ಬೇರೆಯದೇ ನೆಲೆಯ ನೋಟ ಕ್ರಮ ಮತ್ತು ಪರಿಕರಗಳ ಅವಶ್ಯಕತೆಯಿದೆ. ಈ ಕಾಲಘಟ್ಟದ ಸಾಹಿತ್ಯಾಭಿವ್ಯಕ್ತಿಯು ಸಾಹಿತ್ಯದ ಆಶಯ, ವಸ್ತು, ಭಾಷೆ ಮತ್ತು ಆಕರಗಳಿಗಿಂತ ಸಂಪೂರ್ಣ ಭಿನ್ನವಾಗಿರುವಂಥದ್ದು ರೂಪ ಸಾಹಿತ್ಯವನ್ನು ಸಂಶೋಧನೆಯ ವಿಷಯವಾಗಿ ತೆಗೆದುಕೊಂಡು ವಸ್ತು ನಿಷ್ಠವಾಗಿ ವಿಶ್ಲೇಷಣೆ ಮತ್ತು ವಿಮರ್ಶೆಗೆ ಒಳಪಡಿಸುವಾಗ ಯಾವುದೇ ಸಿದ್ಧ ಮಾದರಿಯ ಮಾರ್ಗವು ಎದುರಿಸಿರುವುದಿಲ್ಲ. ಹಾಗೆಯೇ ಈಗಾಗಲೇ ಚಲಾವಣೆಯಲ್ಲಿರುವ ಸಿದ್ಧಮಾದರಿಯ ರೂಪಗಳನ್ನು ಕೂಡ ಯಥಾವತ್ತಾಗಿ ಅನ್ವಯಿಸಲು ಆಗುವುದಿಲ್ಲ.

ಮುಸ್ಲಿಂ ಸಂವೇದನೆಯು ಈ ಕಾಲಘಟ್ಟದ ಪ್ರಮುಖ ಸಂವೇದನೆಯಾಗಿದೆ. ಹಿಂದುಳಿದ ವರ್ಗ, ಜಾತಿ ಮತ್ತು ದಲಿತರು ಆಶೋತ್ತರಗಳನ್ನು ಗುರುತಿಸುವಲ್ಲಿ ಎಷ್ಟು ಕವಲುದಾರಿಗಳಿದೆಯೋ ಹಾಗೆಯೇ ಮುಸ್ಲಿಂರ ಬದುಕಿನ ಅಭಿವ್ಯಕ್ತಿಯ ಕ್ರಮಗಳಲ್ಲಿಯೂ ಕೂಡಾ ವಿಭಿನ್ನತೆಯನ್ನು ಕಾಣಬಹುದು. ಮುಸ್ಲಿಂ ಸಮುದಾಯವು ಬದುಕನ್ನು ಕಟ್ಟಿಕೊಂಡಿರುವ ಸಂದರ್ಭವೇ ತುಂಬಾ ಅನನ್ಯವಾದದ್ದು. ವಾಸ್ತವತೆ ಹೀಗಿದ್ದು ಮುಸ್ಲಿಂರ ಬದುಕನ್ನು ಅಮೂರ್ತರೂಪದಿಂದ ಮೂರ್ತ ಸ್ವರೂಪದಲ್ಲಿ ವಾಸ್ತವವಾಗಿ ಕಂಡುಕೊಂಡಿದ್ದು ಸೋಜಿಗವೇ ಹೌದು. ಸಾಹಿತ್ಯವನ್ನು ಸಮುದಾಯದ ಬದಲಾವಣೆಯ ಮೂಲ ಸೆಲೆಯಾಗಿ ಮಾಡಿಕೊಂಡು ಮುನ್ನುಡಿಯಿಟ್ಟು ಮಹತ್ವದ ಬರಹಗಾರರಾದ ಬೊಳುವಾರು ಮಹಮದ್ ಕುಂಞ್ ಅವರ ಕಥೆ ಕಾದಂಬರಿಗಳನ್ನು ಪ್ರಸ್ತುತ ನನ್ನ ಈ ಅಧ್ಯಯನಕ್ಕು ಒಳಪಡಿಸಿಕೊಂಡಿರುತ್ತೇನೆ. ಹಾಗೆಯೇ ಇತರೆ ಮುಸ್ಲಿಂ ಲೇಖಕರನ್ನು ಸಂದರ್ಭೋಚಿತವಾಗಿ ಚರ್ಚೆಗೆ ಆಯ್ದುಕೊಳ್ಳಲಾಗಿದೆ. ಸಾಹಿತ್ಯ ಮನುಷ್ಯನ ಬದುಕಿನ ಭಾಗವಾಗಿ ಅಭಿವ್ಯಕ್ತಗೊಂಡಿದ್ದು ಅತ್ಯಲ್ಪವೇ ಆದರೂ ಅಸ್ಪೃಶ್ಯರ ಬದುಕು-ಬವಣೆಗಳು, ಹಿಂದುಳಿದ ಹಾಗೂ ಮುಸ್ಲಿಂರ ಕಷ್ಟ-ಸುಖಗಳು ಅಲ್ಲಲ್ಲಿ ಕಂಡುಬರುತ್ತವೆ. ಆದರೆ ಬದುಕನ್ನು ದಟ್ಟವಾಗಿ, ಸಹಜ ಸೊಗಸಿನ ಹಿನ್ನೆಲೆಯಲ್ಲಿ ಕಟ್ಟಿಕೊಡುವ ಸಾಹಿತ್ಯವು ಪ್ರಧಾನ ಧಾರೆಯಲ್ಲಿ ಕಣ್ಮರೆಯಾದಂತೆ ಕಂಡು ಬರುತ್ತದೆ. ಇದುವರೆಗೆ ಸಾಹಿತ್ಯದಲ್ಲಿದ್ದ ನಿರ್ಲಕ್ಷಿತ ಧೋರಣೆಯನ್ನು ಆ ಸಮುದಾಯದ ಮೊದಲ ತಲೆಮಾರಿನ ವಿದ್ಯಾವಂತರು ಪ್ರಶ್ನಿಸತೊಡಗಿದರು. ಸಾಮಾಜಿಕವಾಗಿ ಸ್ವಾಭಿಮಾನದ ಬದುಕನ್ನು ಕಟ್ಟಿಕೊಳ್ಳುವ ಮಹತ್ವವು ಸಮುದಾಯಗದೊಳಗೆ ಕಾಣಿಸಿಕೊಂಡಿತು. ದಲಿತ-ಬಂಡಾಯ ಸಾಹಿತ್ಯವು ಇವುಗಳೆಲ್ಲವನ್ನು ಅರಗಿಸಿಕೊಂಡು ಸಶಕ್ತವಾಗಿ ಬೆಳೆಯಿತು.

ದಲಿತರ ಅನುಭವಗಳು ಸಾಹಿತ್ಯದೊಳಗೆ ತೆರೆದುಕೊಂಡಾಗ ಅವುಗಳನ್ನು ಒಪ್ಪಿಕೊಳ್ಳದಂತೆ ಇದ್ದ ಮನಸ್ಥಿತಿಯೇ ಮುಸ್ಲಿಂ ಸಂವೇದನೆಯು ಅಭಿವ್ಯಕ್ತಗೊಂಡು ಸಂದರ್ಭದಲ್ಲಿಯೂ ಮುಸ್ಲಿಂ ಸಮುದಾಯವೇ ಈ ಪ್ರಕ್ರಿಯೆಯಲ್ಲಿ ಮುಂಚೂಣಿಯಲ್ಲಿದ್ದು, ಸಹೃದಯಿಗಳಲ್ಲಿಗೆ ಮುಸ್ಲಿಂರ ಬದುಕಿನ ಕ್ರಮ ಹಾಗೂ ಧರ್ಮದ ಬಗೆ ಬಗೆಯ ಆಯಾಮಗಳನ್ನು ಬೆರಗುಗಣ್ಣಿನಿಂದ ನೋಡತೊಡಗಿದರು. ಮುಸ್ಲಿಂ ಮತ್ತು ಹಿಂದೂಗಳ ಸಂವೇದನೆಯ ಹಲವು ವಿಭಿನ್ನ ನೆಲೆ ಬೆಲೆಯನ್ನು ತೋರಿಸುವ ನಿಟಿನಲ್ಲಿ ಭಿನ್ನ ಭಿನ್ನ ಸಂಸ್ಕೃತಿಯನ್ನು ಸಾಹಿತ್ಯ ನಿಲುವುಗಳೇ ಮುಸ್ಲಿಂ ಸಂವೇದನೆಯ ಸಂಕೀರ್ಣತೆಗೂ ಕಾರಣವಾಗಿರುವುದು ಕುತೂಹಲದ ವಿಷಯವಾಗಿದೆ.

ಬೊಳುದಾರರ ಬೃಹತ್ ಕಾದಂಬರಿಯಿಂದ "ಸ್ವಾತಂತ್ರ್ಯದ ಓಟ" ಎಂಬ ವಿಮರ್ಶಾತ್ಮಕ ಅಧ್ಯಯನವನ್ನು ಸಂಶೋಧನಾ ನಿಬಂಧದ ಅಧ್ಯಯನದ ವಿಷಯವಾಗಿದ್ದು,

ದಲಿತ ಬಂಡಾಯ ಸಾಹಿತ್ಯದಲ್ಲಿ ಅಭಿವ್ಯಕ್ತಿ ಹೇಗೆ ಮುಖ್ಯವಾಗಿತ್ತೋ ಹಾಗೆ ಮುಸ್ಲಿಂ ಸಂವೇದನೆ ಮತ್ತು ಅಭಿವ್ಯಕ್ತಿ ಕೂಡ ವಿಶಿಷ್ಟತೆಯಿಂದ ಕೂಡಿದ್ದಾಗಿದೆ. ಮುಸ್ಲಿಂ ಸಮುದಾಯದ ಕುರಿತಾಗಿರುವ ಕುತೂಹಲ ಹಾಗೂ ಪೂರ್ವಾಗ್ರಹಗಳು ಮುಖ್ಯವಾಹಿನಿಯಲ್ಲಿ ಗುರುತಿಸುವಲ್ಲಿನ ಗೊಂದಲಗಳು ಅವರ ಬಗೆಗೆ ತಾಳುವ ಪರಕೀಯ ಭಾವನೆ, ಧರ್ಮದ ಆಧಾರದ ಮೇಲೆಯೇ ಎಲ್ಲವನ್ನು ನಿರ್ಧರಿಸುವ ಮನೋಸ್ಥಿತಿ, ಅವರ ಬದುಕಿನ ನೈಜ ಸ್ಥಿತಿಗತಿಯನ್ನು ಮರೆಮಾಚಿದೆ. ಇಂತಹ ಸಂಕೀರ್ಣ ಪರದೆಗಳನ್ನು ಪಕ್ಕಕ್ಕೇ ಸರಿಸಿ ಅವರ ಬದುಕನ್ನು ಮನುಷ್ಯ ಸಹಜ ನೆಲೆಯಿಂದ ನೋಡುವ ವಿಶಾಲ ಸಂವೇದನೆಯು ಬೊಳುವಾರರ ಸಾಹಿತ್ಯದಲ್ಲಿ ಸಹಜವಾಗಿ ತೆರೆದುಕೊಂಡಿದೆ. ಬಡತನ, ವರ್ಗತಾರತಮ್ಯ ಮತ್ತು ಧಾರ್ಮಿಕ ಮೌಢ್ಯಗಳನ್ನು ಮಾನವ ಸಹಜವೆಂಬ ನೆಲೆಯಲ್ಲಿ ವಿವೇಚಿಸಲಾಗಿದೆ.

ಮನುಷ್ಯನಿಗಾಗಿ ಧರ್ಮವೇ ಹೊರತು ಧರ್ಮಕ್ಕಾಗಿ ಮನುಷ್ಯನಲ್ಲವೆಂಬ ನಿಲುವು ಅನೇಕ ಬಾರಿ ಹುಸಿಯಾಗುತ್ತವೆ. ಲೇಖಕರ ಬೃಹತ್ ಕಾದಂಬರಿಯಲ್ಲಿ ಧರ್ಮವು ವೈಯುಕ್ತಿಕವಾದದೆಂದು ಪ್ರತಿಪಾದಿಸಲಾಗಿದೆ. ಹೀಗಾಗಿ ಎಲ್ಲ ಧರ್ಮದ ಆಶಯವು ಮಾನವನ ಉದ್ದಾರವನ್ನು ಬಯಸುತ್ತದೆ. ಮುಸ್ಲಿಂರ ಬಗೆಗಿನ ಪೂರ್ವಾಗ್ರಹ ಹಾಗೂ ಧರ್ಮದ ಆಧಾರದಲ್ಲಿ ಭಿನ್ನವಾಗಿ ಕಾಣುವ ಪರಿಯನ್ನು ಕಾದಂಬರಿಕರರು ಸ್ಪಷ್ಟವಾಗಿ ಉಲ್ಲೇಖಿಸುತ್ತಾರೆ. ಕೃತಿಯಲ್ಲಿ ಪರಕೀಯ ಭಾವನೆ ಮತ್ತು ಗೊಂದಲಗಳು ಈ ಸಮುದಾಯದಲ್ಲಿ ಮನೆ ಮಾಡಿಕೊಂಡಿರುವ ಮೌಢ್ಯತೆ, ಅನಕ್ಷರತೆ, ಮರೆಮಾಚಿದಂತೆ ಉಳಿದುಕೊಂಡು ಬಂದಿರುವ ನಿರುದ್ಯೋಗ ಮತ್ತು ಬಡತನ ಇವುಗಳ ಕುರಿತಂತೆ ಮಾತನ್ನಾಡುವುದು ಮುಸ್ಲಿಂ ಲೇಖಕರಾದ ಬೊಳುವಾರರಿಗೆ ಸವಾಲಾಗಿ ಪರಿಣಮಿಸಿದೆ. ದಲಿತರು ಮತ್ತು ಅಸ್ಪೃಶ್ಯರ ಬದುಕಿಗೆ ಸಮಾನವಾದ ಆರ್ಥಿಕ ಸ್ಥಿತಿಗಳನ್ನು ಮುಸ್ಲಿಂ ಸಮುದಾಯದಲ್ಲಿ ಕಾಣಬಹುದಾಗಿದೆ. ಲೇಖಕರು ಕಾದಂಬರಿಯಲ್ಲಿ ಹಿಂದೂ, ಮುಸ್ಲಿಂ, ಮಹಿಳಾ ಬದುಕಿನ ಚಿತ್ರಣವನ್ನು ಅಪಾರವಾದ ಕಾಳಜಿಯಲ್ಲಿ ತೋರಿಸಿರುವುದನ್ನು ಸ್ಪಷ್ಟಪಡಿಸಬಹುದು.

ಕಾದಂಬರಿಯಲ್ಲಿ ಹಿಂದೂ ಮತ್ತು ಮುಸ್ಲಿಂ, ಸ್ತ್ರೀ ಸಂವೇದನೆಯ ಸ್ವರೂಪವನ್ನು ಕಾಯ್ದುಕೊಂಡ ಕಲಾತ್ಮಕ ವಿಚಾರವನ್ನು ಈ ಬಗೆಯ ಸಂಶೋಧನೆಯು ಸೂಕ್ಷ್ಮವಾಗಿ ವಿಶ್ಲೇಷಿಸಲು ಸಾಧ್ಯವಾಗುತ್ತದೆ. ಕಾದಂಬರಿಯಲ್ಲಿ ಬೊಳುವಾರರು ಹಿಂದೂ ಮತ್ತು ಮುಸ್ಲಿಂ ಸ್ತ್ರೀಯರ ಬದುಕು ಮತ್ತು ಗಡಿ ಪ್ರದೇಶಗಳ ಜೀವನದ ಸ್ಥಿತಿಗತಿಗಳ ಚಿತ್ರಣವನ್ನು ವಿಭಿನ್ನ ನೆಲೆಯಲ್ಲಿ ಪುರುಷರ ಸಹಕಾರದೊಂದಿಗೆ ಸಮಾಜದಲ್ಲಿ ನೊಂದ ಹಲವು ಬವಣೆಗಳನ್ನು ಅನಾವರಣಗೊಳಿಸುವ ಕಾರಣದಿಂದ ಬೃಹತ್ ಕಾದಂಬರಿಯಾದ 'ಸ್ವಾತಂತ್ರ್ಯದ ಓಟ' ಎಂಬ ಕಾದಂಬರಿ ರಚಿಸಿದ್ದಾರೆ. ಈ ವಿಷಯವನ್ನು ಕುರಿತು ವಿಮರ್ಶಾತ್ಮಕವಾಗಿ, ಪರಿಶೀಲನೆ ಮತ್ತು

ಸಂಶೋಧನೆಯು ಇತ್ತೀಚಿನ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಕುರಿತು ಅಧ್ಯಯನಕ್ಕೆ ಪೂರಕವಾದುದೆಂದು ಭಾವಿಸಿ, ಈ ಸಂಪ್ರಬಂಧಕ್ಕೇ ಸೂಕ್ತವೆನ್ನಿಸಿ, ಅಧ್ಯಾಯನದ ಕ್ರಮವನ್ನು ಮೊದಲಿಗೆ ಅಧ್ಯಾಯ, ಒಂದರಲ್ಲಿ, ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ. ಈ ಅಧ್ಯಾಯನದಲ್ಲಿ ಬೊಳುವಾರರ ದೇಶದ ಗಡಿ ಪ್ರದೇಶದಿಂದ ಕಾದಂಬರಿಯಲ್ಲಿ ಕಥೆಯನ್ನು ಪ್ರಾರಂಭಿಸಿ ಆ ಒಳತಿರುಳಲ್ಲಿ ಸಂಬಂಧಗಳು ಭಿನ್ನ ಭಿನ್ನ ನೆಲೆಯಲ್ಲಿ ಸ್ತ್ರೀ-ಪುರುಷರ ಅಂತಃಕರಣದ ಗೊಂದಲತೆಯನ್ನು. ಧರ್ಮ ಧರ್ಮಗಳ ಆಚಾರ ವಿಚಾರಗಳನ್ನು ಅರುಹು-ಕುರುಹುಗಳನ್ನು ತನ್ನ ಬರಹಗಳ ಮುಖಾಂತರ ಓದುಗರರಿಗೆ ಮನಮುಟ್ಟಿಸುವ ನಿಟ್ಟಿನಲ್ಲಿ ಕಾದಂಬರಿಯು ಹೆಣೆಯಲ್ಪಡುತ್ತದೆ. ಅಧ್ಯಾಯ ಒಂದರಲ್ಲಿ ೧) ಕಾದಂಬರಿಗಳ ಹುಟ್ಟು ಮತ್ತು ವಿಕಾಸ. ಕಾದಂಬರಿಗಳ ಮೂಲ ಮತ್ತು ಇತ್ತೀಚಿನ ಹಲವು ಕಾಲಘಟ್ಟದಲ್ಲಿ ಭಿನ್ನ ಭಿನ್ನವಾದ ಸ್ವರೂಪವನ್ನು ತನ್ನದೇ ಆದ ಪ್ರಕಾರವನ್ನು ಸಮಾಜದ ಮುಖ್ಯವಾಹಿನಿಗೆ ಅದರದೇ ಆದ ಅಸ್ತಿತ್ವವನ್ನು ತಿಳಿಸಲಾಗಿದೆ. ಬೊಳುವಾರು ಮಹಮದ್ ಕುಂಞ ಅವರ ಬದುಕು ಮತ್ತ ಬರೆಹ. ಕಾದಂಬರಿಯ ಲೇಖಕರಾದ ಬೊಳುವಾರು ಮಹಮದ್ ಕುಂಞೆರವರ ಜೀವನದ ಹಲವು ಸಾಧನೆಗಳನ್ನು ಮತ್ತು ಅವರ ಹುಟ್ಟಿನ ವಿವರವನ್ನು, ಅವರ ಚಿಂತನೆಯನ್ನು ಅಧ್ಯಾಯ ಎರಡರಲ್ಲಿ ೨) ಬೊಳುವಾರು ಅವರ ಕಾದಂಬರಿಯಲ್ಲಿ ಕಥಾವಸ್ತು, ಪಾತ್ರಗಳು. ಅವರ ಬೃಹತ್ ಕಾದಂಬರಿಯಾದ 'ಸ್ವಾತಂತ್ರ್ಯದ ಓಟ' ಈ ಕೃತಿಯಲ್ಲಿ ಹಲವು ಪಾತ್ರಗಳ ಮೂಲಕ ಸಂದರ್ಭಕ್ಕೆ ಅನ್ವಯಿಸುವಂತೆ ಪಾತ್ರಗಳನ್ನೇ ಕೇಂದ್ರವಾಗಿ ಕಾದಂಬರಿಯ ಹೃದಯ ಭಾಗವಾಗಿ ಕಥೆಯನ್ನು ವಿಭಿನ್ನ ನೆಲೆಗಳ ಮುಖಾಂತರ ಕಥಾವಸ್ತು ಮತ್ತು ಪಾತ್ರಗಳನ್ನು 'ಸ್ವಾತಂತ್ರ್ಯದ ಓಟ' ಈ ಕೃತಿಗೆ ಜೀವ ತುಂಬಿರುವುದನ್ನು ಅರ್ಧಯನಕ್ಕೆ ಒಳಪಡಿಸಲಾಗಿದೆ. ೨) ಕಾದಂಬರಿಯಲ್ಲಿ ಸಾಮಾಜಿಕ ಸ್ಥಿತ್ಯಂತರಗಳು, ಸಮಾಜದ ಒಳ ಮತ್ತು ಹೊರ ಘಟನಾವಳಿಗಳನ್ನು ಹಲವು ಸಾಮಾಜಿಕ ಸಮಸ್ಯೆಗಳನ್ನು ಅಲ್ಲಿ ಬರುವಂತಹ ಆಚಾರ-ವಿಚಾರ, ಸಂಪ್ರದಾಯ-ಸಂಸ್ಕೃತಿ, ಬದುಕಿನ ಚಿತ್ರಣವನ್ನು ಕಟ್ಟಿರುವ ಹಲವು ಬದಲಾವಣೆಯ ಸಂಘರ್ಷವನ್ನು, ನಡುವಳಿಕೆಗಳನ್ನು ಉಳ್ಳವರು, ಇಲ್ಲದವರ ಬವಣೆಗಳನ್ನು ಈ ಅಧ್ಯಯನದಲ್ಲಿ ಅವಲೋಕಿಸಲಾಗಿದೆ. ಅಧ್ಯಾಯ ನಾಲ್ಕರಲ್ಲಿ ಕಾದಂಬರಿಯಲ್ಲಿ ಕಂಡು ಬರುವ ಭಿನ್ನ ನೆಲೆಗಳು ಈ ಅಧ್ಯಾಯನದಲ್ಲಿ ಪ್ರಾರಂಭದಲ್ಲಿ ಬರುವಂತಹ ಮಹಿಳೆಯರಿಂದ ಹಿಡಿದು ಕಾದಂಬರಿಯ ಕೊನೆಯ ಭಾಗದವರೆಗೂ ಮಹಿಳಾ ಪ್ರಜ್ಞೆ ಸರಪಳಿಯಂತೆ ಸಂದರ್ಭಕ್ಕೆ ಅನ್ವಯಿಸುವಂತೆ ಹಲವು ವಿಚಾರವನ್ನು ವಿಸ್ತರಿಸಲಾಗಿದೆ. ವೈಯುಕ್ತಿಕ ಮತ್ತು ಸಾಮಾಜಿಕ ನೆಲೆಗಳನ್ನು ವ್ಯಕ್ತಿಗತವಾಗಿ ಸಮಾಜವನ್ನು ನೋಡುವ ಭಿನ್ನ ಚಿಂತನೆಗಳನ್ನು ಕಾಣಲಾಗಿದೆ. ಧರ್ಮಾತೀತ ನೆಲೆಯಲ್ಲಿ ಪ್ರತಿಪಾದಿತವಾಗುವ ಮೌಲ್ಯಗಳೆಂದರೆ ಹಿಂದೂ-ಮುಸ್ಲಿಂ ನಡುವಿನ ನಡವಳಿಕೆಯ ಹಾವ-ಭಾವಗಳನ್ನು ಅಂತಃಕರಣತೆಯ ಮೀರಿ ಧರ್ಮ ಎಂಬ

ಸಂಕೋಲೆಯನು ವಿರೋಧಿಸಿ ಧರ್ಮ-ಧರ್ಮಗಳ ನಡುವೆ ಸಂಬಂಧಗಳನ್ನು ಬೆಸೆಯುವ ಹೆಣದಾಟಗಳನ್ನು, ಬದುಕಿನ ಸ್ವಾಭಿಮಾನತ್ವವನ್ನು ಆಧುನಿಕ ಚಿಂತನೆಯನ್ನು ಕಾದಂಬರಿಯಲ್ಲಿ ಕೆಲವು ಪಾತ್ರಗಳು ತಕ್ಕಡಿಯಲ್ಲಿ ಸರಿದೂಗುವಂತೆ ತನ್ನದೇ ಆದ ಅಸ್ತಿತ್ವವನ್ನು ಧರ್ಮಾತೀತ ನೆಲೆಯಲ್ಲಿ ನಿರ್ಗಳತೆ, ಮತ್ತು ನಿರ್ಭಯತೆಯಿಂದ ಅರಿವನ್ನು ಮೂಡಿಸುವ ನಿಟ್ಟಿನಲ್ಲಿ ಕಾದಂಬರಿಯ ತಿರಳಲ್ಲಿ ಅಡಕಗೊಂಡಿದೆ. ಹಾಗೆ ಆರೋಗ್ಯ, ಶಿಕ್ಷಣ, ವರ್ತಮಾನದ ಸೆಲೆಗಳು ಕೂಡ ಒಂದು ಮುತ್ತು ಪಾಡಿಯ ಎಂಬ ಗ್ರಾಮದ ಆಸು-ಪಾಸಿನಲ್ಲಿ ಹಲವು ಘಟನಾವಳಿಗಳ ಮೂಲಕ ಕಾದಂಬರಿಯಲ್ಲಿ ವಿಶೇಷವಾದ ಕಾಳಜಿಯನ್ನು ಲೇಖಕರು ಮನಮುಟ್ಟಿರುವುದನ್ನು ಕಾಣುತ್ತೇವೆ.

ಒಟ್ಟಾರೆ ಕಾದಂಬರಿಯಲ್ಲಿ ಸ್ವಾತಂತ್ರ್ಯದ ನಂತರ ನಡೆದಂತಹ ಸನ್ನಿವೇಶಗಳನ್ನು ಲೇಖಕರು ತಮ್ಮ ಅರಿವಿಗೆ ಚಿಂತನಾಪೂರಕವಾಗಿ ಹೆಣೆಯಲ್ಪಟ್ಟ ತಮ್ಮ ಬರಹಗಳ ಬೃಹತ್ ಕಾದಂಬರಿಯಿಂದ 'ಸ್ವಾತಂತ್ರ್ಯದ ಓಟ'ದಲ್ಲಿ ಈ ಮೇಲಿನ ವಿಚಾರಗಳಂತೆ ಸಮಾಜದ ಉಳಿವಿಗಾಗಿ ಧರ್ಮ-ಧರ್ಮಗಳ ನಡುವಿನ ಸಂಬಂಧಗಳನ್ನು ಬೆಸೆಯುವ ನಿಟ್ಟಿನಲ್ಲಿ ಉರ್ದು ಮಿಶ್ರಿತ ಕನ್ನಡವನ್ನು ಅಧ್ಯಾಯ ಐದರಲ್ಲಿ ಲೇಖಕ ಬೊಳುವಾರರ ಕಾದಂಬರಿಯಾದ 'ಸ್ವಾತಂತ್ರ್ಯದ ಓಟ'ದಲ್ಲಿ ಅಭಿವ್ಯಕ್ತಿಸಿರುವುದನ್ನು ಕಾಣಲಾಗಿದೆ.

ಅಧ್ಯಾಯ – ೨

ಕಾದಂಬರಿಗಳ ಹುಟ್ಟು ಮತ್ತು ವಿಕಾಸ

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಕಾವ್ಯ, ನಾಟಕ, ಕಥೆ, ಈ ಸಾಹಿತ್ಯ ಪ್ರಕಾರಗಳಂತೆ ಕಾದಂಬರಿಯೂ ಕೂಡ ಇಂಗ್ಲೀಷ ಸಾಹಿತ್ಯದ ಪ್ರಭಾವ ಬೀಳುವ ಮೊದಲೇ ಕಾದಂಬರಿ ಎನ್ನಬಹುದಾದ ಕಥಾಸಾಹಿತ್ಯಗಳು ಪ್ರಮುಖವಾಗಿ ಕಂಡುಬರುತ್ತದೆ. ಅತೀ ಸರಳ ರೂಪದ ಕಾದಂಬರಿಗಳಲ್ಲಿ ಘಟನೆಗಳೇ ಜೀವಾಳಗಳಾಗಿವೆ. ಕಾದಂಬರಿ ಕಥೆಯನ್ನು ಹೇಳುತ್ತದೆ ಎಂದರೆ ಕಥೆ ಹೇಳಲು ಅಗತ್ಯವಾದ ಸಾಧನಗಳು ಅದಕ್ಕೇ ಬೇಕು. ಮೊದಲು ಅದರಲ್ಲಿ ಘಟನೆಗಳು ಇರಬೇಕು. ಎರಡನೇಯದಾಗಿ ಅದರಲ್ಲಿ ಪಾತ್ರಗಳಿರಬೇಕು. ಘಟನೆಗಳ ಸರಪಳಿಯನ್ನು ಕಥೆ, ಕಾದಂಬರಿಯಾಗಿ ಸ್ಥಳಾಂತರಿಸಿ ಹೊಂದಿರುವುದು ಸ್ಪಷ್ಟವಾಗುತ್ತದೆ.

ಕಾದಂಬರಿಯ ಪ್ರಕಾರವು ಮೊದ ಮೊದಲು ಪಾಶ್ಚಾತ್ಯರಿಂದ ಕಂಡುಬಂದಿದ್ದು. ಕನ್ನಡ ಸಾಹಿತ್ಯ ಚರಿತ್ರೆಕಾರರ ಅರಿವಿಗೆ ಗಾಢವಾಗಿ ಅನ್ಯ ಭಾಷೆಗಳ ಕಾದಂಬರಿಯ ರೂಪು ರೇಷೆಗಳನ್ನು ತಿಳಿದು ಆ ಪ್ರಕಾರಗಳನ್ನು ಮನಗಾಣಿಸಿಕೊಂಡು ಹಲವು ಸಾಹಿತ್ಯಗಳ ಪ್ರಭಾವಕ್ಕೂ ಒಳಗಾಗಿ ಕಾದಂಬರಿಯ ಪ್ರಕಾರವನ್ನು ಕನ್ನಡ ಸಾಹಿತ್ಯದಲ್ಲಿ ಸರಳವಾಗಿ ಜನ ಸಾಮಾನ್ಯರಿಗೆ ಅರ್ಥೈಸುವ ನಿಟ್ಟಿನಲ್ಲಿ ಕಾದಂಬರಿಗಳ ಬರೆಯಲಾರಂಭಿಸಿದರು. ಪಾಶ್ಚಾತ್ಯರ ಪ್ರಭಾವಕ್ಕೆ ಒಳಗಾದ ಕೆಲವು ಸಾಹಿತಿಗಳು ಹಲವು ಅನ್ಯ ಭಾಷಾ ಸಾಹಿತಿಗಳ ಭಿನ್ನ ಭಿನ್ನ ವಾಕ್ಯಗಳನ್ನು ಕಾದಂಬರಿಯ ಪೂರ್ವ ಜೀವವೆಂದು ತಿಳಿಯುವ ಅಂಶಗಳ "ಜೇಮ್ಸ್ ಜಾಯ್ಸ್ ಅವರ ಕಾದಂಬರಿ 'ಯುಲಿಸೀಸ್' ಡಬ್ಬಿನ್ ನಗರದಲ್ಲಿ ಒಬ್ಬಾತನ ಜೀವನದಲ್ಲಿ ೨೪ ಗಂಟೆಗಳ ಜೀವನದ ಯಥಾವತ್ತಾದ ಚಿತ್ರವನ್ನು ಅವರ ಮಹಾ ಕೃತಿಯ ಹಂದರಲ್ಲಿ ಉಲ್ಲೇಖಿಸಿದ್ದಾರೆ"[೧] ಈ ಸ್ವರೂಪವನ್ನು ಗಮನಿಸಿದ್ದರೆ "ಎಡ್ವಿನ್ ಮೂರ್ ಈತ ಸವಿಸ್ತಾರವಾಗಿ He does So because the maker a statement and life does not"[೨] ಈ ವಿಭಿನ್ನ ಚಿಂತನೆಯಲ್ಲಿ ಮೊತ್ತೊಬ್ಬ ಕಾದಂಬರಿಯ ರೂಪಿಸುವ ಬಗೆಗೆ ಹೇಳುವುದು ಸ್ಪಷ್ಟ ರೂಪವಿಲ್ಲದ, ಸ್ವಲ್ಪವಾದರು ಸಂಬದ್ಧತೆ ಇಲ್ಲವೇ ಕ್ರಮ ರಹಿತವಾದ ಕಾದಂಬರಿಯು ಯೋಜನೆಯಾದೂ ಶಿಸ್ತು ನಿಷ್ಠಪಾಲನೆಯಿಂದ ಕಾದಂಬರಿಗೆ ಉಸಿರು ಕೊಡಬೇಕಾಗುತ್ತದೆ."[೩] ಪ್ರತಿಷ್ಠ ಕಾದಂಬರಿಕಾರನಾದ "ಗೋಲ್ಡ್‌ಸ್ಮಿತ್ ಬರೆದುದ್ದು ಒಂದೇ ಕಾದಂಬರಿ 'ದಿ ವಿಕಾರ್ ಆಫ್ ವೇಕ್ ಫೀಲ್ಸ್' ಈ ಕಾದಂಬರಿಯಲ್ಲಿ ನೂರಾರು ದೋಷಗಳನ್ನು ಗುರುತಿಸುತ್ತಾರೆ."[೪] "ಡಾ. ಪ್ರೀಮ್ ರೋಸ್ ರವರು ಕಾದಂಬರಿ ಬಗೆಗೆ ಉದಾಹರಿಸುವುದೆಂದರೆ ಮತಾಧಿಕಾರಿ ತನ್ನ ಮೊದಲನೆ ಹೆಂಡತಿ ತೀರಿಕೊಂಡರು ಮತ್ತೆ ಮದುವೆಯಾಗಬಾರದು ಎಂದು ಕಾದಂಬರಿ

ಬರಹದ ಚಿಂತನೆಯನ್ನು ಸೂಚಿಸುವ ಅಭಿಪ್ರಾಯ". ಇಂಗ್ಲೀಷ್ ಸಾಹಿತಯದ ಪ್ರಭಾವ ಬೀಳುವ ಮೊದಲೇ 'ಕಾದಂಬರಿ' ಎನ್ನಬಹುದಾದ ಮೂರು ಕೃತಿಗಳು ರಚಿತವಾದವು ಎಂದು ಸಾಹಿತಯ್ದ ಚರಿತ್ರೆಕಾರರು ಹೇಳುತ್ತಾರೆ. ಯಾದವನ 'ಕಲಾವತೀ ಪರಿಣಯ' (ಸುಮಾರು ೧೮೧೫) ಮುಮ್ಮಡಿ ಕೃಷ್ಣರಾಜರ 'ಸೌಗಂಧಿಕಾ ಪರಿಣಯ' (೧೦೨೨) ಮತ್ತು ಕೆಂಪುನಾರಾಯಣ 'ಮುದ್ರಾ ಮಂಜೂಷ' (೧೮೨೩). ಮೊದಲ ಎರಡು ಅದ್ಭುತ ರಮ್ಯ ಕಥೆಗಳು, ದೇವತೆಗಳ ಮಾಟ ಮಂತ್ರಗಳ ಪ್ರವೇಶ ಉಂಟು. 'ಕಲಾವತೀ ಪರಿಣಯ'ದಲ್ಲಿ ಒಳ್ಳೆಯ ಕಥಾನಕವಿದೆ. ಪಾತ್ರಗಳ ನಿರೂಪಣೆಯಲ್ಲಿ ಸಹಜತೆಯೂ ಇಲ್ಲದಿಲ್ಲ. 'ಸೌಗಂಧಿಕಾ ಪರಿಣಯದ ಭಾಷೆ ಹೊಸಗನ್ನಡಕ್ಕೇ ಹತ್ತಿರವಿದೆ. 'ಮುದ್ರಾಮಝೂಷ' ಸಂಸ್ಕೃತ 'ಮುದ್ರರಾಕ್ಷಸ' ನಾಟಕದ ಆಧಾರದ ಮೇಲೆ ರಚಿತವಾದಗಿದೆ. ನೇರ ಕಥಾನಕ ಇದರಲ್ಲಿ ಕಾಣುತ್ತದೆ. ೧೮೪೨ರಲ್ಲಿ ಜಾನ್ ಬನ್ಯನ್‌ನ 'ದಿ ಪಿಲ್ ಗ್ರಿಮ್ಸ್ ಪ್ರೋಗ್ರೆಸ್ ೧೮೫೭ರಲ್ಲಿ ಡ್ಯಾನಿಯಲ್ ಡಪೋನ್ ರಾಬಿನ್‌ಸನ್ ಕ್ರೂಸೊ' ಕನ್ನಡಕ್ಕೇ ಅನುಪಾದವಾದವು. 'ರಾಬಿನ್‌ಸನ್ ಕ್ರೂಸೊ' ಬಹು ಸಣ್ಣ ಸಣ್ಣ ವಿವರಗಳಿಗೂ ಗಮನಗೊಡುವ ವಿಶಿಷ್ಟ ವಾಸ್ತವಿಕ ನಿರೂಪಣೆಯನ್ನು ಕನ್ನಡಕ್ಕೇ ಪರಿಚಯ ಮಾಡಿಕೊಟ್ಟಿತು. ಇತರ ಭಾಷೆಗಳಿಂದ ಅನುಪಾದವಾದ ಪ್ರಥಮ ಕಾದಂಬರಿಗಳು ಇವು : ಮರಾಠಿಯಿಂದ ಪದಮಂಜಿಯವರ 'ಯಮುನಾ ಪರ್ಯವನ' (೧೮೬೯). ಬಂಗಾಲಿಯಿಂದ ಬಂಕಿಮಚಂದ್ರರ 'ದುರ್ಗೇಶ ನಂದಿನಿ' (೧೮೮೫), ತೆಲುಗಿನಿಂದ ವೀರೇಶಲಿಂಗಂ ಪಂತುಲು ಅವರ 'ವಿವೇಕ ಚಂದ್ರಿಕೆ' (೧೮೯೫), ಮಲಯಾಳಿಯಿಂದ ಮುಳಿಯಿಲ್ ಅವರ 'ಸುಕುಮಾರಿ' (೧೯೯) 'ದುರ್ಗೇಶನಂದಿನಿ'ಗೆ ಬರೆದ ಇಂಗ್ಲೀಷ್ ಪೀಠಿಕೆಯಲ್ಲಿ ವೆಂಕಟಾಚಾರ್ಯರು 'ನಾವೆಲ್' ಪದವನ್ನು ಬಳಸಿದರು. ಕಾದಂಬರಿ 'ಸಮಾಜದ ಹಾಗೂ ಸಮಾಜದ ಅಂಗಭೂತನಾದ ಮನುಷ್ಯನ ಚರಿತ್ರೆ ನಡವಳಿಕೆಗಳಲ್ಲಿ ಕಂಡುಬರುವ ದುರ್ನಡತೆ ಮುಂತಾದವುಗಳನ್ನು ಉದಾಹರಣೆಗಳೊಡನೆ ಚಿತ್ರಿಸಿ ಪ್ರತಿಯೊಬ್ಬನೂ ಸದ್ಭಾವದಿಂದ ನಡೆದುಕೊಳ್ಳುವುದನ್ನು ತೋರ್ಪಡಿಸಿದ್ದಕ್ಕಾಗಿ ಎಂದರು. ೧೮೭೮ರ ಸುಮಾರಿಗೆ ಪ್ರಕಟವಾದ ಗಂಗಾಧರ ಮಡಿಮಳೇಶ್ವರ ತುರಮರಿಯವರ ಬಾಣ. ಕಾದಂಬರಿಯ ಶೈಲಿ ಹೊಸಗನ್ನಡಕ್ಕೇ ಸಮೀಪಿಸಿದೆ.

೧೯೦೨ರಲ್ಲಿ ಪ್ರಕಟವಾದ ಲಕ್ಷ್ಮಣರಾವ್ ಗದಗಕರರ 'ಸೂರ್ಯಕಾಂತ' ಕನ್ನಡದ ಮೊದಲನೆಯ ಸ್ವತಂತ್ರ ಕಾದಂಬರಿ ಎನ್ನಬಹುದು. ಇದು ಐತಿಹಾಸಿಕ ಕಾದಂಬರಿ. ಗುಬ್ಬಿ ಮೂರುಗಾರಾದ್ಯರ 'ಶೃಂಗಾರ ಚಾತುರ್ಯೋಲ್ಲಾಸಿನಿ' (೧೯೬– ಗಳಗನಾಥರ ಪ್ರಬುದ್ಧ

ನಯಿನೆ'(೧೮೯೮) ಇವುಗಳ ನಂತರ ಬಂದ ಗುಲ್ವಾಡಿ ವೆಂಕಟರಾಯರ 'ಇಂದಿರಾಬಾಯಿ"(೧೮೯೯) ಗಮನಿಸಬೇಕಾದ ಕೃತಿ. ಇದರ ಇನ್ನೊಂದು ಶೀರ್ಷಿಕೆ 'ಸದ್ಧರ್ಮ ವಿಜಯವು', ಇದೇ ಕೃತಿಯು ನೀತಿಪ್ರಧಾನ ಎಂಬುದನ್ನು ತೋರಿಸುತ್ತದೆ. ಪರಂಪರಾಗತ ನಂಬಿಕೆ ಕಟ್ಟಲೆಗಳು, ಇವುಗಳ ಕೋಟೆಯಂತಿರುವ ಧಾರ್ಮಿಕ ಮಠಗಳು ಇವನ್ನು ಬಯಲಿಗೆಳೆದು ಸುಧಾರಣೆಯ ಅಗತ್ಯವನ್ನು ಬೆರಳಿಟ್ಟು ತೋರಿಸುತ್ತದೆ. ಕಾದಂಬರಿಯಲ್ಲಿ ಕಾಮುಕನಾದ ಗಂಡನ ಕೈ ಹಿಡಿದು, ವಿಧವೆಯಾಗಿ ಹಲವು ಕಷ್ಟಗಳನ್ನನುಭವಿಸಿ ಮತ್ತೆ ಮದುವೆಯಾಗಿ ಸಮಾಜದಲ್ಲಿ ಕೋಲಾಹಲವೆಬ್ಬಿಸಿದ ಇಂದಿರಾ ಈ ಕಾದಂಬರಿಗೆ ಹೆಸರು ಕೊಟ್ಟಿದ್ದಾರೆ. ಇದರ ನಂತರ ಮುಖ್ಯವಾದ ಕಾದಂಬರಿ ಬೋಳಾರ ಬಾಬೂರಾಯರ 'ವಾಗ್ದೇವಿ'(೧೯೦೫). ಘಟನೆಗಳಿಂದ ತುಂಬಿದ ಕಥೆ ಕುತೂಹಲಕಾರಿಯಾಗಿ ವೇಗವಾಗಿ ಸಾಗುತ್ತದೆ. ಇಲ್ಲೂ ಮಠಗಳ ಹೊಲಸು ಜೀವನವನ್ನು ಹೊರಗೆಳೆಯುವ ಪ್ರಯತ್ನವಿದೆ. ಕನ್ನಡ ಕಾದಂಬರಿಗೆ ಇಲ್ಲಿ ಹಾಸ್ಯ ಕಾಲಿಟ್ಟಿತು ಎನ್ನಬಹುದು. ಪಾತ್ರಗಳ ನಿರೂಪಣೆಯಲ್ಲಿ ಲವಲವಿಕೆ ಇದೆ. ಕೆರೂರು ವಾಸುದೇವಾಚಾರ್ಯರ 'ಇಂದಿರೆ' (೧೯೦೮) ಆದರ್ಶ ಸ್ತ್ರೀಯ ಚಿತ್ರವನ್ನು ಸೂಚಿಸಲಾಗಿದೆ.

೧೮೨೩ರಲ್ಲಿ ಪ್ರಕಟವಾದ 'ಮುದ್ರಾಮಂಜೂಷ' ಪ್ರಥಮ ಐತಿಹಾಸಿಕ ಕಾದಂಬರಿ ಎನ್ನಬಹುದು. ೧೮೯೭ರಲ್ಲಿ ಪ್ರಕಟವಾದ ಎಂ.ವೆಂಕಟಕೃಷ್ಣಯ್ಯನವರ 'ಚೋರಗ್ರಹಣ ತಂತ್ರ' ಮೊದಲನೆಯ ಪತ್ತೇದಾರಿ ಕಾದಂಬರಿ, 'ಇಂದಿರಾಬಾಯಿ(೧೮೯೯) ಮೊದಲನೆಯ ಸ್ವತಂತ್ರ ಸಾಮಾಜಿಕ ಕಾದಂಬರಿ, ಗಳಗನಾಥರ 'ಕುಮುದಿನಿ' (೧೯೧೩) ಕರ್ನಾಟಕದ ಇತಿಹಾಸಕ್ಕೆ ಸಂಬಂಧಿಸಿದ ಮೊದಲನೆಯ ಕಾದಂಬರಿಗಳಾಗಿವೆ.

ಕಾದಂಬರಿಯ ರಚನೆ ಸಾಧ್ಯವಾಗುವುದು ಓದುಗರ ವೃತ್ತ ಸಾಕಷ್ಟು ಹಿರಿದಾಗಿದ್ದಾಗ. ಕಾವ್ಯದಂತೆ ಇದು ಒಬ್ಬರು ಓದಿ ನೂರು ಜನ ಕೇಳಿ ಸಂತೋಷಪಡಲು ಸಾಧ್ಯವಾಗುವ ರಚನೆಯಲ್ಲ. ಅಚ್ಚು ಕೂಟಗಳು, ಪುಸ್ತಕಗಳ ಸಾಗಾಣಿಕೆ-ಮಾರಾಟ ಇವುಗಳ ವ್ಯವಸ್ಥೆ ಬೆಳೆದು ಅಕ್ಷರಸ್ಥರ ಮತ್ತು ಬದಲು ವಿರಾಮವಿರುವವರ ಸಂಖ್ಯೆ ಸಾಕಷ್ಟು ಆದಾಗ, ಸಾಹಿತ್ಯದಲ್ಲಿ ತಮ್ಮ ಜೀವನವನ್ನು ಕಾಣುವ ಆಸಕ್ತಿ ಇರುವ ವರ್ಗ ಬೆಳೆದಾಗ ಕಾದಂಬರಿ-ಸಣ್ಣ ಕಥೆ ಬೆಳೆಯಬಲ್ಲವು. ಇಂತಹ ಸ್ಥಿತಿ ರೂಪಿತವಾದಾಗ ಓದುವವರ ಕುತೂಹಲವನ್ನು ತಣಿಸಿದವರು ಮುಖ್ಯವಾಗಿ ಇಬ್ಬರು - ಬಿ.ವೆಂಕಟಾಚಾರ್ಯರು ಮತ್ತು ವೆಂಕಟೇಶತಿರಕೋಕುಲಕರ್ಣಿ ಗಳಗನಾಥರು. ವೆಂಕಟಚಾರ್ಯರು ಈಶ್ವರಚಂದ್ರ ವಿದ್ಯಾಸಾಗರ, ಬಂಕಿಮಚಂದ್ರ, ರಮೇಶಚಂದ್ರ ದತ್ತ ಇವರ ಕೃತಿಗಳನ್ನು ಕನ್ನಡಕ್ಕೆ ತಂದರು. 'ದೇವೀ ಚೌಧುರಾಣಿ', 'ಆನಂದ ಮಠ', ವಿಷವೃಕ್ಷ' ಮೊದಲಾದ ಕಾದಂಬರಿಗಳು ಬಹು ಜನಪ್ರಿಯವಾದವು. ಬಂಕಿಮರು

ಚರಿತ್ರೆಯ ಆಧಾರದ ಮೇಲೆ ಕಾದಂಬರಿಗಳನ್ನು ಬರೆದರು. ವಿಧವಾ ವಿವಾಹ, ಸ್ತ್ರೀಯರ ವಿದ್ಯಾಭ್ಯಾಸ ಮೊದಲಾದ ಸಾಮಾಜಿಕ ಸಮಸ್ಯೆಗಳನ್ನು ಕಾದಂಬರಿಗಳಲ್ಲಿ ವಿಶ್ಲೇಷಿಸಿದರು. 'ಆನಂದ ಮಠ' ಕಾದಂಬರಿಯಲ್ಲಿ 'ವಂದೇ ಮಾತರಂ' ಹಾಡನ್ನು ಭಾರತಕ್ಕೆ ಕೊಟ್ಟವರು ಅವರು. ಸ್ವಾರಸ್ಯವಾಗಿ ಕಥೆಗಳನ್ನು ಹೇಳಬಲ್ಲರು. ಜೊತೆಗೇ, ಪಾತ್ರಗಳ ವಿಶ್ಲೇಷಣೆಯನ್ನೂ ಮಾಡಬಲ್ಲರು. ಅವರ ಕಾದಂಬರಿಗಳಲ್ಲಿ ಸಾಹಸ, ಅದ್ಭುತ ರಮ್ಯತೆ ಉಂಟು. 'ಚಾರಿತ್ರಿಕ' ಕಾದಂಬರಿಗಳಾದರೂ ಕ್ರಿಯೆಯ ಯುಗವನ್ನು ರಮ್ಯವಾಗಿ ಚಿತ್ರಿಸುತ್ತಾರೆ. ಆದರೂ ಕಾದಂಬರಿ ಸಾಮಾನ್ಯರ ಜೀವನ, ಸಾಮಾಜಿಕ ಜೀವನ ಇವುಗಳಿಗೆ ಸಮೀಪವಾಯಿತು. ವೆಂಕಟಾಚಾರ್ಯರ ಶೈಲಿ ಸಂಸ್ಕೃತ ಶಬ್ದಗಳು ತುಂಬಿ ಹೋದ, ಪುಸ್ತಕಗಳ ಶೈಲಿ, ಇದರಲ್ಲಿ ಸಾಕಷ್ಟು ಬಳುಕಿಲ್ಲ. ವೈವಿಧ್ಯವಿಲ್ಲ. ಗಳಗನಾಥರು ವಿಶೇಷವಾಗಿ ಮರಾಠಿಯಿಂದ ಹರಿನಾರಾಯಣ ಆಪ್ಟೆಯವರ ಕಾದಂಬರಿಗಳನ್ನು ಭಾಷಾಂತರ ಮಾಡಿದರು. ಹಲವು ಕಾದಂಬರಿಗಳಲ್ಲಿ ಮರಾಠಿಯಿಂದ ವಸ್ತುವನ್ನು ತೆಗೆದುಕೊಂಡು ತಮ್ಮ ನಿರೂಪಣೆಯನ್ನೆ ಕೊಟ್ಟರು. ವಿಜಯನಗರದ ಇತಿಹಾಸವನ್ನು ಕುರಿತ 'ಮಾಧವ ಕರುಣಾ ವಿಲಾಸ' (೧೯೨೩) ಇವರ ಸ್ವತಂತ್ರ ಕೃತಿ. ಇವರ ಎಲ್ಲ ಕಾದಂಬರಿಗಳೂ ಕ್ಷಾತ್ರ ತೇಜಸ್ಸನ್ನು ಉತ್ಸಾಹದಿಂದ ಚಿತ್ರಿಸುತ್ತವೆ. ದೇಶಾಭಿಮಾನದಿಂದ ತುಂಬಿ ತುಳುಕುತ್ತವೆ. ಇವರ ಭಾಷೆಯಲ್ಲು ವೈವಿಧ್ಯವಿಲ್ಲ, ಆದರೆ ವೆಂಕಟಾಚಾರ್ಯರ ಭಾಷೆಯಂತೆ ಗ್ರಂಥಸ್ಥಗಳಾಗಿಲ್ಲ.ಇಲ್ಲಿಂದಾಚೆ ಅನೇಕರು ಕಾದಂಬರಿಗಳನ್ನು ರಚಿಸಿದರು. ಬಾಲ ಸರಸ್ವತಿ, ಭೀ.ಪ.ಕಾಳೆ ಮೊದಲಾದವರ ಪತ್ತೇದಾರಿ ಕಾದಂಬರಿಗಳು ಜನಪ್ರಿಯತೆ ಹೊಂದಿರುವುದಾಗಿದೆ.

ಆಧುನಿಕ ಕನ್ನಡ ಸಾಹಿತ್ಯದ ಪ್ರಾರಂಭದಲ್ಲಿ ಕೃತಿರಚನೆ ಮಾಡಿದ ಮಹಿಳೆಯರಲ್ಲಿ ತಿರುಮಲಾಂಬ ಅವರು ಒಬ್ಬರು.

'ಇಂದಿರಾಬಾಯಿ'ಯ ನಂತರ ಸಾಹಿತ್ಯದ ದೃಷ್ಟಿಯಿಂದ ಕಾದಂಬರಿ ಎಂದು ಹೇಳಬಹುದಾದ ಮೊಟ್ಟ ಮೊದಲನೆಯ ಕೃತಿ ಎಂ.ಎಸ್.ಪುಟ್ಟಣ್ಣ (೧೮೫೪–೧೯೩೦)ನವರ 'ಮಾಡಿದ್ದುಣ್ಣೋ ಮಹರಾಯ' (೧೯೧೫), 'ಪುರಾಣ ಪ್ರಸಿದ್ಧರು ವ್ಯಾಕರಣದ ಸೂತ್ರ–ಗಳಾಗಿದ್ದಾರೆ, ಮನುಷ್ಯ ಸಾಮಾನ್ಯ ಸಿಕ್ಕುವ ಧೀರರು ಉದಾಹರಣೆಗಳಾಗಿದ್ದಾರೆ ಎಂದು ಮುನ್ನುಡಿಯಲ್ಲಿ ಹೇಳುವ ಪುಟ್ಟಣ್ಣನವರ ಉದ್ದೇಶ ಸ್ಪಷ್ಟವಾಗಿ ನೀತಿ ಬೋಧಿಸುತ್ತದೆ.

ವೆಂಕಟಾಚಾರ್ಯ, ಗಳಗನಾಥ, ಎಂ.ಎಸ್.ಪುಟ್ಟಣ್ಣ ಇವರಿಂದ ಪ್ರಾರಂಭದಲ್ಲಿಯೇ ಕನ್ನಡ ಕಾದಂಬರಿ ಮನರಂಜನೆಯ ಸಾಧನವಾಗದೆ ಜೀವನದಲ್ಲಿ ಗಂಭೀರವಾಗಿ ವೀಕ್ಷಿಸುವ ಕ್ರಿಯೆಯಾಗಿತ್ತು.

ಇಪ್ಪತ್ತನೆಯ ಶತಮಾನದ ನಾಲ್ಕನೆಯ ದಶಕದಿಂದ ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ಬೆಳೆ ಹುಲುಸಾಯಿತು. ೧೯೨೦ರಲ್ಲಿಯೇ ಶಿವರಾಮ ಕಾರಂತರ 'ದೇವದೂತರು' ಪ್ರಕಟವಾಗಿತ್ತು. ೧೯೩೩ರಲಲಿ ಬೆಟಗೇರಿ ಕೃಷ್ಣಶರ್ಮರ ('ಆನಂದ ಕಂದ'), 'ಸುದರ್ಶನ' ಕಾದಂಬರಿಯೂ ಶಿವರಾಮ ಕಾರಂತರ 'ಚೋಮನದುಡಿ'ಯೂ ಪ್ರಕಟವಾದವು. ೧೯೩೫ರಲ್ಲಿ ರಂ.ಶ್ರೀ ಮುಗಳಿಯವರ 'ಬಾಳುರಿ' ಅ.ನ.ಕೃಷ್ಣರಾಯರ 'ಜೀವನಯಾತ್ರೆ' ಮತ್ತು 'ಉದಯರಾಗ', 'ಶ್ರೀರಂಗ'ರ ವಿಶ್ವಾಮಿತ್ರ ಸೃಷ್ಟಿ', ೧೯೫೫ರಲ್ಲಿ ಆನಂದಕಂದರ 'ರಾಜಯೋಗಿ' ಮತ್ತು ಅಶಾಂತಿಪರ್ವ', ಗೋಕಾಕರ 'ಇಜ್ಜೋಡು', ಅ.ನ.ಕೃ ಅವರ 'ಸಂಧ್ಯಾರಾಗ', ಜಡಭರತರ 'ಧರ್ಮಸೆರೆ', ೧೯೩೬ರಲ್ಲಿ ಕುವೆಂಪು ಅವರ 'ಕಾನೂರು ಸುಬ್ಬಮ್ಮ ಹೆಗ್ಗಡತಿ', ಪ್ರಕಟವಾದವು. ಕನ್ನಡದಲ್ಲಿ ಕಾದಂಬರಿಯ ಯುಗ ಪ್ರಾರಂಭವಾದಂತಾಯಿತು.

೧೯೩೦ರಿಂದ ೧೯೪೫ರವರೆಗಿನ ಇಪ್ಪತ್ತೈದು ವರ್ಷಗಳ ಸುಮಾರು ಎಂಬತ್ತು (೮೦) ಕಾದಂಬರಿಗಳು ಪ್ರಕಟವಾದವು. ಇವನ್ನು ಬರೆದ ಕಾದಂಬರಿಕಾರರ ಸಂಖ್ಯೆ ಸುಮಾರು ೪೦ರ ಅವಧಿಯಲ್ಲಿ ಮೇಲೆ ಹೆಸರಿಸಿದ ಕಾದಂಬರಿಗಳಲ್ಲದೆ, ಶ್ರೀನಿವಾಸರ 'ಸುಬ್ಬಣ್ಣ' (ಇದನ್ನು ಕಿರು ಕಾದಂಬರಿ ಎನ್ನಬೇಕು) ದೇವುಡು ನರಸಿಂಹ ಶಾಸ್ತ್ರಿಗಳ 'ಅಂತರಂಗ', 'ಮಯೂರು', ಕಾರಂತರ 'ಮರಳಿ ಮಣ್ಣಿಗೆ', ಬೆಟ್ಟದ ಜೀವ', 'ಹೆತ್ತಳಾ ತಾಯಿ', ನಾ ಕಸ್ತೂರಿಯವರ 'ಚಕ್ರದೃಷ್ಟಿ', ವಿ.ಎಂ.ಇನಾಂದಾರರ 'ಎರಡು ಧ್ರುವ', ಈ ಎಲ್ಲಾ ಕಾದಂಬರಿಗಳು ಪ್ರಕಟವಾಗಿದ್ದವೆಂದರೆ ಸಂಖ್ಯೆಯಲ್ಲಿ ಮಿತವಾಗಿದ್ದರೂ ಗುಣದಲ್ಲಿ ಮೆಚ್ಚಬೇಕಾದ ಸೃಷ್ಟಿ ಈ ಇಪ್ಪತ್ತೈದು ವರ್ಷಗಳಲ್ಲಿ ಆಯಿತು ಎನ್ನಬಹುದಾಗಿದೆ.

ಕಾವ್ಯದಲ್ಲಿ ಬೇಂದ್ರೆ-ಕುವೆಂಪು ಅವರು ಪ್ರಭಾವ ಬೀರಿದಂತೆ ಕಾದಂಬರಿಯಲ್ಲಿ ಕಾರಂತ-ಅ.ನ.ಕೃ ಪ್ರಭಾವ ಬೀರಿದರು. ಈವರೆಗೆ ಕಾರಂತರು ಸುಮಾರು ೩೮ ಕಾದಂಬರಿಗಳನ್ನು ಬರೆದಿದ್ದಾರೆ. ಹೀಗಾಗಿಯೇ ಇವರನ್ನು 'ಕಡಲ ತೀರದ ಭಾಗರ್ವ' ಎಂದು ಕರೆಯಲಾಗಿದೆ. ಅಗಾದವಾದ ಜೀವನ ಶ್ರದ್ದೆ ಅವರದು. ನವೋದಯ ಯುಗದಲ್ಲಿಯೂ ಅತಿಭಾವುಕತೆಗೆ ಎಡೆಕೊಡದ ಕಾದಂಬರಿಕಾರರು ಅವರು. ಕಾದಂಬರಿಕಾರರಾಗಿ ಬರೆದರೆಂಬುದು ಅಚ್ಚರಿಯ ಸಂಗತಿ. ಮೂರು ತಲೆಮಾರುಗಳ ಜೀವನ ಇಲ್ಲಿ ನಿರೂಪಿತವಾಗುತ್ತದೆ. ಹಲವು ಕಾದಂಬರಿಗಳನ್ನು ಬರೆದು ತನ್ನ ಜೀವನದ ಸಂಧ್ಯೆಯಲ್ಲಿ ಬರೆದು ಹೆಮ್ಮೆಪಟ್ಟುಕೊಳ್ಳಬಹುದಾದ ಕಾದಂಬರಿಗಳನ್ನು ಕಾರಂತರು ತಮ್ಮ ಐದನೆಯ ಕಾದಂಬರಿಯಾಗಿ ಕೊಟ್ಟರು. ಕಾರಂತರ ಕಾದಂಬರಿಗಳೆಲ್ಲ ಗಟ್ಟಿಯಾದ ಅನುಭವದ ತಳಹದಿಯ ಮೇಲೆ ನಿಂತಿವೆ. ಅವರ ಬರಹದಲ್ಲಿ ಆವೇಶವಿಲ್ಲ. ಆದರ್ಶಗಳು

ಝುಗಮುಗಿಸುವಂತೆ ರಂಜಕವಾಗಿ ನಿರೂಪಿಸುವ ಹಂಬಲವಿಲ್ಲ. ಜೀವಂತವಾದ, ನಮ್ಮ ನಿಜವಾದ ಜಗತ್ತಿಗೆ ಸಮೀಪವಾದ ಜಗತ್ತನ್ನು ಸೃಷ್ಟಿಸುತ್ತಾರೆ.

ಕುವೆಂಪು ಅವರ 'ಕಾನೂರು ಸುಬ್ಬಮ್ಮಹೆಗ್ಗಡತಿ' ಒಂದು ಬೃಹತ್ ಕಾದಂಬರಿ. ಪ್ರಕಟವಾದ ನಂತರ ಎರಡು ದಶಕಗಳ ಕಾಲ ಉತ್ಸಾಹದ ಪ್ರಶಂಸೆಯನ್ನು ಪಡೆದು ಈಚೆಗೆ ತೀಕ್ಷ್ಣ ವಿಮರ್ಶೆಗೆ ಒಳಗಾದ ಕಾದಂಬರಿ. ಮಲೆನಾಡಿನ ನಿಸರ್ಗ, ಜನಜೀವನ ಇಲ್ಲಿ ಜೀವಂತವಾಗಿವೆ. ತ್ರಿವೇಣಿಯವರ 'ಬೆಕ್ಕಿನ ಕಣ್ಣು', 'ಶರಪಂಜರ' ಕಾದಂಬರಿಗಳಲ್ಲಿ ಮುಖ್ಯವಾಗಿ ಗಂಡು ಹೆಣ್ಣಿನ ಸಹಜೀವನ ಅವರ ಕಾದಂಬರಿಗಳ ವಸ್ತು. ಅಂತಃಕರಣದ ಹೊಂದಾಣಿಕೆಯ ಜೀವನದ ಶ್ರೀಮಂತಿಕೆಯನ್ನು ಮತ್ತೇ ಮತೇ ಚಿತ್ರಿಸುತ್ತಾರೆ. ವೃದ್ಧರಾಯರು ಕನ್ನಡ ಕಾದಂಬರಿಯಲ್ಲಿ ಅಪೂರ್ವ ವ್ಯಕ್ತಿಯಾಗಿದ್ದಾರೆ. ಲಂಕೇಶರ 'ಬಿರುಕು' ಕಾದಂಬರಿಯ ನಾಯಕ ಒಂದು ಪರಿಸರದಿಂದ ಇನ್ನೊಂದು ಪರಿಸರಕ್ಕೆ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಾನೆ.

ಎಂ.ಪಿ. ಸೀತಾರಾಮಯ್ಯನವರ 'ಮಾದನ ಮಗಳ', ಎಂ.ಆರ್.ಶ್ರೀನಿವಾಸ ಮೂರ್ತಿಯವರ 'ಮಹಾತ್ಯಾಗ', ಕಡಂಗೋಡ್ಲು ಶಂಕರಭಟ್ಟರ 'ದೇವತಾ ಮನುಷ್ಯ', ಚದುರಂಗ ರವರ 'ಹೇಮಂತ ಗಾನ', ಅನಂತನಾರಾಯಣರವರ 'ಅತ್ತಿಗೆ', ಮಿರ್ಜಿ ಅಣ್ಣಾರಾಯರವರ 'ನಿಸರ್ಗ', ಎಂ.ಆರ್.ಶ್ರೀಯವರ 'ರಂಗನ ಕನಸ್ಸಿನ ದಿನಗಳು', ಕಸ್ತೂರಿಯವರ 'ಗಾಳಿ ಗೋಪುರ', 'ಚಕ್ರ ದೃಷ್ಟಿ, ಶಂಖವಾದ್ಯ, ಗೃಹದಾರುಣ್ಯಕ, ಹೆಸರಿಸಬೇಕಾದ ಕಾದಂಬರಿಗಳು. ಅ.ನ.ಕೃರವರ 'ನಗ್ನಸತ್ಯ', 'ಮುಂಜಾವಿನಿಂದ ಮುಂಜಾವು', ಇಂತಹ ಸತ್ವಯುಕ್ತವಾದ ಕಾದಂಬರಿಗಳನ್ನು ರಚಿಸಿದ್ದಾರೆ. ಶ್ರೀ ಕೃಷ್ಣ ಆಲನಹಳ್ಳಿಯವರ 'ಕಾಡು', ಪರಸಂಗದ ಗೆಂಡೆತಿಮ್ಮ', ಬಿ.ವೈಕುಂಠರಾಜುರವರ 'ಅಂತ್ಯ' ಮತ್ತು 'ಆಕ್ರಮಣ', ಎಸ್.ಎಲ್.ಬೈರಪ್ಪರವರ 'ಗ್ರಹಣ', 'ವಂಶವೃಕ್ಷ', 'ದೂರಸರಿದರು', 'ಗೃಹಭಂಗ', 'ದಾಟು', 'ಪರ್ವ', ಹಾಗೆ ದಲಿತ ಬಂಡಾಯ ಕಾಲಘಟ್ಟಕ್ಕೆ ಬಂದರೆ ಕಥೆ, ಕಾದಂಬರಿಯ ಪ್ರಕಾರವನ್ನು ಅತ್ಯಂತ ಪರಿಣಾಮಕಾರಿಯಾಗಿ ಮಾಧ್ಯಮಗಳು ಎಷ್ಟರ ಮಟ್ಟಿಗೆ ಹೆಣೆದುಕೊಂಡಿವೆ ಎಂದರೆ ಬರೆಹಗಾರರಲ್ಲಿ ದೇವನೂರು ಮಹದೇವ, ಸಿದ್ದಲಿಂಗಯ್ಯ ಬೊಳುವಾರ ಮಹಮದ್ ಕುಂಞಿ, ಬೆಸಗರಹಳ್ಳಿ ರಾಮಣ್ಣ, ಕುಂ.ವೀರಭದ್ರಪ್ಪ, ಚನ್ನಣ್ಣ ವಾಲಿಕಾರ, ಬರಗೂರು ರಾಮಚಂದ್ರಪ್ಪ, ಅರವಿಂದ ಮಾಲಗತ್ತಿ, ಕಟ್ಟುಪ್ಪಾಡಿ ಅಬ್ದುಲ್ ರಶೀಸ್, ಕಾಳೇಗೌಡ ನಾಗವಾರ, ಎಲ್.ಹನುಮಂತಯ್ಯ, ಎನ್.ಕೆ.ಹನುಮಂತಯ್ಯ, ಮೊಗಳ್ಳಿ ಗಣೇಶ್, ಮೊದಲಾದವರು ಕನ್ನಡ ಸಾಹಿತ್ಯದ ಇಂದಿನ ಪ್ರಮುಖ ಕಥೆ, ಕಾದಂಬರಿಕಾರರಲ್ಲಿ ತಮ್ಮದೇ ಕೊಡುಗೆಗಳನ್ನು ಕೊಟ್ಟಿರುವುದನ್ನು ಸ್ಪಷ್ಟಗೊಳಿಸಲಾಗಿದೆ.

ಬೊಳುವಾರು ಮಹಮದ್ ಕುಂಞ ಅವರ ಬದುಕು ಮತ್ತು ಬರಹ

ಬೊಳುವಾರು ಮಹಮದ್ ಕುಂಞ ಇವರು ಬೆಂಗಳೂರಿನಲ್ಲಿರುವ ಖ್ಯಾತ ಲೇಖಕರು. ಕನ್ನಡ ಗದ್ಯ ಸಾಹಿತ್ಯಕ್ಕೆ ಮುಸ್ಲಿಂ ಬದುಕನ್ನು ಮೊತ್ತ ಮೊದಲ ಪರಿಚಯಿಸಿದ (೧೯೭೩) ಇವರು ಕನ್ನಡ ಸಾಹಿತ್ಯದಲ್ಲಿ ಮುಸ್ಲಿಂ ಸಂವೇದನೆ ಎಂಬ ಚರ್ಚೆಗೆ ನಾಂದಿಹಾಡಿದರು.

ಭೂಮಿಯ ಮೇಲೆ ಬಡತನ ಮತ್ತು ಅಧಿಕಾರಕ್ಕಾಗಿ ಕಣ್ಣು ಕಿವಿಗಳನಷ್ಟೇ ಪ್ರಮಾಣವಾಗಿರಿಸಿಕೊಂಡು ನಿನ್ನ ದಿವ್ಯ ವಾಣಿಯನ್ನು ಅವಿವೇಕದಿಂದ ವಿಚಾರರಹಿತವಾಗಿ ಉದ್ಧರಿಸುವವರನ್ನು ನರಕದ ಕೆಂಡದ ರಾಶಿಯ ಮೇಲೆ ನಿಲ್ಲಿಸು, ಎಂಬ ಹಕ್ಕೊತ್ತಾಯಿದ ಮೂಲಕ ಕನ್ನಡ ಕಥಾಲೋಕಕ್ಕೆ ಅಡಿಯಿತ್ತಿದ್ದ ಇವರು ಇನ್ನೂರಕ್ಕು ಹೆಚ್ಚಿನ ಕತೆಗಳು ಕನ್ನಡದ ವಿವಿಧ ನಿಯತಕಾಲಿಕೆಗಳಲ್ಲಿ ಪ್ರಕಟವಾಗಿವೆ.

ಭಾರತದ ಬಹುತೇಕ ಎಲ್ಲ ಭಾಷೆಗಳಿಗೆ ಇವರ ಕತೆಗಳು ಅನುವಾದಗೊಂಡಿವೆ. ಕರ್ನಾಟಕ ಸಾಹಿತ್ಯ ಅಕಾಡಮಿಯಿಂದ ೧೯೯೭ರಲ್ಲಿ ಗೌರವ ಪ್ರಶಸ್ತಿಗೆ ಭಾಜಿನರಾಗಿದ್ದ ಇವರಿಗೆ, ಆ ಮೊದಲೇ ಸಾಹಿತ್ಯ ಅಕಾಡಮಿಯಿಂದ ೩ ಬಾರಿ ಪುಸ್ತಕ ಬಹುಮಾನ ಲಭಿಸಿದೆ. ೧೯೮೩ರಲ್ಲಿ ಕಲ್ಕತ್ತಾದ ಭಾಷಾ ಸಂಸ್ಥಾನದಿಂದ ಪ್ರಶಸ್ತಿ ಪಡೆದಿದ್ದ ಇವರಿಗೆ ೧೯೯೧ರಲ್ಲಿ ಆರ್ಯಭಟ, ೧೯೯೨ರಲ್ಲಿ ಪರಶುರಾಮ, ೧೯೯೪ರಲ್ಲಿ ದೆಹಲಿಯ ಕಥಾ ಪ್ರಶಸ್ತಿ ೨೦೧೦ರಲ್ಲಿ ತೌಳವ ಪ್ರಶಸ್ತಿಗಳು ಲಭಿಸಿದ್ದವು. ಅದಲ್ಲದೇ ೨೦೦೧ ಮತ್ತು ೨೦೦೨ ಹೀಗೆ ಎರಡು ಬಾರಿ ಇವರ ಸಿನಿಮಾ (ಮುನ್ನುಡಿ ಹಾಗೂ ಅತಿಥಿ)ಗಳಿಗೆ ರಾಷ್ಟ್ರ ಪ್ರಶಸ್ತಿಯೂ ದಕ್ಕಿತ್ತು. ಇವರು ಸಂಪಾದಿಸಿದ ತಟ್ಟು ಚಪ್ಪಾಳೆ ಪುಟ್ಟ ಮಗು ಎಂಬ ಮಕ್ಕಳ ಪದ್ಯಗಳ ಸಂಕಲನದಿಂದಾಗಿ ಇವರು ಕನ್ನಡ ಮಕ್ಕಳ ಸಾಹಿತ್ಯದಲ್ಲೂ ಗಟ್ಟಿ ಜಾಗ ಪಡೆದಿದ್ದಾರೆ. ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಟಿಸಿದ ಇವರ ಪಾಪುಗಾಂಧಿ ಗಾಂಧಿ ಬಾಪು ಆದ ಕತೆ (ಇದು ಪ್ರಕಟವಾದ ೨ ವರ್ಷಗಳಲ್ಲಿ ೪ ಮುದ್ರಣ ಕಂಡಿದೆ) ಕನ್ನಡದ ಮಕ್ಕಳೀಗೆ ಮಹಾತ್ಮ ಗಾಂಧಿಯನ್ನು ಹೊಸದಾಗಿ ಪರಿಚಯಸಿದೆ. ಈ ಕೃತಿ ೨೦೧೦ನೇ ಸಾಲಿನ ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿಗಳಿಸಿದೆ.

ಬೊಳುವಾರು ಮಹಮದ್ ಕುಂಞ ಅವರು ಕಡುಬಡತನದ ದುಡಿಯುವ ವರ್ಗದ ಕುಟುಂಬದಿಂದ ಬಂದವರು. ಸೃಜನ ಶೀಲ ಪ್ರಕ್ರಿಯೆಯುದ್ದಕ್ಕೂ ಕೆಲವು ವಿಷಯಗಳಿಗೆ ಬದ್ಧರಾದವರು. ಆ ನಿಟ್ಟಿನಲ್ಲಿಯೇ ತನ್ನ ಬರವಣಿಗೆಯ ಛಾಪು ಮೂಡಿಸಿದರು. ಅವರ ಕಲ್ಪನೆಯ ಮುತ್ತಪಾಡಿಯ ಗ್ರಾಮದ ಮೂಲಕ ವಿಶ್ವವನ್ನು ನೋಡುತ್ತಾರೆ. ಬರವಣಿಗೆ ಹಿಂದಿನ

ಮನದಿಂಗಿತವನ್ನು ಸ್ಫೋಟವಾಗಿ ತೆರೆದಿಟ್ಟಿದ್ದಾರೆ. ಅವರ ಧ್ಯೇಯವು ಸ್ಪಷ್ಟವಾಗಿದ್ದು, ಮೊದಲ ಗುರಿ ದ್ವೀಪದಂತಿರುವ ಸಮುದಾಯಕ್ಕೆ ಸಂಪರ್ಕ ಸಂವಹನ ಸ್ವಾಭಿಮಾನದ ಸೆಳೆತವನ್ನು ಕಲ್ಪಿಸುವುದಾಗಿತ್ತು. ಮತ್ತೊಂದು ತನ್ನ ಸಮುದಾಯದ ಬಗೆಗೆ ಇದುವರೆಗಿನ ಕುರುಡು ನಂಬಿಕೆಗಳ ಬಗೆಗೆ ಸಹೃದಯ ಒದುಗರಲ್ಲಿ ಮೌನ ಮುರಿದು ಎಚ್ಚರಿಸುವ ಕಾರ್ಯವೆಂದು ಹೇಳಿಕೊಂಡಿದ್ದಾರೆ.

ಬೊಳುವಾರು ಮಹಮದ್ ಕುಂಞಿ ಅವರು ತಮ್ಮ ಕಥೆ ಕಾದಂಬರಿಗಳನ್ನು ಪ್ರಕಟಿಸಿದ ಪತ್ರಿಕೆಯವರ ಬೆಂಬಲವನ್ನು ವಿನಮ್ರವಾಗಿ ನೆನೆಯುತ್ತಾರೆ. ನವಭಾರತ ಮೌಲ್ಯರು, ಉದಯವಾಣಿಯ ಬನ್ನಂಜೆಯವರು, ಕಸ್ತೂರಿಯ ಪಾ.ವೆಂ., ಮಯೂರದ ದಿವಾಕರ, ಮೊದಲಾದ ಸಂಪಾದಕರನೇಕರು ನನ್ನನ್ನು ಬೆಂಬಲಿಸಿ ಬರೆಯಲು ಪ್ರೇರಣೆಯಾದರೆಂದು ನೆನೆಯುತ್ತಾರೆ. ಅಂತಹ ಪ್ರೇರಣೆಯ ಪ್ರಭಾವದಿಂದ ೩೦ ವರ್ಷಗಳ ಕಾಲ ಮುತ್ತುಪ್ಪಾಡಿಯ ಕಥೆಗಳು ಯಾವುದಾದರೊಂದು ಪತ್ರಿಕೆಯಲ್ಲಿ ಕನಿಷ್ಠ ತಿಂಗಳಿಗೊಂದಾದರೂ ಪ್ರಕಟ-ವಾಗುವಂತೆ ನೋಡಿಕೊಂಡಿದ್ದಾರೆಂದು ತುಂಬಾ ಕೃತಜ್ಞಾಪೂರ್ವಕವಾಗಿ ನೆನಪಿಸಿಕೊಳ್ಳುತ್ತಾರೆ.

ಬೊಳುವಾರರ ಮಾತೃಭಾಷೆ ಕರಾವಳಿ ಮುಸ್ಲಿಂ ಆಡುವ ಬ್ಯಾರಿ ಭಾಷೆಯಾಗಿದೆ. ಕನ್ನಡ ಗದ್ಯ ಸಾಹಿತ್ಯಕ್ಕೇ ಮುಸ್ಲಿಂ ಬದುಕನ್ನು ಪರಿಚಯಿಸಿದ ಮೊದಲ ಕತೆಗಾರರಾಗಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ಬೊಳುವಾರು ಇವರ ಹುಟ್ಟೂರಾಗಿದೆ. ಪುತ್ತೂರಿನಲ್ಲಿ ತಮ್ಮ ಪ್ರಾಥಮಿಕ ಮತ್ತು ಮಾಧ್ಯಮ ಶಿಕ್ಷಣ ಪಡೆದವರು. ಕಾಲೇಜು ಶಿಕ್ಷಣವನ್ನು ಮಂಗಳೂರು ಮತ್ತು ಮೈಸೂರಿನಲ್ಲಿ ಮಾಡಿರುತ್ತಾರೆ. ತಮ್ಮ ಬರವಣಿಗೆ ಛಾಪನ್ನು ೧೯೭೪ರಲ್ಲಿ ಆರಂಭಿಸಿದರು. ಇವರ ಕತೆಗಳು, ಕಾದಂಬರಿಗಳು ದೇಶದ ಬೇರೆ ಬೇರೆ ಭಾಷೆಗಳಲ್ಲಿ ಅನುವಾದಗೊಂಡಿವೆ. ಇವರು ಧರ್ಮಗಳ ಮೀರಿಯೂ ಬದುಕುವ, ಬದುಕನ್ನು ರೂಪಿಸುವ ಪ್ರಯತ್ನ ಮಾಡುತ್ತಾರೆ. ಅಂತಹ ವಿಭಿನ್ನ ನೆಲೆಗಳನ್ನು ತಮ್ಮ ಕಥೆ, ಕಾದಂಬರಿಗಳಲ್ಲಿ ಸಿದ್ಧಿಗೊಳಿಸಿಕೊಂಡಿದ್ದಾರೆ.

"ಒಂದು ತುಂಡು ಗೋಡೆ" ಕಥಾಸಂಕಲನ ಹೊರತರಲು ಪ್ರೇರಕರಾದ ಶ್ರೀ ಡಿ.ಕೆ.ಶ್ಯಾಮಸುಂದರರನ್ನು ನೆನೆಯುತ್ತಾರೆ. ಹಾಗೂ ಈ ಸಂಕಲನದ ಕತೆಗಳನ್ನು ಯುಗಾದಿ ಮತ್ತು ದೀಪಾವಳಿ ವಿಶೇಷಾಂಕಗಳಿಗಾಗಿ ಬರೆಯಿಸಿದ ಸುಧಾ, ಉದಯವಾಣಿ ಮತ್ತು ಪ್ರಜಾವಾಣಿ ಸಂಪಾದಕರು ಉತ್ತೇಜನವನ್ನು ಧನ್ಯತಾಭಾವದಲ್ಲಿ ಸ್ಮರಿಸಿಕೊಳ್ಳುತ್ತಾರೆ. ಕಾದಂಬರಿಯ ಬಗೆಗೆ ಲೇಖಕರು ಹೇಳುವುದು ಸುಮಾರು ನಾಲ್ಕು ದಶಕಗಳ ಕೆಳಗೆ ಬರೆಯಲು ಆರಂಭಿಸಿದಾಗ ನನ್ನೆದುರು ಹಲವು ಲೋಕಗಳಿದ್ದವು. ಆದ್ದರಿಂದಲೇ, ನನ್ನ ಕಥಾ ಪಾತ್ರಗಳ ಬದುಕಿಗಾಗಿ "ಮುತ್ತಪ್ಪಾಡಿ" ಎಂಬ ನನ್ನದೇ ಆದ ಲೋಕವೊಂದನ್ನು

ಕಟ್ಟಿಕೊಂಡಿದ್ದೆ. ಮುತ್ತುಪ್ಪಾಡಿಯ ತುಂಬಾ ಮನುಷ್ಯರನ್ನ, ಅವರು ನಂಬಲೆಂದು ದೇವರುಗಳನ್ನು, ಪೂಜಿಸಲು ಮಂದಿರಗಳನ್ನು ಪ್ರಾರ್ಥಿಸಲು ಮಸೀದಿಗಳನ್ನು ಆರಾದಿಸಲು ಚರ್ಚುಗಳನ್ನು, ಓದಲು ಶಾಲೆಗಳನ್ನು, ಆಡಲು ಬಯಲುಗಳನ್ನು ಕವಾಯಿತಿಗೆ ಮೈದಾನವನ್ನು, ರಕ್ಷಿಸಲು ಪೋಲಿಸರನ್ನು, ವಂದಿಸಲು ಧ್ವಜಗಳನ್ನು, ಈಜಲು ಹೊಳೆಗಳನ್ನು, ಹಾರಲು ಕೆರೆಗಳನ್ನು, ಮಲಗಲು ಆಸ್ಪತ್ರೆಗಳನ್ನು, ಸುಡಲು ಸ್ಮಶಾನಗಳನ್ನು, ಹೂಳಲು ಖರಸ್ಥಾನಗಳನ್ನು ಹೀಗೆ ನಾಗರಿಕ ಜೀವನಕ್ಕೆ ಏನೇನು ಬೇಕೋ ಅವೆಲ್ಲವನ್ನು ಒದಗಿಸಿದ್ದೆ. ಆನಂತರ, ಮುತ್ತುಪ್ಪಾಡಿಯ ಮನುಷ್ಯರಿಗೆ ಅವರಿಗೆ ಇಷ್ಟ ಬಂದಂತೆ ಬದುಕುವ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟು ಅವರದೇ ಬದುಕಿನ ಕತೆಗಳನ್ನು ಒಂದೊಂದಾಗಿ ಬಂದಿರುವುದನ್ನು ಲೇಖಕರು ತಮ್ಮ ಅರಿವಿಗೆ ಗೋಚರವಾಗುವುದನ್ನೆ ಮುಕ್ತವಾಗಿ ಸಮಾಜದ ಹಿತದೃಷ್ಟಿಗಾಗಿ ಅವರ ಬರೆಹಗಳಲ್ಲಿ ಚಿಂತಿಸಿರುವುದನ್ನು ಓದುಗರರ ಸ್ಪರ್ಶಕ್ಕೇ ಸಿಗುವಂತೆ ತಮ್ಮ ಕೃತಿಗಳನ್ನು ಸತ್ಯದ ಕಡೆ ವಾಲುವ ದೃಶ್ಯಾವಳಿಗಳನ್ನು, ಅವರ ಕಥೆಯ ಪ್ರತಿಭೆಯನ್ನು, ಸವಿಸ್ತಾರವಾಗಿ ಕಾಣುತ್ತೇವೆ. ಅವರು ಮುಸ್ಲಿಂ ಧರ್ಮದಾಗಿದ್ದು ಕೂಡ, ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ತಮ್ಮದೇ ಆದ ಬರಹಗಳಲ್ಲಿ ಹಿಂದೂ-ಮುಸ್ಲಿಂ ಬದುಕಿನ ಚಿತ್ರಣವನ್ನು ಒಂದು ನಾಣ್ಯದ ಎರಡು ಮುಖಗಳಂತೆ ತಂದಿದ್ದಾರೆ. ಸಾಹಿತ್ಯದಲ್ಲಿ ಕಥೆ ಮತ್ತು ಕಾದಂಬರಿ ಪ್ರಕಾರಗಳಲ್ಲಿ ಪ್ರಜ್ಞಾಪೂರಕವಾಗಿ ಎಚ್ಚೆತ್ತ ಮನಸ್ಸಿನಿಂದ ಕಟ್ಟಿಕೊಟ್ಟ ಸಾಹಿತ್ಯ ಚಾರಿತ್ರಿಕ ಕೊಡುಗೆಯಾಗಿದೆ.

ಅಡಿಟಿಪ್ಪಣಿಗಳು

೧. ಎಲ್.ಎಸ್.ಶೇಷಗಿರಿ ರಾವ್, ಸಮಗ್ರ ವಿಮರ್ಶಾ ಸಾಹಿತ್ಯ, ಸಂ-೦೭, ಪು.ಸಂ. ೧೪

೨. ಅದೇ ಪು.ಸಂ. ೧೪

೩. ಅದೇ ಪು.ಸಂ. ೧೫

೪. ಎಲ್.ಎಸ್.ಶೇಷಗಿರಿ ರಾವ್, ಸಮಗ್ರ ವಿಮರ್ಶಾ ಸಾಹಿತ್ಯ, ಸಂ-೦೫, ಪು.ಸಂ. ೧೪

ಅಧ್ಯಾಯ – ೩

ಬೊಳುವಾರು ಅವರ ಕಾದಂಬರಿಯಲ್ಲಿ ಕಥಾವಸ್ತು, ಪಾತ್ರಗಳು

ಬೊಳುವಾರು ಅವರು ಆರಂಭದಲ್ಲಿ ಮುಸ್ಲಿಂ ಸಮಾಜ ಧರ್ಮದ ನಂಬಿಕೆಗಳು, ತಲಾಕ್, ಇದ್ದತ್ ಮತ್ತು ಮಹರ್ ಆಚರಣೆಯಲ್ಲಿ ಅಡಗಿರುವ ಅಧಿಕಾರ ಕೇಂದ್ರಿಕರಣ ಕುರಿತು ಬರೆಯುತ್ತಿದ್ದರು. ನಂತರದ ಅವರ ಕಾದಂಬರಿಯಲ್ಲಿ ವಸ್ತುವಿನ ಆಯ್ಕೆ ವಿಭಿನ್ನವಾಗಿ, ಸೃಜನಶೀಲಕ್ರಿಯೆಗೆ ಹೊಸತನ ತಂದುಕೊಟ್ಟದೆ. ಧರ್ಮ ಮತ್ತು ವೈಚಾರಿಕತೆಗೆ ಪೂಕರವಾದ ಮೌಲ್ಯಗಳನ್ನು ಕೇಂದ್ರವಾಗಿಟ್ಟುಕೊಂಡು ರಚಿಸುತ್ತಿದ್ದ ಬರವಣಿಗೆ, ಧರ್ಮ ಮತ್ತು ಸಮಾಜದ ಎಲ್ಲೆ ದಾಡಿ ಇಡೀ ಮನುಕುಲಕ್ಕೇ ಒಳಿತನ್ನು ಬಯಸುವ ದಾಟಿಯಲ್ಲಿ ಮಾನವೀಯ ವಸ್ತುಗಳ ಆಯ್ಕೆಯೆಡೆ ವಾಲುತ್ತಾರೆ. ಅದು ಧರ್ಮ ಧರ್ಮದೊಳಗಿನ ಅಂತಃಕರಣವನ್ನು ಬೆಸೆಯುವ ಅಭಿವ್ಯಕ್ತಿಯನ್ನು ನೋಡಬಹುದು. ಕಾದಂಬರಿಕಾರರು ವಸ್ತು ಆಯ್ಕೆ ಪರಿಣಾಮದಲ್ಲಿಯೂ ಹೊಸತನ ಕಾಯ್ದುಕೊಂಡಿದ್ದಾರೆ. ನಿರಂತರ ಬದಲಾವಣೆಯನ್ನು ನಿರೀಕ್ಷಿಸುತ್ತಲೇ ಬರವಣಿಗೆ-ಯನ್ನು ಪ್ರಭಾವಿತವಾಗಿ ದುಡಿಸಿಕೊಂಡಿದ್ದಾರೆ. ಈ ಕಾಲಘಟ್ಟದ ಮುಸ್ಲಿಂ ಸಂವೇದನೆ ಪ್ರೌಢಾವಸ್ಥೆಯಿಂದ ಪ್ರವರ್ಧಮಾನಕ್ಕೆ ಬರುವ ಎಲ್ಲಾ ಭರವಸೆಗಳನ್ನು ಬೊಳುವಾರರ ಬೃಹತ್ ಕಾದಂಬರಿಯಲ್ಲಿ ಸ್ಪಷ್ಟಪಡಿಸಲಾಗಿದೆ.

ಬೊಳುವಾರು ಅವರ 'ಸ್ವಾತಂತ್ರ್ಯದ ಓಟ' ಕಾದಂಬರಿಯ ಹಿನ್ನೆಲೆಯನ್ನು ಸೂಕ್ಷ್ಮಿಸಿದಾಗ ನಿಜವಾದ ಸ್ವಾತಂತ್ರ್ಯವೆಂದರೇನು? ಎಂಬ ಪ್ರಶ್ನೆಯನ್ನು ಎತ್ತಿಕೊಂಡು ಕೆಲವೆ ಕೆಲವರು ಹಿತಾಸಕ್ತಿಗಳಿಗಾಗಿ ತೊಂದರೆಗೊಳಗಾಗಿರುವ ಸಾಮಾನ್ಯ ಜನರ ಮಾನಸಿಕ ಯಾತನೆ, ದೈಹಿಕ ಹಿಂಸೆ ಚಿತ್ರಣವನ್ನು ಕಟ್ಟಿಕೊಡುತ್ತದೆ.

ಕಾದಂಬರಿಯಲ್ಲಿ ನೆಲ, ಜಲ, ಸುತ್ತಲಿನ ಪರಿಸರವನ್ನು ತಾನು ಭಾವಿಸಿದಂತೆ ಸುಲಭವಾಗಿ ಮರೆಯಲಾಗುವುದಿಲ್ಲ. ಅದು ಹಳೆಯ ಉಡುಪು ಕಳಚಿ, ಹೊಸ ಉಡುಪು ತೊಟ್ಟಷ್ಟು ಸುಲಭವಾಗುವುದಿಲ್ಲ. ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಒತ್ತಾಯ ಪೂರ್ವಕವಾಗಿ ಹೋಗಬೇಕಾದ ಸಂದರ್ಭದಲ್ಲಿ ಬಂದು ಪರಂಪರೆಯ ಬದುಕಿನ ಕ್ರಮವು ಬೆಸೆದುಕೊಂಡಿರುತ್ತದೆ. ಆ ಮಣ್ಣಿನೊಂದಿಗಿನ ಸಂಬಂಧದ ಕೊಂಡಿಯನ್ನು ಅಷ್ಟು ಸುಲಭವಾಗಿ ಬೇರ್ಪಡಿಸಲಾಗದು. ಇಂತಹ ವಿಷಯಗಳು ಸರ್ಕಾರದ ಆಜ್ಞೆ, ಆದೇಶ ಒತ್ತಾಯದಿಂದ ಧರ್ಮದ ಆಧಾರದಲ್ಲಿ ಭೂಪ್ರದೇಶ, ಜನರನ್ನು ಇಬ್ಭಾಗ ಮಾಡಿದಾಗ ಸಾಮಾನ್ಯ ಜನರು ಅನಾಭವಿಸುವ ಚಿತ್ರಣವನ್ನು ಕಣ್ಣಿಗೆ ಕಟ್ಟುವಂತೆ ಸ್ವಾತಂತ್ರ್ಯ ಓಟದಲ್ಲಿ ಕಾದಂಬರಿಕಾರರು ಚಿತ್ರಿಸುತ್ತಾರೆ. ಕೆಲವು ಸಂದರ್ಭದಲ್ಲಿ ಹಿಂಸೆಗೆ ತಿರುಗುವ ಸಾಮಾನ್ಯ ಸಂಗತಿ ಸನ್ನಿವೇಶ,

ನಡವಳಿಕೆಗಳನ್ನು ಸೆರೆಹಿಡಿಯುತ್ತಾರೆ. ಇಂತಹ ಕಠಿಣ ಸನ್ನಿವೇಶದಲ್ಲೂ ಕರುಣೆ, ಮಾನವೀಯ ತುಡಿತಗಳಿಗೆ ಮಿಡಿಯುವ ಸ್ನೇಹಪರ ಜೀವಿಗಳ ಬಗ್ಗೆಯೂ ಹೇಳುತ್ತಾರೆ. ದೇಶ ವಿಭಜನೆಯ ಸಂದರ್ಭದಲ್ಲಿ ಒಟ್ಟಾಗಿ ಕೂಡಿ ಬಾಳಿದವರು ದೂರವಾಗುವ ಸನ್ನಿವೇಶ ಎದುರಾಗುತ್ತದೆ.

ಧರ್ಮದ ಹಿನ್ನಲೆಯ ಹಿಂಸೆಯು ಪರಸ್ಪರರಲ್ಲಿ ಭುಗಿಲೇಳುತ್ತದೆ. ಇಂತಹ ಸಂದರ್ಭದ ನಡುವೆಯೂ ತನ್ನ ಜೀವನವನ್ನೇ ತ್ಯಾಗ ಮಾಡಿಯಾದರೂ ನಂಬಿಕೆದವರ ಜೀವ ಉಳಿಸುವ ಔದಾರ್ಯತೆಯನ್ನು ಇಲ್ಲಿ ಕಾಣಬಹುದು. ಹಾಗೂ ಸಮಸ್ಯೆ ಮಾನವೀಯ ಸಂಬಂಧಗಳಿಗೆ ಬೆಲೆ ಕಟ್ಟುವ ಮನುಷ್ಯತ್ವವುಳ್ಳವರನ್ನು ಎರಡು ದೇಶ ಮತ್ತು ಧರ್ಮ-ದವರಲ್ಲಿಯೂ ಲೇಖಕರು ಸ್ಪಷ್ಟಪಡಿಸುತ್ತಾರೆ. ಈ ಮಾದರಿಯಲ್ಲಿ ಮನುಷ್ಯ ಸಂಬಂಧಗಳನ್ನು ಕಟ್ಟಿಕೊಡುವ ಮೂಲಕವೇ ಛಿದ್ರವಾಗಿರುವ ಮನಸ್ಸುಗಳನ್ನು ಒಂದುಗೂಡಿಸುವಿಕೆಯು ಮರುಭೂಮಿಯಲ್ಲಿನ ಓಯಸಿಸ್ಸಿನಂತೆ ಕೆಲಸ ಮಾಡುತ್ತದೆ. ಈ ರೀತಿಯ ವ್ಯಕ್ತಿತ್ವಗಳೇ ಗಡಿ, ಭಾಷೆ, ಧರ್ಮ, ಸಮಾಜದ ನಂಬಿಕೆಗಳನ್ನು ಮೀರಿ ಮಾನವ ವಿಶ್ವಮಾನವನಾಗಬೇಕೆಂಬ ಅಂಶಗಳತ್ತ ಕಾದಂಬರಿಯ ವಸ್ತು ಬೆಳಕು ಚಲ್ಲುತ್ತದೆ.

ಲೇಖಕರ ಕಾದಂಬರಿಯಲ್ಲಿ ಘಟನೆ, ಸನ್ನಿವೇಶಗಳನ್ನೇ ಕೇಂದ್ರವಾಗಿ ತೆಗೆದುಕೊಂಡು ಅ ಮುಖಾಂತರ ಇಡೀ ಸಮಾಜವನ್ನು ಬದಲಾವಣೆಯತ್ತ ಸಾಗಿಸುವ ಕೃಷಿ ಮಂಡಿದ್ದಾರೆ. ಸಂವೇದಕರ ಬೃಹತ್ ಕಾದಂಬರಿಯಾದ “ಸ್ವಾತಂತ್ರ್ಯದ ಓಟ”ದಲ್ಲಿ ಪ್ರಧಾನ ವಸ್ತುವಾಗಿ ಚಾಂದ್ ಅಲೀ ಪಾತ್ರ, ಇಡೀ ಕಾದಂಬರಿಯ ಕೇಂದ್ರಬಿಂದುವಾಗುತ್ತದೆ. ಅಲ್ಲದೆ ಮೊಹಿಂದರ್‌ಭಾಬಿ ಮತ್ತು ತನ್ವೀರ ಕೌರ್ ಎಂಬ ಸಿಖ್ ಮಹಿಳೆಯೊಬ್ಬರು ಪಾತ್ರವು ಕಾದಂಬರಿಯಲ್ಲಿ ಪ್ರಮುಖವಾಗಿ ಗುರುತಿಸುವ ನಿಟ್ಟಿನಲ್ಲಿ ಈ ಪಾತ್ರಗಳಿಂದ ಸಮಾಜದ ಹೀನವ್ಯವಸ್ಥೆಯನ್ನು ಮುತ್ತುಪ್ಪಾಡಿಯ ಗ್ರಾಮದ ಆಸುಪಾಸಿನೊಡನೆ ಹೆಣೆಯಲ್ಪಡುವ ಹಲವಾರು ಪಾತ್ರಗಳು, ಅದರಲ್ಲಿ ಪ್ರಮುಖವಾಗಿ ಗುರುತಿಸಲ್ಪಡುವ ಪಾತ್ರಗಳು ಹರೀಂದರ್ ಸಿಂಗ್, ರೋಷನ್ ಅಲೀ, ರಾಜೇಂದ್ರ ಸಿಂಗ್, ಅಮೀರ್‌ಬಾಯಿ, ಕರ್ತಾರ್ ಸಿಂಗ್, ಮೂಸಜ್ಞ, ಕೈಜಮ್ಮ ಸುಮತಿ, ಖೈರುನ್ನೀಸಾ, ಸೀತಾರಾಮ ನಿಡ್ವಾಣ್ಣಯ, ಲತೀಫ ಮಾಸ್ಟರ್ ಪೊಡಿಯಬ್ಬ, ಆಯಿಷಾ, ಕದ್ರಿ ನರಸಿಂಹಭಟ್ರು, ನಾರಾಯಣ ಭಟ್ಟರು, ಸುನಂದಬಾಯಿ ಟೀಚರ್, ವಾರಿಜ, ಸದಾನಂದ, ಸುಂದರಣ್ಣ ಸಂಜೀವ, ಗಿರಿಜ, ನಾಸಿರ್, ಕುಂಞಲಿಮ್ಮಾ, ಡಾ॥ ಸಾವಿತ್ರಮ್ಮ, ಹೀಗೆ ಮತ್ತಿತರ ಪಾತ್ರಗಳು ಪ್ರಮುಖವೆನ್ನಿಸಿದರೂ ಕೂಡ ಅವು ಅಷ್ಟರಮಟ್ಟಿಗೆ ಗುರುತಿಸಲ್ಪಡಲಾರವು. ಆದರೆ ಕಲ್ಲು ಮಣ್ಣು ಸೇರಿದರೆ ಅದೊಂದು ಬೃಹತ್ ಕಟ್ಟಡದಂತೆ ಕಾದಂಬರಿಯಲ್ಲಿ ಹಲವು ಪಾತ್ರಗಳು ಮೂಲಕ ಕಾದಂಬರಿ ಬೃಹತ್ ಎನ್ನಿಸಿ ಒಂದೊಂದು ಪಾತ್ರವು ವಿಶೇಷ ಅಲ್ಲದಿದ್ದರು ಪಾತ್ರಗಳ ಗುಣ, ಸ್ವಭಾವವನ್ನು ಕಾದಂಬರಿ

ಸಮಗ್ರವಾಗಿ ಹೆಣೆಯಲ್ಪಡುವುದು ಇಂತಹ ವ್ಯಕ್ತಿಗಳ ಪರಿಚಯದಿಂದ ಅವು ಗಫ್ಫಾರ್, ಕೆಂಡದಪ್ಪ, ಅಬ್ಬಾಸ್, ಉಸ್ತಾದ್‌ಗಫ್ಫಾರ್ ಬಲವೀರ್ ಸಿಂಗ್, ಹಾಜೀಫೀರ್ ಅಲಿಷಾಹ, ಉಸ್ತಾದ, ಶಂಷಾದ್ ಮಾಯಿ, ಬಿಸ್ಮಿಲ್ಲಾ, ಶಂಕರ್‌ಮಾಮಾ, ಸತೀಶ, ರಾಘವ, ಕೂಪಿನ್ ಮೊಯಿದ್ದೀನ್ ಮೂಸಾ ಟೈಲರ್, ರಹೀಮ್ ಖಾನ, ಖಾದ್ರಿಯಾಕಾ, ಧೂಮಣ್ಣ ಪೂಜಾರಿ, ಧೂಮಣ್ಣ ಶೆಟ್ಟರು, ಹಂಝೂ, ಹನೀಫ್, ಯೂಸೀನ್, ಫಕ್ರುದ್ದೀನ್ ಬ್ಯಾರಿ ಶಂಕರ್‌ಭಟ್ಟರು, ಅಬ್ದುಲ್ ಸಲೀಮ, ಜುಲೇಕಾ, ಮೌಲಾನಾ, ಹಝ್ರುತ್ ಅಬೂಬಕ್ಕರ್, ಯಜೀದ್, ಉಮ್ಮನ್ ಸೈತಾನೀ, ಫಕ್ರುದ್ದೀನ್ ಸಾಹುಕಾರ ಹಲೀಮಾ, ಮೊಯಿದ್ದೀನ್ ಸಾಹುಕಾರ್, ಅಬ್ದುಲ್ ಗಪ್ಪಾರ್ ಸಾಹೇಬರು, ಜೋಳಿಗೆ ಬಾಬ, ಮಿಲಿಬ್ರಿ ಟೈಲರ್ ಮೂಸಾ, ಶ್ರೀನಿವಾಸ ಉಡುಪರ, ರಾಘವೇಂದ್ರ, ಫಕೀರ್, ಗುಡ್ಡೆ ಈಸುಬು, ಅಬ್ದುಲ್ಲ, ಜೋಸೆಫ್, ಸೂಫಿಯಜ, ಬದ್ರುದ್ದೀನ್ ದೋಸೆಭಟ್ಟರು, ಮೊಯಿದ್ದೀನ್, ಡಾ.ಶಾಮಾಪ್ರಸಾದ ಮುಖರ್ಜಿ, ಮುಮ್ಮದ್ ಕುಂಞ, ಉಗ್ರಾಣಿ ಕೃಷ್ಣಪ್ಪಣ್ಣ, ತ್ಯಾಂಪಣ್ಣ ಶೆಟ್ಟರು, ಜಿನರಾಜ ಹೆಗ್ಡೆ, ಅಬ್ದುಲ್ ಕಾಸಿಮ್, ಸಕೀಣಾ, ಜುಮ್ಮಾಮಸೀದಿ, ರಹೀಮ್ ಖಾನರು, ಬ್ರೋಕರ್ ಇಬ್ರಾಯಿ, ಮರಿಯಮ್ಮ ಮಂಜೇಶ್ವರ, ಸೈತಾನ ಉನ್ನೀಸಾ, ಡಾ.ಕೋವೂರು, ಬಸಾಮಾ, ಮೀನಿನಂಗಡಿಯ ಅದ್ರಾಮಣ್ಣ, ಈಸುಬು, ಹಮ್ಮಬ್ಬ, ಮೈಯತ್, ಹಸೇನಾರ್, ಲಾಲ್‌ಚಂದನ್, ಡೆಮ್ಮೆ ಸುಲೈಮನ್, ಮಾಧವಶೆಣೈ ಗಾಂಧೀಜಿ, ಕುಶಾಲು, ಸಲೀಮಾ, ಖಾದರ್, ರಾಷಿದ್ ಹೈದರ್, ಪಂಡಿತ್ ನಾರಾಯಣ ಕಾರಂತ, ರಮ್ಲಾನ್ ಮಾಲವಿ, ಪಟೇಲ್ ಸಂಕಪ್ಪ ಶೆಟ್ಟರ, ಯತೀಮ್ ಖಾನಾ, ಜನ್ನತ್ ಹಾಜಿ, ಬೀಪಾತು ಆನಂದ, ಬಂಗಾರು ಮಾಸ್ಟ್ರ, ಮೋಹನ್, ಗೋಪಿಭಟ್ರು, ಕೋಚಣ್ಣರೈ, ಒಸಾಮ್ ಸುನ್ನತ್, ತಾಹಿರಾ, ಅಬ್ದುಲ್ಲಾಕರ್, ಸಾದಿಕ್ ಝೀನತ್, ರೈಸಮಿಲ್ಲು ಗಣೇಶ ಕಾಮತ್, ಅಹಮದ್ ಹಾಜಿ, ಚಕ್ರವರ್ತಿ ಮಹಮ್ಮದ ಷಾಹ, ಕಸಾಯಿ ಒಸಾಮಾ, ಸೀತಣ್ಣ ಶೆಟ್ರು, ಸುಬ್ಬಣ್ಣ, ಭಗತ್‌ಶೆಣೈ, ಜವಾಹರಲಾಲ್ ನೆಹರು, ರಾಮಭಟ್ರು, ಕೊದಂಡರಾಮ ಕೆದ್ಲಾಯರು, ಇನ್ನೂ ಮುಂತಾದ ಪಾತ್ರಗಳು ಸವಿಸ್ತಾರವಾಗಿ ಕಾಣಲ್ಪಡುತ್ತವೆ. ಹೀಗೆ ಕಾದಂಬರಿಯ ಸನ್ನಿವೇಶಕ್ಕೇ ತಕ್ಕಂತೆ ಹಂತ ಹಂತವಾಗಿ ಪಾತ್ರಗಳು ಹೆಣೆಯಲ್ಪಟ್ಟು. ಬೃಹತ್ ಆಕಾರದಿಂದ ರಚಿಸಿರುವ ಲೇಖಕರ ತಂತ್ರಗಾರಿಕೆ ವಿಶಿಷ್ಟವಾದುದ್ದು.

೨. ಕಾದಂಬರಿಯಲ್ಲಿ ಸಾಮಾಜಿಕ ಸ್ಥಿತ್ಯಂತರಗಳು

ಬೃಹತ್ ಕಾದಂಬರಿಯಾದ 'ಸ್ವಾತಂತ್ರ್ಯದ ಓಟ' ಇಡೀ ಕಾದಂಬರಿಯಲ್ಲಿ ಸಮಾಜದ ಹೀನ ವರ್ತನೆಗಳನ್ನು ಖಂಡಿಸುವ ನಿಟ್ಟಿನಲ್ಲಿ, ಹಿಂದೂ ಮುಸ್ಲಿಂ ಅವರ ಬದುಕಿನ ಸಂಘರ್ಷ, ಆಚಾರ, ವಿಚಾರ, ಸಂಸ್ಕೃತಿ, ಸಂಪ್ರದಾಯ, ಇವುಗಳೊಳಗೆ ತಾರತಮ್ಯತೆ, ಕೌಟುಂಬಿಕ

ಬದುಕಿನ ನಿಯಮಗಳು, ಹೀಗೆ ಒಟ್ಟೊಟ್ಟಿಗೆ ಆಧುನಿಕತೆಯನ್ನೂ ಅಳವಡಿಸಿಕೊಂಡಿರು ಹಿಂದೂ, ಮುಸ್ಲಿಂ, ಧರ್ಮಗಳನ್ನು ಏಕಕಾಲದಲ್ಲಿ ತಿಳಿಯಲಾಗಿದೆ.

ಮಾನವ ಸಮಾಜಜೀವಿ, ಆತ ಸಮಾಜದಲ್ಲಿಯೇ ಜನಿಸುತ್ತಾನೆ. ಸಮಾಜದಲ್ಲಿಯೇ ಬದುಕುತ್ತಾನೆ. ತನ್ನ ಆವಸಾನವನ್ನು ಕೂಡ ಸಮಾಜದಲ್ಲಿಯೇ ಹೊಂದುತ್ತಾನೆ. ಸಮಾಜವಿಲ್ಲದ ವ್ಯಕ್ತಿಯ ಬದುಕನ್ನು ಊಹಿಸುವುದು ಅಸಾಧ್ಯವಾಗಿದೆ. ವ್ಯಕ್ತಿ ಮತ್ತು ಸಮಾಜ ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ವ್ಯಕ್ತಿ ಮತ್ತು ಸಮಾಜ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ವ್ಯಕ್ತಿ ಇಲ್ಲದೆ ಸಮಾಜವಿಲ್ಲ. ಸಮಾಜವಿಲ್ಲದೆ ವ್ಯಕ್ತಿಯಿಲ್ಲ. ವ್ಯಕ್ತಿ ಮತ್ತು ಸಮಾಜ ಪರಸ್ಪರ ಪೂರಕವಾದವು. ಸಮಾಜವು ಸರ್ವ ವ್ಯಾಪಕವಾದದ್ದು. ಆ ನಿಟ್ಟಿನಲ್ಲಿ ಚಾಂದ್ ಅಲೀ ಎಂಬ ಸಮಾಜದ ಸುಧಾರಕ ಮತ್ತೇ ಮಾನವೀಯ ಗುಣ ಹೊಂದಿರುವ ಪಾತ್ರವನ್ನು ಬೊಳುವಾರರು ತಮ್ಮ ಕಾದಂಬರಿಯ ಕೇಂದ್ರ ಬಿಂದುವಾಗಿ, ಸಮಾಜಕ್ಕೆ ಅರಿವು ಮೂಡಿಸುತ್ತದೆ. ಸಮಾಜದ ಅಸ್ತಿತ್ವಕ್ಕೆ ಮತ್ತು ನಿರಂತರತೆ ಬಗೆಗೆ ತಿಳಿಯಲಾಗಿದೆ. ಸಮಾಜದ ಉದ್ದೇಶಗಳು ಈಡೇರಿಕೆಗೆ ಕೂಡಿ ದುಡಿಯುವುದನ್ನು ಸಹಕಾರ ಎಂದು ಕರೆಯಲಾಗಿದೆ. ಸಹಕಾರವಿಲ್ಲದೆ ಯಾವುದೇ ಸಮಾಜ ಮುಂದುವರಿಯಲಾರದು. ಕೌಟುಂಬಿಕ ಬದುಕು ಸಹಕಾರದ ತತ್ವವನ್ನೇ ಆಧರಿಸಿದೆ ಪ್ರತಿಯೊಂದು ಸಮಾಜ ಶ್ರಮ ವಿಭಜನೆಯನ್ನು ಹೊಂದಿದ್ದು, ಇದರ ಉತ್ಪಾದನೆ ಪ್ರಮಾಣವನ್ನು ತೀವ್ರಗೊಳಿಸಿದೆ ಎನ್ನುವ ಹಿನ್ನೆಲೆಯಲ್ಲಿ ಲೇಖಕರು ಸಿಖ್ ಹೆಣ್ಣು ಮಕ್ಕಳಿಬ್ಬರನ್ನು ಚಾಂದ್ ಅಲೀ ಎಂಬ ವ್ಯಕ್ತಿ ಸಹಾಯ ಮಾಡುವ ವಿಭಿನ್ನ ನೆಲೆಗಳನ್ನು ಕಾದಂಬರಿಯ ಪ್ರಾರಂಭದಲ್ಲಿ ಗೋಚರಗೊಂಡಿದೆ. ಭಾರತದಲ್ಲಿ ಹಿಂದೂ ಸಮಾಜ, ಪಾಕಿಸ್ತಾನದಲ್ಲಿ ಮುಸ್ಲಿಂ ಸಮಾಜ ಹೀಗೆ ಮಾನವೀಯತೆಯ ಮೌಲ್ಯವನ್ನು ಬಿಡಿ ಬಿಡಿಯಾಗಿ ವಿಂಗಡಣೆ ಹೊಂದಿ, ಧರ್ಮಗಳ ಆದಾರದ ಮೇರೆಗೆ ಜನರ ಬದುಕನ್ನು ನೋಡಲಾಗಿದ್ದು.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ದಲಿತ-ಬಂಡಾಯ ಸಾಹಿತ್ಯಕ್ಕೇ ವಿಶೇಷವಾದ ಸ್ಥಾನವಿದೆ. ಈ ಕಾಲಘಟ್ಟದಲ್ಲಿ ಸಾಹಿತ್ಯವು ದಲಿತ, ಹಿಂದುಳಿದ ಮತ್ತು ಅಲ್ಪಸಂಖ್ಯಾತ ಸಮುದಾಯಗಳ ದಟ್ಟ ಅನುಭವಗಳಿಂದ ದಾಖಲಾಯಿತು. ಲೇಖಕರು ಸಾಮಜಿಕ ಮತ್ತು ಸಾಂಸ್ಕೃತಿಕ ಸಂಘರ್ಷವನ್ನು ಸ್ವಾಭಿಮಾನದ ಬದುಕಿನ ಸಂವಾದಿಯಾಗಿ ಅಭಿವ್ಯಕ್ತಿಸುತ್ತದೆ. ಈ ಕಾಲಘಟ್ಟದಲ್ಲಿ ಸಾಹಿತ್ಯ ಬೇರೆಯಲ್ಲ, ಬದುಕು ಬೇರೆಯಲ್ಲವೆಂಬ ಧೋರಣೆಯನ್ನು ಸೂಚಿಸುತ್ತದೆ. ವ್ಯಷ್ಟಿ ಹಾಗೂ ಸಮಷ್ಟಿಯ ದಿಕ್ಕಿನಲ್ಲಿ ನಿಜ ಸಂಸ್ಕೃತಿಯ ಶೋಧಕ್ಕೆ ತೊಡಗಿತು. ದಲಿತ ಬಂಡಾಯ ಸಾಹಿತ್ಯ ಸಂದರ್ಭದಲ್ಲಿ ಬರೆದ ಲೇಖಕರು ತಮ್ಮದೇ ಸಮುದಾಯದ ಜೀವನ ಮೌಲ್ಯಗಳಿಗೆ ಕನ್ನಡಿಯಾಗುತ್ತದೆ. ಹೋರಾಟ, ಚಳುವಳಿ, ಬೀದಿನಾಟಕ ಇವೆಲ್ಲವು

ಸಾಮಾಜಿಕ ಚೌಕಟ್ಟಿನಲ್ಲಿ ಸಾಹಿತ್ಯ ಚರಿತ್ರೆಯ ನಿರ್ಮಾಣಕ್ಕೆ ಕಾರಣವಾದವು. ಸಾಹಿತ್ಯ ಚರಿತ್ರೆಯು ಚಲನೆಯಿಲ್ಲದವರ ಜೀವನಕ್ಕೊಂದು ದನಿಯಾಗಿರುತ್ತದೆ. ಸ್ವಾಭಿಮಾನ, ಆತ್ಮಗೌರವದ ಸಂವೇದನೆಯಲ್ಲಿ ಆ ಸಮುದಾಯದ ಜನರಲ್ಲಿ ಹುಟ್ಟು ಹಾಕಿತು. ಸಾಹಿತ್ಯದಲ್ಲಿ ಸಾಮಾಜಿಕ ಸಮಸ್ಯೆಗಳು ಸಾಗರೋಪಾದಿಯಲ್ಲಿ ಪ್ರಸ್ತುತಗೊಂಡಿದ್ದು. ಇಂತಹ ಸಂಕ್ರಮಣ ವ್ಯವಸ್ಥೆಯಲ್ಲಿ ಮೂಡಿ ಬಂದ ಮುಸ್ಲಿಂ ಸಂವೇದನೆಯ ಸಾಹಿತ್ಯವು ಚರಿತ್ರಾರ್ಹವಾಗಿರುತ್ತದೆ. ದಲಿತ ಬಂಡಾಯ ಸಾಹಿತ್ಯ ಕ್ಷೇತ್ರವು ಬಹುಮುಖ್ಯವಾಗಿ ಬೃಹತ್ ಕಾದಂಬರಿಯ ಮೂಲಕ ಅಭಿವ್ಯಕ್ತವಾಗಿದೆ. ಸುಲಭವಾಗಿ ಜನರನ್ನು ಆಕರ್ಷಿಸುವ ಸಾಹಿತ್ಯ ಮಾಧ್ಯಮ ಕಥನ ಕಲೆಯಾದ್ದರಿಂದ ಇವರುಗಳು ವಿಪುಲವಾಗಿ ಈ ಸಾಹಿತ್ಯ ಮಾಧ್ಯಮವನ್ನು ಬಳಸಿಕೊಳ್ಳತ್ತಾರೆ. ಗದ್ಯ ರೂಪದ ಲಯಗಳಲ್ಲಿಯೇ ಜನಸಾಮಾನ್ಯರ ಶೋಷಣೆಯ ಬದುಕನ್ನು ಜೀವಂತಿಕೆ-ಯಿಂದ ಕಟ್ಟಿಕೊಟ್ಟರು. ಅದು ವ್ಯಕ್ತಿಯ ವ್ಯಕ್ತಿತ್ವದಲ್ಲಿ ಎಷ್ಟು ಮುಖ್ಯವೋ, ಅಷ್ಟೇ ಪ್ರಮಾಣದಲ್ಲಿ ಸಮುದಾಯದ ಆಶಯಗಳ ಆತ್ಮಚರಿತ್ರೆಗಳಾದವು. ವ್ಯಕ್ತಿ ಮತ್ತು ವ್ಯವಸ್ಥೆಯನ್ನು ಅರ್ಥ ಮಾಡಿಕೊಳ್ಳುವಲ್ಲಿ ಕಥಾ ಸಾಹಿತ್ಯವು ಎಪ್ಪತ್ತರ ದಶಕದಲ್ಲಿ ಮಾನವೀಯತೆಯನ್ನು ಎತ್ತಿಹಿಡಿಯಿತು.

ಮುಸ್ಲಿಂ ಸಂವೇದನೆಯನ್ನು ಕಥಾಸಾಹಿತ್ಯದ ಮೂಲಕ ಸಮೃದ್ಧಗೊಳಿಸಿದವರು ಮೊದಲ ತಲೆಮಾರಿನ ಮುಸ್ಲಿಂ ಲೇಖಕರು, ನವೋದಯ, ಪ್ರಗತಿಶೀಲ ಮತ್ತು ನವ್ಯ ಸಾಹಿತ್ಯದ ಸಂದರ್ಭದಲ್ಲು ಮುಸ್ಲಿಂ ಲೇಖಕರು ಸಾಹಿತ್ಯ ಕೃಷಿ ಕೈಗೊಂಡಿರುವುದನ್ನು ಕಾಣುತ್ತೇವೆ. ಆದರೆ ಅದು ಸಮುದಾಯ ಹಕ್ಕೊತ್ತಾಯದ ರೂಪದಲ್ಲಿ ಕಂಡು ಬರುವುದಿಲ್ಲ. ದಲಿತ-ಬಂಡಾಯ ಸಾಹಿತ್ಯದ ಸಂದರ್ಭದಲ್ಲಿ ಮಾತ್ರ ಸಮುದಾಯದ ಹಕ್ಕೊತ್ತಾಯದ ರೂಪದಲ್ಲಿ ದಾಖಲುಗೊಂಡಿರುವುದನ್ನು ಕಾಣುತ್ತೇವೆ. ಲೇಖಕರು ತಮ್ಮ ಸಾಹಿತ್ಯ ಕೃಷಿಯಲ್ಲಿ ಮುಸ್ಲಿಂ ಸಂವೇದನೆಯನ್ನು ಅಧ್ಯಯನಕ್ಕೆ ಒಳಪಡಿಸಿದರು. ಜೊತೆಗೆ ಸ್ತ್ರೀ ಸಂವೇದನೆ, ದಲಿತ ಬಂಡಾಯ ಸಾಹಿತ್ಯದೊಂದಿಗೆ, ಧರ್ಮಾತೀತ ನೆಲೆಗಳನ್ನು ಕಾಣಲಾಗಿದೆ. ಹಾಗಾಗಿ ದಲಿತ ಬಂಡಾಯ ಸಾಹಿತ್ಯದ ಒಟ್ಟು ಪರಿಕಲ್ಪನೆಯನ್ನು ಹೇಳುತ್ತಲೇ ಮುಸ್ಲಿಂ ಸಮುದಾಯದ ಮೂಲದ್ರವ್ಯವಾಗಿ ಮೂಡಿಬಂದ ಸಾಹಿತ್ಯವನ್ನು ಚರ್ಚಿಸಲಾಗಿದೆ. ಕಾದಂಬರಿ ಸಾಹಿತ್ಯ ಸಹೃದಯರನ್ನು ಸುಲಭವಾಗಿ ತಲುಪುವ ಕಲೆಯನ್ನು ಇಲ್ಲಿ ನೀಡಲಾಗುತ್ತದೆ. ಬಡತನ, ಧರ್ಮ, ಆರ್ಥಿಕತೆ, ಸಾಮಾಜಿಕ ಮತ್ತು ಶೈಕ್ಷಣಿಕ ಸಮಸ್ಯೆಗಳು ಹಾಗೆಯೇ ಸಾಮಾಜಿಕ ನೆಲೆ ಎಂಬುವಲ್ಲಿ ಕಾದಂಬರಿಕಾರರು ನಿರ್ವಹಿಸುವ ನಿರ್ಣಯಾತ್ಮಕ ಅಂಶಗಳ ಕಡೆಗೆ ಬೆಳಕು ಚೆಲ್ಲಲಾಗಿದೆ. ವ್ಯಕ್ತಿಯ ಬದುಕಿನಲ್ಲಿ ವೈಯಕ್ತಿಕ ಗುಣಗಳ ಮೇಲೆ ಸಾಮಾಜಿಕವಾದ ಹಿಡಿತ ಹೇಗಿರುತ್ತದೆಂಬ ನಿಲುವುಗಳನ್ನು ಇಲ್ಲಿ ಸ್ಪಷ್ಟಪಡಿಸುತ್ತದೆ.

ಧರ್ಮ ಮತ್ತು ವೈಚಾರಿಕ ನೆಲೆಯಲ್ಲಿ ಪ್ರತಿಪಾದಿತವಾಗುವ ಮೌಲ್ಯಗಳ ವಿಶ್ಲೇಷಣಾತ್ಮಕ ಫಲಶೃತಿಯನ್ನು ಸೆರೆ ಹಿಡಿಯಲಾಗುತ್ತದೆ. ಬೊಳುವಾರರ ಕಾದಂಬರಿಯಲ್ಲಿ ಧರ್ಮ ಸೃಜನಶೀಲ ಪ್ರಕ್ರಿಯೆಯೊಳಗೆ ಹೇಗೆ ಒಡಮೂಡಿದೆಯೆಂಬುದರ ಚರ್ಚೆ ಮಾಡಲಾಗುತ್ತದೆ. ಹಾಗೆಯೇ ವರ್ಗ ತಾರತಮ್ಯ ಮತ್ತು ಕೋಮು ಸಂಘರ್ಷಗಳು ಉಂಟು ಮಾಡುವ ಪರಿಣಾಮಗಳನ್ನು ಚರ್ಚಿಸುತ್ತದೆ. ಮನುಷ್ಯ ಬದುಕಿನ ಬಡತನ, ಅಗೌರವ, ಅನಾಹುತಗಳ ಬಗ್ಗೆ ಚರ್ಚೆಯು ಬೊಳುವಾರರ ಕಾದಂಬರಿ ಮತ್ತು ಕಥೆಗಳಲ್ಲೂ ಕೂಡ ವಿಭಿನ್ನ ನೆಲೆಯಲ್ಲಿ ಸ್ಪಷ್ಟಗೊಂಡಿದೆ. ಬಡತನವು ಯಾವ ಸಮುದಾಯಕ್ಕೂ ಘನತೆಯ ವಿಚಾರವಾಗುವುದಿಲ್ಲ. ಮರೆಮಾಚಿಕೊಂಡಂತಿರುವ ನಿರುದ್ಯೋಗ, ಕೋಮುಳ್ಳುರಿಯಿಂದ ಉಂಟಾಗುವ ಸಾಮಾಜಿಕ ಅಶಾಂತಿ, ಆರ್ಥಿಕ ನಷ್ಟಗಳ ಸ್ಪಷ್ಟ ನಿಲುವುಗಳನ್ನು ವಿಶ್ಲೇಷಿಸಲಾಗಿದೆ. ಮುಸ್ಲಿಂ ಕಾದಂಬರಿಕಾರರು ತಮ್ಮ ಸೃಜನಶೀಲ ಪ್ರಕ್ರಿಯೆಯೊಳಗೆ ಅನ್ಯ ಧರ್ಮಿಯ ಬದುಕಿನ ಚಿತ್ರಣವನ್ನು ಕಟ್ಟಿಕೊಡಲು ತಾಳುವ ವ್ಯವದಾನವನ್ನು ಚಿತ್ರಿಸಲಾಗುತ್ತದೆ. ಜಾತಿ ಪುರೋಹಿತಶಾಹಿ ವ್ಯವಸ್ಥೆಯ ಜಾಲವು ಸಮಾಜದಲ್ಲಿ ಆಕ್ರಮಿಸಿಕೊಂಡ ವಿದ್ರೋಹಕ ಚಿತ್ರಣವನ್ನು ಇಡೀ ಕಾದಂಬರಿಯ ಒಳ ತಿರುಳಾಗುತ್ತದೆ. ಮುಸ್ಲಿಂ ಸಮುದಾಯ ಶಿಕ್ಷಣಕ್ಕೆ ತೆರೆದುಕೊಳ್ಳುವ ಬಗೆ ಅದರ ಬಗೆಗೆ ತಾಳುವ ನಿಲುವುಗಳು ಸವಿಸ್ತಾರಗೊಂಡಿದೆ. ಸಮಾಜದ ಮುಖ್ಯ ವಾಹಿನಿಯೊಂದಿಗೆ ಬದುಕು ನಿರ್ಮಿಸಿಕೊಳ್ಳವಲ್ಲಿ ತಲೆಮಾರುಗಳ ದ್ವಂದ್ವಗಳನ್ನು ಕಟ್ಟಿಕೊಟ್ಟಿದೆ. ವರ್ತಮಾನ ಬದುಕಿನ ಸ್ಥಿತ್ಯಂತರಗಳನ್ನು ವಾಸ್ತವಿಕ ದೃಷ್ಟಿಯಲ್ಲಿ ತೆರೆದುಕೊಳ್ಳುತ್ತದೆ.

ಮುಸ್ಲಿಂ ಕಥಾ ಜಗತ್ತಿನಲ್ಲಿ ಕಾದಂಬರಿಯು ಮಹಿಳಾ ಮತ್ತು ಮುಸ್ಲಿಂ ಸಮುದಾಯದ ಅನನ್ಯತೆಯನ್ನು ತಿಳಿಸಿ ಕೊಡುತ್ತದೆ. ಕಾದಂಬರಿ ಅಳದಲ್ಲಿ ತಲಾಕ್, ಲಿಂಗತಾರತಮ್ಯ, ವರದಕ್ಷಿಣೆ ಮತ್ತು ಕೌಟುಂಬಿಕ ದೌರ್ಜನ್ಯಗಳ ಬಗ್ಗೆ ಸವಿಸ್ತಾರವಾದ ತಮ್ಮ ಬರೆಹದಲ್ಲಿ ಅರಿವು ಮೂಡಿಸುವ ಲೇಖಕರ ತಂತ್ರಗಾರಿಕೆ ವಿಶಿಷ್ಟವಾಗಿದೆ. ಮುಸ್ಲಿಂ ವೃತ್ತಿ ಬದುಕಿನ ಸಂಕೀರ್ಣತೆ ಸವಾಲುಗಳನ್ನು ಪುಷ್ಟೀಕರಿಸಲಾಗಿದೆ ಎನ್ನುವ ನಿಟ್ಟಿನಲ್ಲಿ ಮಹಿಳೆ, ಮಹಿಳೆಯರನ್ನು ಶತ್ರುವಾಗಿ ನಡೆಸಿಕೊಳ್ಳವ ಹಿಂದಿರುವ ಹುನ್ನಾರವನ್ನು ಕಾದಂಬರಿಯಲ್ಲಿ ಅಭಿವ್ಯಕ್ತಗೊಂಡಿದೆ ಎಂಬ ನಿಟ್ಟಿನಲ್ಲಿ ಜಟಿಲವಾಗಿ ವಿಶ್ಲೇಷಿಸುತ್ತಾ ಲೇಖಕರು ಅಭಿವ್ಯಕ್ತಿಸಿರುವುದನ್ನು ನೋಡುತ್ತೇವೆ. ಮುಸ್ಲಿಂಯೇತರ ವಿಭಿನ್ನ ನೆಲೆಯನ್ನು ತಮ್ಮ ಕಾದಂಬರಿಯಲ್ಲಿ, ಮುಸ್ಲಿಂ ಬದುಕಿನ ವೈಶಿಷ್ಟತೆಯ ಕುರಿತದಾಗಿದ್ದು, ಹಿಂದೂ, ಮುಸ್ಲಿಂ ಸಮುದಾಯದ ಬದುಕಿನ ಅಭಿವ್ಯಕ್ತಿಯಲ್ಲಿ ಮುಸ್ಲಿಂ ಲೇಖಕರು ಹೇಗೆ ಅಧಿಕೃತವಾಗಿ ವಿಭಿನ್ನರಾಗುತ್ತಾರೆಂದು ವಿವೇಚಿಸಲಾಗುವ ಅವರ ಪ್ರತಿಭೆಯನ್ನು ಕಾಣುತ್ತೇವೆ.

ಕಾದಂಬರಿಯಲ್ಲಿ ಸಮಾಜದ ಅರುವು-ಕುರುಹುಗಳನ್ನು ಹೆಚ್ಚಿನ ರೀತಿಯಲ್ಲಿ ಗುರುತಿಸಿರುವ ಬೊಳವಾರರು ತಮ್ಮ ಕಾದಂಬರಿಯಲ್ಲಿ ಅಭಿವ್ಯಕ್ತಿಸುತ್ತಾರೆ. ಆ ನಿಟ್ಟಿನಲ್ಲಿ ಮುಂದಿನ ಅಧ್ಯಾಯನಕ್ಕೆ ಮಹಿಳಾ ಪ್ರಜ್ಞೆ, ವಯುಕ್ತಿಕ ಮತ್ತು ಸಾಮಾಜಿಕ ನೆಲೆ, ಧರ್ಮಾತೀತ ನೆಲೆಯಲ್ಲಿ ಪ್ರತಿಪಾದಿತವಾಗುವ ಮೌಲ್ಯ ಆರೋಗ್ಯ ಶಿಕ್ಷಣ, ವರ್ತಮಾನದ ಸೆಲೆಗಳು ಎಂದು ಅಧ್ಯಾಯನಕ್ಕೆ ಸೂಕ್ತವಾಗಿವೆ. ಹಾಗೆ ಮಹಿಳೆಯರ ಬಗೆಗೆ ಅಪಾರವಾದ ಕಾಳಜಿಯನ್ನು ಕೈಜಮ್ಮನ ಪಾತ್ರದ ಮೂಲಕ ಮೂಸಜ್ಜನ ಬದುಕಿನ ಪ್ರಸಂಗವನ್ನು ಹೇಳಲ್ಪಡುತ್ತದೆ.

ಗಡಿ ಪ್ರದೇಶದಲ್ಲಿ ಸ್ವದೇಶಕ್ಕೆ ಹೋಗಲಾರದ ಚಾಂದ್ ಅಲೀ, ಮೊಹಿಂದರ್ ಭಾಬಿ, ತನ್ವೀರ್ ಕೌರ, ಇವರ ಬದುಕಿನ ಚಿತ್ರಣವು ಇಡೀ ಕಾದಂಬರಿ ಕೇಂದ್ರ ಬಿಂದುವಾಗಿ ವಿಭಿನ್ನ ನೆಲೆಯಲ್ಲಿ ಗುರುತಿಸಿಕೊಂಡು ಸಮಾಜದ ಸನ್ನಡತೆಯ ಬಗೆಗೆ ತಿಳಿಸಿದೆ. ಹಾಗೇ ವ್ಯಕ್ತಿಗತವಾಗಿ ಚಾಂದ್ ಅಲೀ, ಹೆಡ್‌ಮಾಸ್ಟರ್ ನಾರಾಯಣ ಭಟ್ಟ, ಮೂಸಜ್ಜ, ಮುಂತಾತ ಪಾತ್ರಗಳ ಮೂಲಕ ಸಮಾಜದ ಮೌಲ್ಯಧಾರಿತ ಗುಣಗಳ ಇರುವಿಕೆಯನ್ನು ಈ ಪಾತ್ರಗಳ ಮೂಲಕ ಕಾದಂಬರಿಯುದ್ದಕ್ಕೂ ಗೋಚರಿಸುತ್ತದೆ. ಅಲ್ಲದೇ ಧರ್ಮವನ್ನೇ ತ್ಯಜಿಸಿ ಉಮ್ಮರ್ ಎಂಬಾತ ಉಮೇಶ ಕುಮಾರ್.ಬಿ ಎಂದು ಹಿಂದೂ ಧರ್ಮಕ್ಕೆ ಮತಾಂತರವಾಗಿ, ಮೀನಾಕ್ಷಿಪುರಂನಲ್ಲೂ ಕೂಡ ದಲಿತರು ಮುಸ್ಲಿಂ ಧರ್ಮಕ್ಕೆ ಮತಾಂತರವಾಗುವ ಪ್ರಸಂಗ ಹಿಂದೂ ಧರ್ಮಕ್ಕೆ ಎದುರಾಗುತ್ತದೆ. ಮುತ್ತುಪ್ಪಾಡಿಯ ಆಸುಪಾಸಿನಲ್ಲಿರುವ ಗುಡ್ಡೆ ಎಂಬ ಗ್ರಾಮವು ಹಲವು ಅಭಿವೃದ್ಧಿಗಳನ್ನು ಕಾಣಲು ಹೆಡ್‌ಮಾಸ್ಟರ್, ನಾರಾಯಣಭಟ್ಟರು ಮತ್ತು ಶಿಕ್ಷಕರ ಸಿಬ್ಬಂದಿ ವರ್ಗಕ್ಕೂ, ನಿಷ್ಠೆಯುಳ್ಳ ಆದೇಶವನ್ನು ಹೊರಡಿಸುವ ಜವಾಬ್ದಾರಿಯುಳ್ಳ ಹೆಡ್‌ಮಾಸ್ಟರ್ ಪಾತ್ರ ಬಹು ಮುಖ್ಯವಾದದ್ದು. ಇದರ ಜೊತೆಯಲ್ಲಿ ಆರೋಗ್ಯದ ಬಗೆಗೆ ಶಿಕ್ಷಣವದಷ್ಟೇ ಒತ್ತು ಕೊಟ್ಟು ಕುಟುಂಬ ಯೋಜನೆ ಎಂಬ ಕಾರ್ಯ ಕ್ರಮದ ಜವಾಬ್ದಾರಿ ಊರಿನ ಆರೋಗ್ಯವನ್ನು ಸರಿಪಡಿಸುವ ನಿಟ್ಟಿನಲ್ಲಿ ಸಂಜೀವ, ಗಿರಿಜಳ, ನಾಸಿರ್, ಕುಂಞಲಿಮ್ಮಾ, ಆಯುಷಾ, ಚಾಂದ್ ಅಲೀ, ಮುಂತಾದವರು ಸೇರಿದಂತೆ ಶಿಕ್ಷಣ ಆರೋಗ್ಯದ ಬಗೆಗೆ ಭಿನ್ನ ಭಿನ್ನ ನೆಲೆಗಳ ಮೂಲಕ ಸಮಾಜ ಸೇವೆಗಾಗಿ ಹಲವು ಆಪಾದನೆಗೆ ಎದುರಾದರು ತಮ್ಮ ವೃತ್ತಿಯನ್ನು ನಿಷ್ಠೆಯಿಂದ ಪಾಲಿಸುವಂತಹದ್ದು ಕಾಣುತ್ತೇವೆ. ಹೀಗೆ ಇಡೀ ಕಾದಂಬರಿಯಲ್ಲಿ ಪ್ರಾದೇಶೀಕ ಭಾಷೆಯೊಡನೆ ಊರ್ದು ಮಿಶ್ರಿತ ಕನ್ನಡ, ಇಂಗ್ಲೀಷ್ ಬೆರೆತು ಮುತ್ತಪ್ಪಾಡಿ ಎಂಬ ಗ್ರಾಮ ಇಡೀ ಕಾದಂಬರಿಯ ಸ್ವರೂಪವನ್ನು ಸಮಾಜದ ನಾಗರೀಕತ್ವನ್ನು ಸೂಚಿಸುವ ನಿಟ್ಟಿನಲ್ಲಿ ಕಾದಂಬರಿಯನ್ನು ಬೊಳುವಾರರು ತಮ್ಮ ಸೃಜನಶೀಲ ಬರೆಹಗಳ ಮೂಲಕ ಅಭಿವ್ಯಕ್ತಿಸಿರುವುದು ಸ್ಪಷ್ಟವಾಗಿದೆ.

ಅಧ್ಯಾಯ – ೪

ಕಾದಂಬರಿಯಲ್ಲಿ ಕಂಡುಬರುವ ಭಿನ್ನ ನೆಲೆಗಳು

೧. **ಮಹಿಳಾ ಪ್ರಜ್ಞೆ:-** ಸ್ತ್ರೀಯರ ವಿಷಯ ಜಗತ್ತಿನಾದ್ಯಂತ ಆರ್ವಾಚೀನ ಕಾಲಗಿಂತಲು ಇಂದು ಹೆಚ್ಚು ಮಹತ್ವ ಪಡೆದಿದೆ. ಮಹಿಳೆಯರು ಯಾವುದೇ ಸಮುದಾಯ ಅಥವಾ ರಾಷ್ಟ್ರಕ್ಕೆ ಸೇರಿದವರಾಗಿರಲಿ ತಾರತಮ್ಯವನ್ನು ವಿಭಿನ್ನ ನೆಲೆಗಳ ಮುಖಾಂತರ ಅನುಭವಿಸಿರುವುದನ್ನು ಕಾಣುತ್ತೇವೆ.

ಇಪ್ಪತ್ತನೆಯ ಶತಮಾನದ ಆದಿಭಾಗದಲ್ಲಿ ಮೊದಲು ದಾಖಲಿಸಬೇಕಾದ ಹೆಸರೆಂದರೆ ಪ್ರಸಿದ್ಧ ಕಾದಂಬರಿಕಾರ್ತಿ ವರ್ಜೀನಿಯಾ ವುಲ್ಫ್ (೧೮೮೨-೧೯೪೧) ಸ್ತ್ರೀಯರ ಆಂತರಂಗಿತ ವಿಶ್ವವೇ ಕೇಂದ್ರದಲ್ಲಿರುವ "ಮಿಸಿಸ್ ಡ್ಯಾಲೋವೇ" "ಟುದ ಲೈಟ್‌ಹೌಸ್" ಇತ್ಯಾದಿ ಅಸಾಮಾನ್ಯ ಕಾದಂಬರಿಗಳನ್ನು ರಚಿಸುವ ವುಲ್ಫ್ "ತನ್ನದೇ ಆದ ಸ್ವತಂತ್ರ ಕೊಠಡಿ"[೧] (A Room of one's own 1929) ಎಂಬ ಧೀರ್ಘ ಪ್ರಬಂಧದಲ್ಲಿ ಆಧುನಿಕ ಸ್ತ್ರೀವಾದದ ಮುಖ್ಯಂಶಗಳೆಲ್ಲವನ್ನು ಮಂಡಿಸುತ್ತಾಳೆ.

ಆ ನಿಟ್ಟಿನಲ್ಲಿ "ದ್ವಿತೀಯ ಲಿಂಗ" ಕೃತಿಯಲ್ಲಿ ಮುಖ್ಯವಾಗಿ ೨ ಭಾಗಗಳಿವೆ. 'ಸತ್ಯ ಮತ್ತು ಕಟ್ಟು ಕಥೆಗಳು' (Facts and Myths) ಎಂಬ ಮೊದಲನೆಯ ಭಾಗದಲ್ಲಿ ಹೇಗೆ ಪ್ರಾಚೀನ ಕಾಲದಿಂದಲೂ ಪುರುಷರು ಸ್ತ್ರೀಯನ್ನು ಸ್ವತಂತ್ರ ವ್ಯಕ್ತಿಯಂತಲ್ಲದೆ, ಪುರುಷತ್ವಕ್ಕೆ ಪೂರಕವಾಗುವ 'ತಾಯಿ', 'ಪತ್ನಿ', ವೇಶ್ಯೆ' ಇತ್ಯಾದಿ ಸಿದ್ಧ ಪಡೆಯಚ್ಚುಗಳಲ್ಲಿ ಕಂಡಿದ್ದಾರೆಂಬುದನ್ನು ಸಾದಾರವಾಗಿ ಸಿಮೋನ್ ದಾಖಲಿಸತ್ತಾಳೆ."೨

ಮಹಿಳೆಯರ ಪೂರ್ವ ಸ್ಥಿತಿಯನ್ನು ಅವಲೋಕಿಸಿದರೆ ಪಾಶ್ವಾತ್ಯ ಲೇಖಕಿಯ ಹೇಳಿಕೆ "ಅವಿದ್ಯಾವಂತಳ ಭೌತಿಕ ಮಟ್ಟ ಮತ್ತು ಸೃಜನಶೀಲತೆ ಬಲು ಕೀಳು ಮಟ್ಟದ್ದು ಎಂದು ವಾದಿಸಿದರು. ಮಹಿಳಾ ಲೇಖಕಿ ಅಫ್ರಾಳ ಚಿಂತೆನೆಯಾಗಿದೆ. ಮುಸ್ಲಿಂ ಮಹಿಳೆಯರು ಸಾಮಾನ್ಯವಾಗಿ ಹದಿಸ್ (ಪ್ರವಾದಿಯ ನಡೆ ನುಡಿ) ಹೆಸರಿನಲ್ಲಿ ತಮ್ಮ ಹಕ್ಕುಗಳಿಂದ ವಂಚಿತರಾಗುತ್ತಿದ್ದಾರೆ. ಇದು ಕುರಾನ್‌ನ ಆಶಯಯಿಗಳಿಗೆ ಅನುಗುಣವಾಗಿಲ್ಲವೆಂದು ತೋರಿಸಿಕೊಟ್ಟಾಗ ಕೆಲವು ಹದಿಸ್‌ಗಳನ್ನು ಸಾದರಪಡಿಸಲಾಗುತ್ತದೆ. ಈ ಪ್ರಚಾರ ಯಂತ್ರಕ್ಕೆ ಮಧ್ಯಯುಗದ ಮುಸ್ಲಿಂ ರಾಜರ ಆಳ್ವಿಕೆ ಇದೇ ಮುಸ್ಲಿಂ ಜನಾಂಗದ ಸಾರ್ವಕಾಲಿಕ ಕಾರ್ಯಕ್ಕೆ ಪುರಾವೆಯಾಗುತ್ತದೆ. ಅವಿದ್ಯೆ ಮತ್ತು ಸಾಮಾಜಿಕ ಹಿಂದುಳಿದಿರುವಿಕೆಯಿಂದ ಮುಸ್ಲಿಂರಲ್ಲಿ ತುಂಬಿಕೊಂಡಿರುವ ಕಂದಾಚಾರ, ಸಂಪ್ರದಾಯ ಶರಣತೆ, ಒಳಸಂಚಿನಂತೆ

ಗೊಂದಲಕ್ಕೀಡಾಗಿದೆ. ಅಧಿಕಾರ ಪದವಿಗಳಿಗೋಸ್ಕರ ಹೊಡೆದಾಟ, ರಕ್ತಪಾತ ಎಲ್ಲ ಪಾಳೆಯಗಾರಿ ರಾಜಸತ್ತೆಯ ಲಕ್ಷಣಗಳಾಗಿದ್ದರೂ, ನಮ್ಮ ಚರಿತ್ರೆಯ ಮುಸ್ಲಿಂ ರಾಜರ ದಂಡಯಾತ್ರೆ ಮತ್ತು ಅವರು ಭಗ್ನಗೊಳಿಸಿದ ದೇವಾಲಯಗಳ ಅವಶೇಷಗಳ ಹೊರೆಯನ್ನು ಈ ನಾಡಿನ ಎಲ್ಲ ಮುಸ್ಲಿಂರ ತಲೆಯ ಮೇಲೂ, ಎಲ್ಲ ಕಾಲಕ್ಕೂ ಹೊರಿಸಿಬಿಡಲಾಗಿದೆ. ಹಾಗೆಯೇ ಸಾಮ್ರಾಜ್ಯಶಾಹಿ, ಬಂಡವಾಳಶಾಹಿ, ರಾಜಕಾರಣದ ಅನಿವಾರ್ಯ ಫಲಶೃತಿಯಾಗಿರುವ ದೇಶ ವಿಭಜನೆಯ ಸಂಪೂರ್ಣ ಜವಾಬ್ದಾರಿಯನ್ನು ಮುಸ್ಲಿಂರ ಮೇಲೆ ಮಾತ್ರ ಹೊರಿಸಲಾಗಿದೆ. ಈ ಕಾರಣದಿಂದ ಕೋಮು ಘರ್ಷಣೆಗಳಲ್ಲಿ ಬಡ ಮುಸ್ಲಿಮರು ಅನ್ನದ ಆಸರೆಯನ್ನು ಕಳೆದುಕೊಳ್ಳುವುದು. ಮುಗ್ದಜೀವಿಗಳು ಬಲಿಯಾಗುವುದು. ನಮ್ಮ ವಿದ್ಯಾವಂತರಿಗೂ ಭಯಂಕರವಾಗಿ ಕಾಣಿಸಿಕೊಳ್ಳುವುದಿಲ್ಲ. ಅದು ಮುಸ್ಲಿಂರ ಅಪರಾದಕ್ಕೆ ಅವರಿಗಾದ ಶಿಕ್ಷೆ ಎಂದು ಯೋಚಿಸುವುದು ಇವರಿಗೆ ಅಭ್ಯಾಸವಾಗಿದೆ.

ಮುಸ್ಲಿಂರ ಬಗೆಗಿನ ತಿರಸ್ಕಾರ, ದ್ವೇಷ, ಸಂಶಯ ಮತ್ತು ಬೇದರಿಕೆಯ ಭಾವನೆಗಳು ಕೂಡ ನಮ್ಮ ನಗರಗಳ ಅರೆಶಿಕ್ಷಿತರಲ್ಲಿ ಮಾತ್ರ ಕಾಣಿಸಿಕೊಳ್ಳುವ ಪ್ರವೃತ್ತಿಯಲಿದೆ. ಈ ನಿಟ್ಟಿನಲ್ಲಿ ಹಿಂದೂ ಸಂಸ್ಕೃತಿ ಮತ್ತು ಸಮಾಜದಲ್ಲಿ ಕೂಡ ಕ್ರೂರತೆ, ಹಿಂಸೆ ಇನ್ನೂ ಹೆಚ್ಚಾಗಿ ಕಂಡುಬಂದರೂ ಅದು ಗೌಪ್ಯವಾಗಿದೆ. ಬಹುಶಃ ಹಿಂದೂ-ಮುಸ್ಲಿಂ ನಡುವಿನ ಬದುಕು ಬವಣೆಯನ್ನು ತಕ್ಕಡಿಯಲ್ಲಿ ಸರಿಸಮಾನ ಮಾಡುವ ಹಾಗೆ 'ಸ್ವಾತಂತ್ರ್ಯದ ಓಟ' ಕಾದಂಬರಿಯಲ್ಲಿ ಬೊಳುವಾರರ ವಿಭಿನ್ನ ನೆಲೆಗಳಲ್ಲಿ ಗುರುತಿಸಿರುವುದು ವಿಶಿಷ್ಟವಾಗಿದೆ.

ಕಾದಂಬರಿಯ ಪ್ರಾರಂಭದಲ್ಲಿ ಇಬ್ಬರು ಸಿಖ್ ಹೆಣ್ಣು ಮಕ್ಕಳಿಬ್ಬರಿಗೆ ಸಹಾಯ ಮಾಡಲೆಂದು ಪಾಕಿಸ್ತಾನದ ಗಡಿ ದಾಟಿ ಭಾರತಕ್ಕೆ ಬಂದ ಮುಸ್ಲಿಮ್ ಹುಡುಗನೊಬ್ಬ ತನ್ನ 'ಮಾತೃಭೂಮಿ'ಗೆ ಹಿಂತಿರುಗಿ ಹೋಗಲಾರದ ಇಕ್ಕಟ್ಟಿಗೆ ಸಿಕ್ಕಿಕೊಂಡು ಭಾರತದಲ್ಲೇ ಉಳಿದು, ಐವತ್ತು ವರ್ಷಗಳ ಕಾಳದಲ್ಲಿ ಅನುಭವಿಸುವ ಸಂತೋಷ, ಸಂಕಟಗಳ ಸಂಕಥನ ಈ ಕಾದಂಬರಿ. ಮಹಿಳಾ ಭವನಾತ್ಮಕ ಬದುಕನ್ನು ಚಾಂದ್ ಅಲೀ ಎಂಬ ಪಾತ್ರ ಬಿಡುಗಡೆ ಗೊಳಿಸುವುದೇ ಕಾದಂಬರಿಯ ಮೊದಲ ನೋಟ.

ಮೊಹಿಂದರ್ ಭಾಬಿ ಮತ್ತು ತನ್ವೀರ್ ಕೌರ್ ಕಾದಂಬರಿಯಲ್ಲಿ ಪ್ರಾರಂಭವಾಗುವ ಪ್ರಸಂಗ ದೆಹಲಿಯ ನಿಜಾಮುದ್ದೀನ್ ದರ್ಗಾದಿಂದ ನಾಲ್ಕು ಮೈಲು ಪೂರ್ವಕ್ಕೆ ಇದ್ದ ಬಟ್ಟೆ ಗಿರಣಿಯ ಆವರಣದಲ್ಲಿ ಸಿರಿವಂತ ದೇಶ ಪ್ರೇಮಿಯೊಬ್ಬರು ತೆರೆದಿಟ್ಟ 'ನಿರಾಶ್ರಿತರ ಶಿಬಿರ'ದಲ್ಲಿ ಬೆಳಗ್ಗಿನ 'ದಾಲ್ ರೊಟ್ಟಿ'ಗಾಗಿ ಆರು ಸಾಲುಗಳಲ್ಲಿ ನಿಂತಿದ್ದ ಎಲ್ಲರು ಒಗ್ಗಟ್ಟಿನಿಂದ ಧ್ವನಿ ಗೂಡಿಸಿದರು. "ಜೈ ಒಂದೇ ಮಾತರಂ".... ಬಳಿಕ ರೊಟ್ಟಿಯನ್ನು ಸಮವಾಗಿ ಹಂಚಿ ತಿನ್ನುತ್ತಾರೆ"[೩] ಅಲ್ಲಿನ ೬ನೇ ಸಾಲಿನಲ್ಲಿ ಮೊಹಿಂದರ್ ಕೌರ್‌ಳ ಬೆನ್ನ ಹಿಂದೆ ಒಬ್ಬೆಟ್ಟು

ಕೊಳ್ಳುತ್ತಿದ್ದ. ಚಾಂದ್ ಅಲೀಯ ಹಸಿವು ನೆನ್ನೆ ಮೊನ್ನೆಯದಲ್ಲದೇ ಆಗಾಗ ಅತಿಥಿಯಂತೆ ಧ್ವನಿ ಇಲ್ಲದ ಪಶುವಾಗೇ ಕಂಡಿದ್ದು, ತನ್ವೀರ್ ಕೌರಳ ಆಕೆ ಗುರುತಿಸಿದಳು. ಈ ಪ್ರಸಂಗದಲ್ಲಿ ಚಾಂದ್ ಅಲೀ ಒಬ್ಬರಿ ಸಿಖ್ ಮಹಿಳೆಯರಿಗೆ ಗಡಿ ದಾಟಿಸುವ ಚಿಂತನೆಯಲ್ಲಿ ಮಗ್ನನಾಗಿದ್ದರು. ಆ ಸನ್ನಿವೇಶಗಳ ನಡುವ ತನ್ವೀರ್ ಕೌರ್ ಆಕೆ ಅಪರಿಚತ ವ್ಯಕ್ತಿಯಾಗಿದ್ದ ಚಾಂದ್ ಅಲೀಯ ಬಗ್ಗೆ ತಿಳಿಯಲು ಹಂಬಲಿಸುತ್ತಾಳೆ. ತನ್ವೀರ್ ಕೌರ್‌ಳ ಚಿತ್ತದಲ್ಲಿ ಆತ ಯಾವ ಊರು? ಎಷ್ಟು ದೂರ? ಎಷ್ಟು ದಿನಗಳು? ಬಾಡಿಗೆಯ ಮನೆಯಲ್ಲಿರುವುದೇ? ಎಲ್ಲವೂ ಆಕೆಗೆ ಪ್ರಶ್ನೆಗಳು ಮಾತ್ರ ಉಳಿಯುತ್ತಿವೆ. ಬಹುಶಃ ಆತ ಅಪರಿಚಿತನಾದರೆ ಅವನಿಗೆ ಗೊತ್ತಿರಬಹುದು ಎಂಬ ಊಹೆಗೆ ಈಕೆಗೆ ಗೊಂದಲಗಿಡುಮಾಡಿದೆ. ಶಿಬಿರವಾಸಿಗಳ ಕಣ್ಣಿಗೆ ಕ್ಷಣ ಮಾತ್ರವು ಬಿಂಬವಾಗದಂತೆ ತಲೆ ತಗ್ಗಿಸಿಯೇ ನೆರಳೆ ಮರದ ಮರೆಯಲ್ಲಿ ಕುಳಿತಿರುತ್ತಿದ್ದ ಅಥವಾ ಮೊಹಿಂದರಳ ಬೆನ್ನ ಹಿಂದೆ ಬಚ್ಚಿಟ್ಟುಕೊಳ್ಳುತ್ತಿದ್ದ. ಚಾಂದ್ ಅಲೀಯ ಆತಂಕದ ಬೀಜ ತಾನು ಎಂಬ ಕೊರಗು ತನ್ವೀರಳನ್ನು ಕ್ಯಾಂಪಿಗೆ ಕಾಲಿರಿಸಿದ ಕ್ಷಣದಿಂದಲೇ ಹಿಂಸಿಸುತ್ತಿತ್ತು. ಆದರೆ ಅಕ್ಕ ಮೊಹಿಂದರ್ ಅಷ್ಟೆಲ್ಲ ಒತ್ತಾಯಿಸಿದಾಗಲೂ ಲಾರಿಯೇರಿ ಶಿಬಿರದವರೆಗೆ ಜೊತೆಯಾಗಲು ನಿರಾಕರಿಸಿದ್ದ ಚಾಂದ್ ಅಲೀ, ತನ್ನ ಮಾತಿಗೇಕೆ ಒಪ್ಪಿಕೊಂಡ? ಥೇ! ಅವನು ಒಪ್ಪಿಕೊಂಡಿರದೇ ಇರುತ್ತಿದ್ದರೆ ಚೆನ್ನಾಗಿತ್ತು. ಅವನಾದರೂ ಸುಖವಾಗಿರುತ್ತಿದ್ದ.

ಚಾಂದ್ ಅಲೀಯು ಏರಿದ್ದ ಲಾರಿಯು ಪಾಕಿಸ್ತಾನದ ಗಡಿಯ ದಾಟಿ ನೇರವಾಗಿ ಭಾರತದೆಡೆಗೆ ಹೋಗುತ್ತಿರುವುದನ್ನು ಸರಿಯಾದ ರೀತಿಯಲ್ಲಿ ತಿಳಿದಿರಲಿಲ್ಲ. ಲಾರಿಯ ಕುಲುಕಾಟಕ್ಕೆ ಒಬ್ಬರಿಗೊಬ್ಬರು ತಾಕುವ ಭುಜವು ಯಾರೆಂಬುದು ಮೊಹಿಂದರ್ ಬಾಬಿಯದ್ದೇ ಅಥವಾ ತನ್ವೀರಳದ್ದೇ? ಈ ರಾತ್ರಿಯ ವೇಳೆಯಲ್ಲಿ ಪಕ್ವವಾಗಿ ಗೊತ್ತಾಗದೆ ಹತ್ತಿರದಲ್ಲಿರುವಂತಹ ಮರದ ಹಲಗೆಗಳನ್ನು ಬಲವಾಗಿ ಹಿಡಿದುಕೊಂಡು ಆ ಕಗ್ಗತ್ತಲೆಯಲ್ಲಿ ಒಬ್ಬರಿಗೊಬ್ಬರು ತಿಳಿಯಲಾರದೆ ಚಾಂದ್ ಅಲೀಯು ಒಂದು ಕ್ಷಣ ಹಿಂದಿರುಗಿ ಕಾಲ ಬುಡದತ್ತ ಕಣ್ಣು ಇಳಿಸಬೇಕೆಂದು ಯೋಚಿಸಿದನು.

ಹಾಗೆ ಗಾಬರಿಯಲ್ಲಿ ನಿಲ್ಲುತ್ತಾನೆ. ಹರೀಭಾಗನ ಉತ್ತರ ದಿಕ್ಕಿನ ಗೇಟಿನ ಬಳಿಯ ಸೇತುವೆಗೆ ಒತ್ತಿಕೊಂಡೇ ಇರುವ ಮನ್ಸೂರು ಖಾನರ ಇದ್ದಲು ಗೋದಾವಿನ ದಿಕ್ಕಿನಿಂದ ಧ್ವನಿ ಕೇಳಿಸುತ್ತಿದೆ. ನಾಲ್ಕು ಹೆಜ್ಜೆ ನಡೆದ ಚಾಂದ್ ಅಲೀ ಹಾವು ತುಳಿದವನಂತೆ ತತ್ತರಿಸಿದ್ದ! ಗೋಪಾಮಿನ ಎಡಭಾಗದಲ್ಲಿದ್ದ ಅರೆತೆರೆದ ಕಿಟಕಿಯ ಮೂಲಕ ಹೊರಚಾಚಿರುವ ಹೆಣ್ಣು ಕೈಯೊಂದು ತನ್ನನ್ನು “ಬಾ” ಎಂದು ಕಾತರಿಸುತ್ತಿದೆ. ಯಾರು ಈ ಹೆಣ್ಣು? ಇದ್ದಲ ಗೋಡೌನಿನೊಳಗೇನು ಮಾಡುತ್ತಿದ್ದಾಳೆ?

"ನಾವಿಲ್ಲಿ ಇಬ್ಬರಿದ್ದೇವೆ. ತನ್ವೀರ್ ಕೂಡಾ"

"ಇಬ್ಬರು! ಹಾಗಾದರೆ ಉಳಿದವರು?!"

ನಡುಗುತ್ತಿರುವ ಕಾಲುಗಳಿಗೆ ಶಕ್ತಿ ತುಂಬಲು ಯತ್ನಿಸುವವನಂತೆ ದೇಹದ ಭಾರವನ್ನು ಎಡಬಲಕಾಲುಗಳಿಗೆ ವರ್ಗಾಯಿಸುತ್ತಿದ್ದವನ ದೇಹವೆಲ್ಲವೂ ಕಿವಿಯಾಯಿತು."[೪]

ಮಾತು ಕೇಳುತ್ತಿದ್ದಂತೆ ಎದೆಬಡಿತ ಜೋರಾಯಿತು.

ತಾನೇನು ಮಾಡಬೇಕು ಈಗ?

ಯಾ ಅಲ್ಲಾಹುವೇ, ನನಗೆ ದಾರಿ ತೋರು, ಆತನಿಗೆ ಅಪರಿಚಿತ ನಾನು ಮತ್ತೇ ನನ್ನ ಸುತ್ತ ಮುತ್ತಲಿನಲ್ಲಿರುವವರೆಲ್ಲ ಅಪರಿಚಿತರೇ ಎಂಬ ಮನೋಭಾವದಿಂದ ಯಾವ ದಾರಿಯು ಗೋಚರಿಸದೇ ತಳಮಳಗೊಳ್ಳತ್ತಾನೆ. ಅಲ್ಲಿ ಮೊಹಿಂದರ್ ಬಾಬಿ ಮತ್ತು ತನ್ವೀರಳು ಇವರ ಪರಿಚಯ ಮತ್ತು ಸಂದರ್ಭಗಳ ಆ ಶಿಬಿರದ ಪ್ರಸಂಗಗಳನ್ನು ಕಾದಂಬರಿಕಾರರು ಮಾನವೀಯ ಗುಣದಿಂದ ಅಪರಿಚಿತರನ್ನು ಪರಿಚಿತ ಮಾಡುವ ಮುಖಾ-ಮುಖಿಯೇ ಈ ಕಾದಂಬರಿಯ ಮೊದಲ ಮಹಿಳಾ ಮತ್ತು ಪುರುಷರ ನಡುವೆ ಅಂತಃಕರಣ ಇರುವುದನ್ನು ಕಾಣುತ್ತೇವೆ. ಇಬ್ಬರು ಮಹಿಳೆಯರ ಕಣ್ಣೀರು ದುಃಖ ದುಮ್ಮಾನಗಳನ್ನು, ಆ ಯಾತನೆಯನ್ನು ನಿಟ್ಟುಸಿರುಗೊಳ್ಳಲು ಕಗ್ಗಂಟಾಗಿ ಇಡೀ ವಾತಾವರಣವನೇ ಹಿಂಡುವ ಸ್ಥಿತಿ ಕಾಣುತ್ತದೆ. ಗಲಭೆಯಲ್ಲಿ ತನ್ನನ್ನು ಅಪ್ಪಿಕೊಂಡೇ ನಡುಗುತ್ತಿರುವ ಅಕ್ಕನನ್ನು ಅದ್ಯಾರು ಎಳೆಯುತ್ತಿರುವುದು?

ತನ್ವೀರ್ ಕಿಟಾರನೆ ಕಿರುಚಿಕೊಂಡಳು. "ಅಯ್ಯೋ ಅದ್ಯಾರು ತನ್ನನ್ನು ಹೊತ್ತು ಒಯ್ಯುತ್ತಿರುವುದು?

"ಅಕ್ಕಾ....... ಎಲಿದ್ದೀಯೇ.......?

"ಮಾ.......! ಮಾರೋ......."[೫]

ಮೊಹಿಂದರಳಿಗೆ ಎಚ್ಚರವಾದಾಗ ಪಕ್ಕದಲ್ಲಿ ಕುಳಿತಿರುವ ತನ್ವೀರ್ ಚೀರಾಡುತ್ತಾಳೆ.. ತಾವು ಈಗ ಎಲ್ಲಿದ್ದೇವೆ ಎಂಬುದನ್ನು ನಿರ್ಧರಿಸುವಷ್ಟರಲ್ಲಿ ಅವರಿಬ್ಬರನ್ನು ಒಯ್ಯುತ್ತಿದ್ದ ಮೋಟಾರು ಕಾರಿನ ಮುಂಬಾಗದ ಗಾಜು ಠಳಲ್ಲನೆ ಒಡೆದು ಹೋಯಿತು. ಅಡ್ಡಾದಿಡ್ಡಿ ಓಲಾಡಿದ ಕಾರು ಗಕ್ಕನೆ ನಿಂತುಬಿಟ್ಟಿತು. ಕಾರಿನ ಮೇಲೆ ನಾಲ್ಕು ದಿಕ್ಕುಗಳಿಂದಲೂ 'ಥಬಥಬ' ಎಂದು ಹೊಡೆಯುತ್ತಿದ್ದರು.

ಆವೇಶ ಬಂದವಳಂತೆ ಮೈ ಕೊಡವಿದ ತನ್ವೀರ್ ಕಾರ್ ಅಕ್ಕನನ್ನು ದಬ್ಬಿಕೊಂಡು ಕಾರೊಳಗಿನಿಂದ ಹೊರಗಿಳಿದಳು. ರಸ್ತೆ ರಣರಂಗವಾಗಿತ್ತು. ಮಬ್ಬು ಬೆಳಕಿನಲ್ಲಿ ಸುತ್ತಲೂ ಕಣ್ಣಾಡಿಸಿದ ತನ್ವೀರ್ "ಅಕ್ಕಾ..... ಬಾ.." ಎಂದವಳೇ, ಪಕ್ಕದಲ್ಲಿದ್ದ ಅರೆ ಆಳೆತ್ತರದ ಚರಂಡಿಗೆ

ಅಕ್ಕನನ್ನು ಎಳೆದುಕೊಂಡು ಹಾರಿದ್ದಳು. ಮುಗ್ಗರಿಸಿ ಬಿದ್ದ ಮಾಹಿಂದರಳನ್ನು ರಟ್ಟೆ ಹಿಡಿದು ಎಬ್ಬಿಸಿದ ತನ್ವೀರ್ "ಅಕ್ಕಾ ಈಗ ಬೇರೆ ದಾರಿಯಲ್ಲಿ, ಓಡು" ಎಂದು ಏಳುತ್ತಾಳೆ.

ನಾಲ್ಕಾರು ನಿಮಿಷಗಳಷ್ಟು ಹೊತ್ತು ಇಬ್ಬರು ಚಿರತೆಯಂತೆ ಚಿಮ್ಮಿದ್ದರು.

"ಹರೀಭಾಗನ ಉತ್ತರ ಸೇತುವೆಯ ಬಳಿ ತಲುಪಿದಾಗ ಮೊಹಿಂದರ್ ಬಳ್ಳಿಯೊಂದನ್ನು ಎಡವಿ "ಹಾ..... ತನ್ವೀರ್....." ಎನ್ನುತ್ತಲೇ ಎಂದು ಬೀಳುತ್ತಾಳೆ.[೬]

ಗಾಬರಿಕೊಂಡ ತನ್ವೀರಳ ಕಣ್ಣಿಗೆ ಸೇತುವೆಯ ಬಳಿಯಿದ್ದ ಕಟ್ಟಡದ ಮುರಿದ ಕಿಟಕಿ ಕಾಣಿಸಿತು.

ಅಕ್ಕ ನನ್ನ ಪ್ರಯಾಸದಿಂದ ಚರಂಡಿಯಿಂದ ಮೇಲಕ್ಕೆತ್ತಿ ಬಳಿಕ ಕಿಟಕಿಯೇರಿಸಿ ತಾನೂ ಅವಳ ಹಿಂದೆ ಒಳಕ್ಕೆ ಧುಮುಕುತ್ತಾಳೆ. ಮೊಹಿಂದರ್ ಭಾಬಿಯ ಮಾತುಗಳನ್ನೆಲ್ಲಾ ಎದೆಯೊಳಗೆ ತುಂಬಿಸಿಕೊಳ್ಳುತ್ತಿದ್ದ ಚಾಂದ್ ಅಲೀ ಮುಂದೇನು ಮಾಡಬೇಕು ಎಂಬುದನ್ನು ಅದಾಗಲೇ ನಿರ್ಧಾರ ಮಾಡಿರುತ್ತಾನೆ. ಅಷ್ಟರಲ್ಲಿ ಬಾಬಿಜೀ ಎದರಬೇಡಿ ಎಂದು ಮನವೊಲಿಸುವ ಮಾತುಗಳಿಂದ ಚಾಂದ್ ಅಲಿಗೆ ಮನಃಸ್ಥೈರ್ಯ ಕೊಡುತ್ತಾರೆ. ಆ ರಾತ್ರಿ ನಮಾಜಿನ ಸಂದರ್ಭವಾಗಿರುತ್ತದೆ. ಆ ಕ್ಯಾಂಪಿನಲ್ಲಿ ಖಾನ್‌ಚಾಚ್ ಎಂಬುವವನೊಡನೆ ಪರಸ್ಪರ ಮಾತುಕತೆಗಳಿಂದ ಭರವಸೆಯನ್ನು ಮೂಡಿಸುತ್ತದೆ. ಆ ಸಂದರ್ಭದಲ್ಲಿ ಅಲೀ ಎಂದು ಕರೆದರೆ ಖಾನ್‌ಚಾಚ ನೋಟುಗಳ ಕಂತೆಯೊಂದನ್ನು ಅವನತ್ತ 'ಚಾಚುತ್ತಾ' ನನ್ನಲ್ಲಿ ಇರುವುದೇ ಇಷ್ಟು ಅರವತ್ತು ಇರಬೇಕು, ಅವರಿಗೆ ಕೊಟ್ಟು ಬಿಡು ಅಲ್ಲಾಹು ಕಾಪಾಡುತ್ತಾನೆ"[೭] ಎಂದು ಹೇಳುವ ವಿಚಾರದ ಚಾಂದ್ ಅಲೀ ಮತ್ತು ಬಾಬಜೀಗೂ ವಿನಮ್ರತೆಯ ಮಾತುಗಳು ಪರಸ್ಪರ ಭಿನ್ನ ನೆಲೆಯಲ್ಲಿ ಕಾಣುತ್ತದೆ. "ನನಗೆ ಏಕೋ ಭಯವಾಗುತ್ತದೆ ಅಲೀ. ಕ್ಯಾಂಪಿನವರೆಗೆ ನೀನು ಬಂದರೆ ಬದುಕಿರುವವರೆಗೂ ನಿನ್ನ ಸಲುವಾಗಿ ದೇವರನ್ನು ಪ್ರಾರ್ಥಿಸುವೆ"[೮] ಮೊಹಿಂದರ್ ಬಾಬಿ ಅಳಲಾರಂಭಿಸುತ್ತಾಳೆ.

ಈಕೆಯನ್ನು ಗಮನಿಸಿದ ಚಾಂದ್ ಅಲೀಯು ಸಂದರ್ಭಕ್ಕೇ ಅನ್ವಯಿಸುವಂತೆ ತಬ್ಬಿಬ್ಬನಾಗುತ್ತಾನೆ. "ಈ ಬಾರಿ ಕ್ಯಾಂಪಿಗೆ ಹೋಗುತ್ತದೆ. ಲಾರಿಯಲ್ಲಿರುವವರೆಲ್ಲರು ನಿಮ್ಮವರೇ. ಕ್ಯಾಂಪಿನಲ್ಲಿ ನಿಮಗೆ ನಿಮ್ಮ ಮನೆಯವರು ಸಿಗುತ್ತಾರೆ. ನಾನು ಅಲ್ಲಿಯ ತನಕ ಬಂದು ಮಾಡುವುದು ಏನಿದೆ. ಪ್ರಶ್ನಾತ್ಮಕವಾಗಿ ಸಮದಾನ ಪಡಿಸುವ ಮೂಲಕ ಮನವೊಲಿಸುತ್ತಾನೆ"[೯] ಅಲ್ಲಿ ಸಹೋದರಿಯರಾದ ಮೊಹಿಂದರ್ ಬಾಬಿ ಕಲ್ಲಿನಂತೆ ನಿಲ್ಲುತ್ತಾಳೆ, ಅಕ್ಕನ ಬೆನ್ನ ಹಿಂದೆ ನಿಂತಿರುವ ತನ್ವೀರಳ ಅಭಿಪ್ರಾಯ ಏನೆಂದು ಚಾಂದ್ ಅಲೀಗೆ ಗೊತ್ತಾಗುವುದಿಲ್ಲ. ಅದುವರೆಗೂ ಅಂಗೈಯಲ್ಲಿಯೇ ಹಿಡಿದು ಕೊಂಡಿದ್ದ ರೂಪಾಯಿ ನೋಟುಗಳನ್ನು

ಮೊಹಿಂದರ್ ಬಾಬಿಯತ್ತ ಚಾಚಿದ ಚಾಂದ್ ಅಲೀ ತೀರ್ಪು ಹೇಳುವವನಂತೆ ಮಾತು ಉದುರಿಸಿದದ. "ಇದು ನಿಮ್ಮಲ್ಲಿರಲಿ, ಖಾನ್‌ಚಾಚ್ ನಿಮಗಾಗಿ ಕೊಟ್ಟ ಹಣ, ನೀವಿನ್ನು ತಡಮಾಡಬಾರದು, ದಯವಿಟ್ಟು ಲಾರಿಯನ್ನು ಅತ್ತಿ ಬಿಡಿ ಎಂದು ಮನವೊಲಿಸುತ್ತಾನೆ. ಇಂತಹ ಸಂದರ್ಭವನ್ನು ಗಮನಿಸಿದರೆ ಚಾಂದ್ ಅಲೀ ಎಂಬ ವ್ಯಕ್ತಿಗೆ ಧರ್ಮ ಪ್ರಮುಖವಲ್ಲದೆ ಮಾನವೀಯ ಗುಣಗಳು ಹೆಚ್ಚಾಗಿ ಕಾಣಲಾರಭಿಸುತ್ತದೆ. ಆ ಸಹೋದರಿಯರನ್ನು ಗಡಿ ಪ್ರದೇಶದಿಂದ ಬಿಡುಗಡೆಯ ನಿಟ್ಟಿನಲ್ಲಿ ಅವರವರ ಜೀವನದ ಕ್ರಮಗಳನ್ನು ಬಾವನಾತ್ಮಕ ಸನ್ನಿವೇಶಗಳನ್ನು, ಓದುಗರರ ಮನ್ನಣೆಗೆ ಪ್ರಮುಖ ಪಾತ್ರರಾಗುತ್ತಾರೆ. ಚಾಂದ್ ಅಲಿಯ ಬಗೆಗೆ ಆ ಸಹೋದರಯರಲ್ಲಿ ತನ್ವೀರ್ ಕಾರಳ್ ಬಲವಾದ ನಂಬಿಕೆ ಚಿರಸ್ಥಾಯಿಯಾಗಿ ಉಳಿದಿರುವ ಸಂದರ್ಭದಲ್ಲಿ ಅಂತಃಕರಣವನ್ನು ದಾರುಣ್ಯತನವನ್ನು ಆ ಸಂದರ್ಭದಲ್ಲಿ ಅಭಿವ್ಯಕ್ತಿಸುವುದು 'ಬಾ ಅಲೀ, ದಯವಿಟ್ಟು ನಮ್ಮ ಜೊತೆ ಬಾ"[೧೦] ಕ್ಯಾಂಪಿನೊಳಗೆ ಕಾಲಿರಿಸಿದ ಮರುಕ್ಷಣದಲ್ಲೇ ಅಕ್ಕ ತಂಗಿಯರಿಬ್ಬರ ಕಣ್ಣುಗಳೂ ಒಂದೇ ಮಾತನ್ನು ವಿನಿಮಯ ಮಾಡಿಕೊಂಡಿದ್ದವು. ಚಾಂದ್ ಅಲೀಯನ್ನು ಒತ್ತಾಯಿಸಿ ಕರೆತಂದದ್ದು, ತಪ್ಪೆಂದು ಆ ಸಹೋದರಿಯರು ಭಾವಿಸುತ್ತಾರೆ. ಬಹುಶಃ ಇಲ್ಲಿ ಸನ್ನಡತೆಯ ವಿಭಿನ್ನ ನೆಲೆಗಳನ್ನು ತನ್ವೀರ್ ಕೌರ, ಮೊಹಿಂದರ್ ಬಾಬಿ ಮತ್ತು ಚಾಂದ್ ಅಲೀ ಇವರುಗಳ ನಡುವಿನ ಅಂತಃಕರಣ ವಾತ್ಸಲ್ಯ ಎಷ್ಟರ ಮಟ್ಟಿಗೆ ಅಪಹಪಿಸುತ್ತದೆ. ಎಂದರೆ ಅವರವರ ಅರಿವಿನ ಯೋಚನೆಯನ್ನು ಪರಸ್ಪರ ಸಹಕಾರದೊಂದಿಗೆ ಮರುಗುವ ಚಿಂತನ, ಭಾವನಾತ್ಮಕ ನೆಲೆಗಳನ್ನು ಸವಿಸ್ತಾರವಾಗಿ ಕಾಣಲಾಗುತ್ತದೆ. ಕಾರಣಾಂತರದಿಂದ, ಶಿಬಿರದ ಸನ್ನಿವೇಶಗಳಲ್ಲಿ ನೆನೆಯುವ ಪರಿ 'ದೇವರು ಬಯಸಿದರೆ ನಮ್ಮ ಮನೆಯವರು ಇದೇ ಶಿಬಿರಕ್ಕೆ ಬರಬಾರದೆಂದೇನೂ ಇಲ್ಲವಲ್ಲಾ ಮೊಹಿಂದರ್ ಭಾಬಿ ಪ್ರತಿದಿನವೂ ತನ್ವೀರಳಿಗೆ ಹೇಳುತ್ತಿದ್ದರೆ ಹೌದಕ್ಕಾ ಎಲ್ಲರೂ ಖಂಡಿತವಾಗಿ ಇಲ್ಲಿಗೆ ಬರುತ್ತಾರೆ."[೧೧] ತನ್ನ ಅಕ್ಕನಿಗೆ ತನ್ವೀರ್ ಕೌರಳು ಮನಸ್ಥೈರ್ಯವನ್ನು ಕೊಡುತ್ತಾಳೆ. ಚಾಂದ್ ಅಲೀಯು ಬಾಬೀಜೀಗೆ ಹೇಳುವ ಪ್ರಸಂಗ ಎದುರಾಗುತ್ತದೆ. "ಭಾಬೀಜಿ, ನಿಮ್ಮ ಮನೆಯವರು ಇಂದಲ್ಲ, ನಾಳೆ ನಿಮಗೆ ಸಿಗಬಹುದು. ನಾನು ಇಲ್ಲಿರುವುದರಿಂದ ಯಾರಿಗೂ ಪ್ರಯೋಜನವಿಲ್ಲ. ನಾನಿಲ್ಲಿಂದ ಹೇಗಾದರೂ ತಪ್ಪಿಸಿಕೊಮಡು ಊರಿಗೆ ಮರಳಿ ಹೋಗುವವನಿದ್ದೇನೆ."[೧೨] ಎಂದು ಚಾಂದ್ ಅಲೀಯಂ ಪದೆ ಪದೇ ಅರಿವು ಮೂಡಿಸುವ ನಿಟ್ಟಿನಲ್ಲಿ ತನ್ನ ಮಾತಿನ ಬಗ್ಗೆ ಅವನಿಗೇ ನಂಬಿಕೆ-ಯಾಗುತ್ತಿರಲಿಲ್ಲ. ಶಿಬಿರದಿಂದ ಹೊರಗೆ ಹೋಗಲು ಯಾರಿಗೂ ಅನುಮತಿಯಿದ್ದಿರಲಿಲ್ಲ. ಚಾಂದ್ ಅಲೀಯನ್ನು ಹೊರತುಪಡಿಸಿದರೆ ಉಳಿದವರಾರಿಗೂ ಆ ಬಗ್ಗೆ ಆಸಕ್ತಿಯೂ ಇದ್ದಂತಿರಲಿಲ್ಲ. ಮೊಹಿಂದರ್ ಭಾಬಿಯಂತೂ ಮಾತನ್ನಾಡುವುದನ್ನೇ ನಿಲ್ಲಿಸಿಬಿಟ್ಟಿದ್ದಳು. ಚಾಂದ್ ಅಲಿ ಭಾಬೀಜಿ ಎಂದು ಕರೆದರೆ ಸಾಕು ಗಳಗಳನೆ ಅತ್ತುಬಿಡುತ್ತಿದ್ದಳು. ಅವನ

ಮುಂಗೈ ಹಿಡಿದುಕೊಂಡು ತನ್ನ ಮನವೇದನೆಯನ್ನು ಹೇಳುವ ಕ್ರಿಯೆಯಲ್ಲಿ, ದುಃಖ ದುಮ್ಮಾನಗಳನ್ನು ಸವಿಸ್ತಾರವಾಗಿ ವ್ಯಕ್ತಪಡಿಸುತ್ತಾಳೆ. ಆ ಸಂದರ್ಭದಲ್ಲಿ ರಾಹುತ್‌ಸಿಂಗ್ ರವರೊಡನೆ ಅಕ್ಕ ತಂಗಿಯರ ಬದುಕಿನ ವೇದನೆ ಮತ್ತು ಚಿಂತನೆಗಳನ್ನು ಆ ಶಿಬಿರದಲ್ಲಿ ಪರಸ್ಪರ ಅಭಿವ್ಯಕ್ತಿಸುತ್ತಾರೆ. ಗೊಂದಲಗೀಡಾದ ಸಹೋದರಿಯ ನಿರ್ಧಾರಗಳು ಚಾಂದ್ ಅಲೀ ಆತನ ಅರಿವಿಗೆ ಬರುತ್ತಾರೆ. ಚಾಂದ್ ಅಲೀ ಮತ್ತು ರಾಹುತ್ ಸಿಂಗ್ ಹಿಂದೂಸ್ಥಾನದ ಸರ್ಕಾರ ಮತ್ತು ಪಾಕಿಸ್ತಾನದ ಸರ್ಕಾರದ ನಡುವೆ ಹಲವು ಭಿನ್ನ ಅಭಿಪ್ರಾಯಗಳನ್ನು ಪರಸ್ಪರ ದಿಕ್ಕು ತೋಚದಂತೆ ಯೋಚಿತೊಡಗುತ್ತಾನೆ. ಆ ಶಿಬಿರದಲ್ಲಿ ಹಲವು ಗಂಡಸರು, ಹೆಂಗಸರು ಬುಸುಗುಡುವ ಪ್ರಸಂಗವು ಮೊಹಿಂದರ್‌ಳು ಮತ್ತು ತನ್ವೀರ್ ಕೌರಳ್‌ಗೆ ಒಂದೆಡೆ ಹಿಂಸಿಸತೊಗಡಿತು. ಏಕೆಂದರೆ ಚಾಂದ್ ಅಲೀ ಆತನೊಡನೆ ಸ್ನೇಹ ಬೆಳೆಸಿರುವುದರಿಂದ ಅಲ್ಲಿ ಅಕ್ಕಳಾದ ಮೊಹಿಂದರ್ ಭಾಬಿ ತನ್ನ ಮನೆಯವರು ಸಿಗುವವರೆಗೆ ಚಾಂದ್ ಅಲೀಯು ರಕ್ಷಿಸುತ್ತಾನೆ. ಅಲ್ಲಿಯವರೆಗೆ ಅವನೊಡನೆ ಇರಬೇಕೆಂದು ನಿರ್ಧರಿಸಿರುತ್ತಾಳೆ. ಅದು ಸರಿಯೇ ಅಥವಾ ತಪ್ಪೋ ಎನ್ನುವ ಚಿಂತನೆಗೆ ಯಿಡಾಗ ತನ್ವೀರ್‌ಳ ಗೊಂದಲತೆಗೆ ಎಷ್ಟೋ ಕಾಲ ಕಳೆಯುತ್ತದೆ.

ಭಾರತದಿಂದ ನಿರಾಶ್ರಿತರಾದ ಮುಸ್ಲಿಂರನ್ನು ಆ ಶಿಬಿರದಲ್ಲಿ ಕೂಡಿಹಾದಿದ್ದು ಕೆಲವು ಸುದ್ದಿಗಳ ಮೂಲಕ ಪ್ರತಿದಿನವು ರೈಲುಗಾಡಿಗಳ ಮೂಲಕ ಪಾಕಿಸ್ತಾನಕ್ಕೆ ರವಾನಿಸುತ್ತಿರು-ವುದನ್ನು ಆಗಾಗ ಕೇಳುತ್ತಿರುವುದನ್ನು ಕಾಣುತ್ತೇವೆ. ಈ ಯೋಚನೆ ಎಲ್ಲ ಚಾಂದ್ ಅಲೀಯು ಪಾಕಿಸ್ತಾನಕ್ಕೆ ಹಿಂದಿರುಗಿಸುತ್ತಾರೋ ಅಥವಾ ಆತನನ್ನು ಶಿಕ್ಷಿಸುತ್ತಾರೋ ಎಂಬ ಚಾಂದ್ ಅಲೀಯ ನೆನೆದು ಸಹೋದರಿಯರು ಮರುಗುತ್ತಾರೆ. ಈ ಸುದ್ದಿಯು ಕೂಡ ಚಾಂದ್ ಅಲೀಗೆ ಒಮ್ಮೆ ರಾಹತ್‌ಸಿಂಗ್ ತಿಳಿಸಿರುತ್ತಾನೆ. ದೇಶ ದೇಶಗಳ ಸ್ನೇಹತ್ವದ ನಡುವೆ ಆಕ್ರೋಶ, ಅಂದಕಾರ, ಇಂತಹ ಪ್ರಜ್ಞೆಗಳ ನಡುವೆ ಸಹಕರಿಸಿದ ಪಾಕಿಸ್ತಾನದ ಚಾಂದ್ ಅಲೀಯ ವೇದನೆ ಮತ್ತು ಚಿಂತನೆಗಳನ್ನು ಆ ಶಿಬಿರದಲ್ಲಿ ಪರಸ್ಪರ ಅಭಿವ್ಯಕ್ತಿಸುತ್ತಾರೆ. ಗೊಂದಲಗೀಡಾದ ಸಹೋದರಿಯ ನಿರ್ಧಾರಗಳು ಚೌಂದ್ ಅಲೀ ಆತನ ಅರಿವಿಗೆ ಬರುತ್ತದೆ. ಚಾಂದ್ ಅಲೀ ಮತ್ತು ರಾಹುತ್ ಸಿಂಗ್ ಹಿಂದೂಸ್ಥಾನದ ಸರ್ಕಾರ ಮತ್ತು ಪಾಕಿಸ್ತಾನ್ ಸರ್ಕಾರದ ನಡುವೆ ಹಲವು ಭಿನ್ನ ಅಭಿಪ್ರಾಯಗಳನ್ನು ಪರಸ್ಪರ ದಿಕ್ಕು ತೋಚದಂತೆ ಯೋಚಿಸತೊಡಗುತ್ತಾನೆ. ಆ ಶಿಬಿದಲ್ಲಿ ಹಲವು ಗಂಡಸರು, ಹೆಂಗಸರು, ಬುಸುಗುಡುವ ಪ್ರಸಂಗವು ಮೊಹಿಂದರಳು ಮತ್ತು ತನ್ವೀರ್ ಕೌರಳ್‌ಗೆ ಒಂದೆಎ ಹಿಂಸಿಸತೊಡಗಿತು. ಏಕೆಂದರೆ ಚಾಂದ್ ಅಲೀ ಆತನೊಡನೆ ಸ್ನೇಹ ಬೆಳೆಸಿರುವುದರಿಂದ ಅಲ್ಲಿ ಅಕ್ಕಳಾದ ಮೊಹಿಂದರ್ ಭಾಬಿ ತನ್ನ ಮನೆಯವರು ಸಿಗುವವರೆಗೆ ಚಾಂದ್ ಅಲೀಯು ರಕ್ಷಿಸುತ್ತಾನೆ. ಅಲ್ಲಿಯವರೆಗೆ ಅವನೊಡನೆ ಇರಬೇಕೆಂದು

ನಿರ್ಧರಿಸಿರುತ್ತಾಳೆ. ಅದು ಸರಿಯೇ ಅಥವಾ ತಪ್ಪೋ ಎನ್ನುವ ಚಿಂತನೆಗೀಡಾಗಿ ತನ್ವೀರಳ ಗೊಂದಲತೆಗೆ ಎಷ್ಟೋ ಕಾಲ ಕಳೆಯುತ್ತದೆ.

ಭಾರತದಿಂದ ನಿರಾಶ್ರಿತರಾದ ಮುಸ್ಲಿಂರನ್ನು ಆ ಶಿಬಿರದಲ್ಲಿ ಕೂಡಿಹಾಕಿದ್ದು ಕೆಲವು ಸುದ್ದಿಗಳ ಮೂಲಕ ಪ್ರತಿದಿನವು ರೈಲಿಗಾಡಿಗಳ ಮೂಲಕ ಪ್ರತಿದಿನವು ರೈಲು ಗಾಡಿಗಳ ಮೂಲಕ ಪಾಕಿಸ್ತಾನಕ್ಕೆ ರವಾನಿಸುತ್ತಿರುವುದನ್ನು ಆಗಾಗ ಕೇಳುತ್ತಿರುವುದನ್ನು ಕಾಣುತ್ತೇವೆ. ಈ ಯೋಚನೆ ಎಲ್ಲಿ ಚಾಂದ್ ಅಲೀಯ ಪಾಕಿಸ್ತಾನಕ್ಕೆ ಹಿಮದಿರುಗಿಸುತ್ತಾರೋ ಅಥವಾ ಆತನನ್ನು ಶಿಕ್ಷಿಸುತ್ತಾರೋ ಎಂಬ ಚಾಂದ್ ಅಲೀಯ ನೆನೆದು ಸಹೋದರಿಯರು ಮರುಗುತ್ತಾರೆ. ಈ ಸುದ್ದಿಯು ಕೂಡ ಚಾಂದ್ ಅಲೀಗೆ ಒಮ್ಮೆ ರಾಹುತ್‌ಸಿಂಗ್ ತಿಳಿಸಿರುತ್ತಾನೆ. ದೇಶ ದೇಶಗಳ ಸ್ನೇಹತ್ವದ ನಡುವೆ ಆಕ್ರೋಶ, ಅಂದಕಾರ, ಇಂತಹ ಪ್ರಜ್ಞೆಗಳ ನಡುವೆ ಸಹಕರಿಸಿದ ಪಾಕಿಸ್ತಾನದ ಚಾಂದ್ ಅಲೀಯು ಈ ಮಹಿಳೆಯರ ಪರವಾಗಿ ದಿಟ್ಟ ನಿಲುವುಗಳನ್ನು ಯೊಚಿಸುತ್ತಾ ಸಹಕಾರ ಭಾಗಿತ್ವವನ್ನು ಅನುಸರಿಸುವುದನ್ನು ಅರಿತು ಕೊಂಡರೆ ಎಲ್ಲ ದೇಶಗಳಲ್ಲೂ ಎಲ್ಲರೂ ಕೆಟ್ಟವರಲ್ಲ. ಎಲ್ಲರೂ ಒಳ್ಳೆಯವರಲ್ಲ ಕೆಲವರಲ್ಲಿ ಮಾತ್ರ ಭಾವನಾತ್ಮಕ ಅಂತಃಕರಣ ಉಳ್ಳುವರು ಚಾಂದ್ ಅಲೀಯ ಸ್ವರೂಪದಲ್ಲಿ ತಿಳಿಯಹುದಾಗಿದೆ. ಈ ವಿಚಾರದ ನಡುವೆ ಶಿಬಿರದಲ್ಲಿ ಒಂದು ಸಣ್ಣ ಪ್ರಸಂಗವು ವಿಚಿತ್ರವೆನ್ನಿಸುತ್ತದೆ. ಸುಮಾರು ನಾಲ್ಕು ಎಕರೆಯಷ್ಟು ವಿಶಾಲವಾದ ಶಿಬಿರದ ಆವರಣ ಜನ ಗುಂಪು ಗುಂಪಾಗಿ ಕುಳಿತು ಅವರವರು ಬಂದ ಬಗೆಗಳನ್ನು ವಿವರಿಸುತ್ತಾ ನಡುವೆಯೇ ಒಂದು ಬಗೆಯಲ್ಲಿ ಪೈಪೋಟಿ ಇದ್ದಾಂತೆ ಸ್ಪಷ್ಟಗೊಳಿಸುತ್ತದೆ. ಆ ಸಂದರ್ಭದಲ್ಲಿ ಒಬ್ಬ ವಿಧವೆಯ ಪ್ರಸಂಗ ವಿಚಿತ್ರವೆನ್ನಿಸುತ್ತದೆ. ಎಲ್ಲೋ ಬಂದು ಗಂಡನ ದೇಹ ಹಸಿಯಾಗಿ ಬೆಂದುದ್ದನ್ನು ಕಂಡು ಮರುಗುವ ಸ್ಥಿತಿಯು ವಿಭಿನ್ನ ವೆನ್ನಿಸುತ್ತದೆ. ತನ್ನ ಅರವತ್ತು ವರ್ಷ ಸಂಗಾತಿಯಾದ ಹೆಂಡತಿ ಮಹಡಿಯಿಂದ ಹಾರಿ ತಲೆಹೊಡೆದುಕೊಂಡು ಸತ್ತು ಹೋದುದ್ದನ್ನು ಗಂಡ ಇರುವುದರ ಚಿತ್ರಣ ಮರುಕಳಿಸಿದರೆ, ಹೆರಿಗೆಗೆಂದು ತವರಿಗೆ ಬಂದಿದ್ದ ಮಗಳ ಮೇಲೆ ಅತ್ಯಾಚಾರವಾಗಿರುವುದನ್ನು ಕಂಡ ತಾಯಿ ಇರುವಿಕೆಯ ಪ್ರಸಂಗ ಮದುವೆಗೆ ಬೆಳೆದು ನಿಂತ ಮಗಳನ್ನು ಒತ್ತುಕೊಂಡು ಹೋಗುತ್ತಿರುವುದನ್ನು ನೋಡಿದ್ದ ತಂದೆಯ ಇರುವಿಕೆ ನಾಲ್ಕು ವರ್ಷದ ತಂಗಿಯನ್ನು ಬಾವಿಗೆ ಎಸೆಯುವುದನ್ನು ಕಂಡ ಅಣ್ಣನ ಇರುವಿಕೆ ಕಿಟಕಿ ಹಾರಿ ತಪ್ಪಿಸಿಕೊಂಡಿದ್ದ ಅಣ್ಣ ಬದುಕಿದ್ದಾನೋ ಇಲ್ಲವೋ ಎಂಬುದು ತಿಳಿಯದ ತಂಗಿಯ ಹೇಳಿಕೆ ಇರುವಿಕೆ. ಹಿಂಗೆ ಎಲ್ಲರ ನೋವು ಒಂದೇ ಬಗೆಯ ತೆರವಿರುವುದು ಎಲ್ಲರ ದ್ವೇಷ ಒಂದೇ ಬಗೆಯಲ್ಲಿರುವುದು ತಮ್ಮ ದುರಾವ್ಯವಸ್ಥೆಗೆ ಕಾರಣರಾದವರ ವಿರೋದ ಸೇಡು ತಿರಿಸಿಕೊಳ್ಳುವುದರ ಬಗ್ಗೆ ಅವರೆಲ್ಲರಿಗೂ ಭಿನ್ನಾಭಿಪ್ರಾಯಗಳು ಇಲ್ಲದಿರುವುದು. "ಸಾಯುವ ಮುನ್ನ ಒಬ್ಬನ ತಲೆಯನ್ನಾದರು"[೧೩] ಎಂಬ

ಒಬ್ಬನ ಮಾತು, ಪ್ರತಿಯೊಬ್ಬನ ಮಾತು ಆಗಿದೆ. ತನ್ವೀರಳಿಗೆ ಈ ವಿಚಾರ ಕೇಳಿದ ಕೂಡಲೇ ಖಾತರಿಯಾಗಿತ್ತು. ಆ ಸನ್ನಿವೇಶಗಳನ್ನು ಕಂಡು ತಮ್ಮ ಕುಟುಂಬದವರು ಒಂದು ವೇಲೆ ಬಂದರೆ ಚಾಂದ್ ಅಲೀಯ ಸಾವು ನಿಶ್ಚಿಯ ಎಂದು ಯೋಚಿಸುತ್ತಾಳೆ. ಆಕೆ ಯೋಚಿಸುವ ನಿಟ್ಟಿನಲ್ಲಿ ನಮ್ಮಿಬ್ಬರ ಸಲುವಾಗಿ ತಮ್ಮ ಪ್ರಾಣವನ್ನೇ ಒತ್ತೇ ಇಟ್ಟು ಬಂದವನು ಚಾಂದ್ ಅಲೀ. ಆತನಿಗೆ ಒಂದು ವೇಳೆ ಯಾವುದೆ ಅಪಾಯವಾದರೆ ಎಂದು ನೊಂದುಕೊಳ್ಳುತ್ತಾಳೆ. ಅಷ್ಟರಲ್ಲಿ ಮತ್ತೊಂದು ಪ್ರಸಂಗ ಎದುರಾಗುತ್ತದೆ. ಇದೊಂದು ಘೋಷಣೆಯ ಸನ್ನಿವೇಶ ಎದುರಾಗುತ್ತದೆ.

"ನಮ್ಮ ನೆಲ ನಮಗೆ ಕೊಡಿರಿ"

"ನಮ್ಮ ಮನೆ ನಮಗೆ ಕೊಡಿರಿ"

"ನಮ್ಮ ಮನೆ ನಮಗೆ ಬೇಕು"

"ಪಾಕಿಸ್ತಾನ ಮುರ್ದಾಬಾದ್"

"ವಂದೇ ಮಾತರಂ"

"ಭಾರತ್ ಮಾತಾಕೀ.."

"ಜೈ"[೧೪]

ತನ್ವೀರ್ ಹೇಳಿದ್ದಳು, " ಈ ದಿನ ನಮಗೆ ರೊಟ್ಟಿ ಇಲ್ಲ". ನೋಡು ನೋಡುತ್ತಿರುವಂತೆಯೇ ಗುಂಪು ಬೆಳೆಯತೊಡಗಿತ್ತು. ಇಡೀ ಶಿಬಿರವೇ ಘೋಷಣೆ ಕೇಳಿಸುತಿತ್ತು. ಶಬ್ದ ಈ ಸಂದರ್ಭ ದೇಶ ಪ್ರೇಮವನ್ನು, ಶಾಂತಿಯಿಂದ, ಆಕ್ರೋಶದಿಂದ. ಅರಿತುಕೊಂಡಿರುವ ಸ್ವದೇಶಿಯ ಪ್ರಜೆಗಳು, ಸ್ವದೇಶಿಯಲ್ಲಿಯೇ ಇರುವಂತಹ ಹಲವು ಅಪಹಪಿಸುವ ಜನರು ನಿಷ್ಠ ಬದುಕಿನ ಹಂದರದ ನೋವುಗಳನ್ನು ಅಭಿವ್ಯಕ್ತಿಸಲಾರದ ಜನರು ಕೂಡ ಆ ಶಿಬಿರದಲ್ಲಿ ಹೊಂದಿಕೊಂಡು ಇರುವುದನ್ನು ಸಂದರ್ಭ ವ್ಯವಸ್ಥೆಯನ್ನು ತಿಳಿಸುತ್ತದೆ.

ಈ ನಿಟ್ಟಿನಲ್ಲಿ ಮೊಹಿಂದರ್ ಭಾಬಿ ಮತ್ತು ತನ್ವೀರಳಿಗೆ ತಿಳಿಸದೆಯೇ ಶಿಬಿರದಿಂದ ಹೊರಟುಹೋಗಲು ಮಾರ್ಗಗಳನ್ನು ಹುಡುಕುತ್ತಿದ್ದ ಚಾಂದ್ ಅಲೀಗೆ ಶಿಬಿರದವರೇ ಸಾರಿ ತೋರಿಸಿದ್ದರು. ಖಾನ್ ಚಾಚ್ ಕೊಟ್ಟಿದ್ದ ಹಣವನ್ನು ಮೊಹಿಂದರ್ ಭಾಬಿ ತೆಗೆದುಕೊಳ್ಳಲು ಒಪ್ಪದ್ದರಿಂದ, ಅದು ಒಳಜೇಬಿನಲ್ಲಿ ಭದ್ರವಾಗಿದ್ದವು. ಇದೀಗ ಶಿಬಿರದವರೂ ಮೂವತ್ತು ರೂಪಾಯಿ ಕೊಡಲಿದ್ದಾರೆ. ಎರಡು ಮೂರು ತಿಂಗಳ ಖರ್ಚಿಗೆ ಯಾವ ತೊಂದರಯೂ ಇಲ್ಲ. ದಕ್ಷಿಣದ ರಾಜ್ಯಗಳಲ್ಲಿ ಗಲಭೆಯ ಸುದ್ದಿ ಕೂಡಾ ಸರಿಯಾಗಿ ತಲುಪಿಲ್ಲ ಎಂಬುದಾಗಿ

[illegible]

[illegible]

[illegible]

ಸ್ವಯಂ ಸೇವಕರು ಮಾತನಾಡಿಕೊಳ್ಳುತ್ತಿರುವುದನ್ನು ಕೇಳಿಸಿಕೊಂಡಿದ್ದ. ಬೊಂಬಾಯಿ ಅಥವಾ ಮದರಾಸು. ಯಾವುದಾದರೇನು? ಗಲಭೆ ತಣ್ಣಗಾಗುವ ತನಕ ಎಲ್ಲಾದರೂ ಇದುಬಿಡುವು. ಆ ಬಳಿಕ ಅಲ್ಲಾಹು ಇಷ್ಟಪಟ್ಟರೆ ಹೇಗಾದರೂ ಮಾಡಿ ಮತ್ತೊಂದು ಪ್ರದೇಶಕ್ಕೆ ಹೋಗುವ ಸನ್ನಿವೇಶ ಇದಾಗಿದೆ. ಅಷ್ಟರಲ್ಲಿ ರಾತ್ರಿಯ ಗಲಿಬಿಲಿಯಲ್ಲಿ ರಾಹುಲ್ ಸಿಂಗ್ ಮತ್ತು ಚಾಂದ್ ಅಲೀಯ ಪರಸ್ಪರ ಗೊಂದಲಗೀಡಾದ ಸಂದರ್ಭವು ಎದುರಾಗುತ್ತದೆ. "ನಿಜಾಮುದ್ದೀನ್ ದರ್ಗಾದ ಬಳಿಯಲ್ಲಿರುವ ಕ್ಯಾಂಪಿಗೆ ನೀನು ನಾಳೆ ಬೆಳಿಗ್ಗೆಯೇ ದಾಳಿ ಇಡುವವನು?"[೧೫] ಎಂದು ಚಾಂದ್ ಅಲೀಯ ಅನಿರೀಕ್ಷಿತ ಪ್ರಶ್ನೆಗೆ ಗಲಿಬಿಲಿಗೊಂಡು ಮಾತಿಗಾಗಿ ತಡಕಾಡುತ್ತಿರುವ ರಾಹುಲ್ ಸಿಂಗ್‌ನನ್ನು ತನ್ವೀರ್ ಅನುಕಂಪದಿಂದೆಂಬಂತೆ ನೋಡಿದಳು. ರಾಹುಲ್ ಸಿಂಗ್‌ನ ಮನ ಚೇತರಿಸಿಕೊಳ್ಳುವುದಿಲ್ಲ. ಇಂತಹ ಸಂದರ್ಭಗಳನ್ನು ಗಮನಿಸಿದರೆ ದೇಶ ಪ್ರೇಮ ಬಿಟ್ಟರೆ ಅಂತಃಕರಣವಿಲ್ಲದ ಮರಳುಗಾಡು ಎಂದು ಭಾವಿಸಲಾಗುತ್ತದೆ. ತದನಂತೆ ತನ್ವೀರಳ ಪ್ರಶ್ನೆಗೂ ಚಾಂದ್ ಅಲಿಯ ಮನಸ್ಥಿತಿಗೂ ಗಲಿಬಿಲಿಯ ಚಿಂತನೆಯ ಹೆಣಗಾಡುವ ರೀತಿ ನೀತಿಗಳು ಕಾಣುತ್ತದೆ. ಇಂತಹ ಒಂದು ಸನ್ನಿವೇಶಕ್ಕೆ ಇರುಳು ಆವರಿಸಿ ಭಾಬಿಯ ತಲೆಬಾಗದಲ್ಲಿ ಕೈಗೆಟುಕುವಷ್ಟು ಹತ್ತಿರದಲ್ಲಿ ಮಲಗಿದ್ದ ಚಾಂದ್ ಅಲೀಯ ಬಲತೊಳಿನ ಮೇಲೆ ತನ್ನ ಅಂಗೈಯಿರಿಸಿದ ಮೊಹಿಂದರ್ ಭಾಬಿ ಮೆಲುದನಿಯಲ್ಲಿ ಪ್ರಶ್ನಿಸುತ್ತಾಳೇ. "ನಿದ್ದೆ ಬಂತೆ?" "ಹೂಂ", ತನ್ನ ಅಂಗೈಯನ್ನು ಹಾಗೆಯೇ ಹಿಡಿದುಕೊಂಡು ಮೊಹಿಂದರ್ ಭಾಬಿ "ತನ್ವೀರಳಿಗೆ ನಿನ್ನ ಹತ್ತಿರ ಏನು ಮಾತನಾಡುವುದಿದೆಯಂತೆ"[೧೬] ಎನ್ನುತ್ತಾಳೆ. ಹರೀಂದರ್‌ಸಿಂಗ್‌ರ ಮನೆಗೆ ತನ್ವೀರಳು ಬಂದು ತಿಂಗಳಾದರೂ ಚಾಂದ್ ಅಲೀಯನ್ನು ನೇರವಾಗಿ ಮಾತನ್ನಾಡಿಸಿದವಳಲ್ಲ. ಲಾಹೋರಿನಲ್ಲಿ ಇಂಟರ್ ಓದುತ್ತಿದ್ದವಳಿಗೆ ಧಿಮಾಕು ಸಹಜವೇನೋ ಎಂದು ಚಾಂದ್ ಅಲೀಯಾ ಅವಳ ಬಗ್ಗೆ ನಿರ್ಲಕ್ಷ್ಯ ತಾಳಿದ್ದ. ಆ ನಿಟ್ಟಿನಲ್ಲಿ ಮೊಹಿಂದರ್ ಭಾಬಿಯ ಸಂಪೂರ್ಣ ವರ್ಣನೆಯನ್ನು ಬಗೆಬಗೆಯಾಗಿ ಕೊಂಡಾಡುತ್ತಾನೆ. ಮೊಹಿಂದರ್ ಭಾಬಿಗಾದರೆ ಅಹಂಕಾರವೆಂದರೇನೆಂಬುದು ಗೊತ್ತಿರಲಾರದು. ವರ್ಷದ ಹಿಂದೆ ರಾಜೇಂದರ್‌ಸಿಂಗ್‌ನನ್ನು ಮದುವೆಯಾಗಿ ಬಂದಿದ್ದ ತನಗಿಂತ ಮೂರು ನಾಲ್ಕು ವರ್ಷಕ್ಕೆ ದೊಡ್ಡ ವಳಿರಬಹುದಾದ ಹುಡುಗಿ, ಆರು ತಿಂಗಳು ದಾಟುವಷ್ಟರಲ್ಲಿ ಚಾಂದ್ ಅಲೀಗೆ ಅಕ್ಕರೆಯ ಭಾಬೀಜಿಯಾಗಿಬಿಟ್ಟಿದ್ದಳು. ಮೈ ಕೈ ತುಂಬಿಕೊಂಡು ಐದುವರೆ ಅಡಿಗೂ ಹೆಚ್ಚು ಎತ್ತರಕ್ಕೆ ಬೆಳೆದು ನಿಂತಿದ್ದ ಅವಳ ಮೈ ಮೇಲೆಲ್ಲ ದೇವರು ಬರಗಾರದ ಒಪ್ಪಕೊಟ್ಟಿದ್ದ. ಆಕೆ ನಕ್ಕಾಗ ಬೆಳಕು, ಕೋಪಗೊಂಡಾಗ ಮಿಂಚು. ಮಾತನ್ನಾಡಿದರೆ ಜೋಗುಳ. ಹೊಲದ ನಡುವೆಯೇ ಇದ್ದ ಕಬ್ಬಿಣದ ಕುಲಾಮೆಯಲ್ಲಿ ತಿದಿಯೊತ್ತುತ್ತಾ, ಕಬ್ಬಿಣದ ಸಲಾಕೆಗಳಿಗೆ ವಿಧವಿಧದ ಆಕಾರ ಕೊಡುತ್ತಿದ್ದ ಚಾಂದ್ ಅಲೀ ಬೆವರಿಳಿಸುತ್ತಿದ್ದರೆ, ಮೊಹಿಂದರ್ ಭಾಬಿ ಅಲ್ಲಿಗೆ ತಂಗಾಳಿಯಂತೆ ಬರುವಂತ್ತಿರುವುದನ್ನು ಕಂಡ

ಚಾಂದ್ ಅಲೀಯ ಮನ ಮುಗಿಲೆತ್ತರಕ್ಕೆ ಕೊಂಡೊಯ್ಯುತ್ತದೆ. ಚಾಂದ್ ಅಲೀ ಮತ್ತು ಹರೀಂದರ್ ಸಿಂಗರ್ ಒಡನಾಟದಲ್ಲಿ ಸಿಂಗರ ಮನೆಯ ಸದಸ್ಯನಾಗಿಯೇ ಇರುವುದನ್ನು ಕಾಣುತ್ತೇವೆ. ಅಲ್ಲಿ ಮೊಹಿಂದರ್ ಭಾಬಿಯು ಕೂಡ ಚಾಂದ್ ಅಲೀಯ ಒಡವೆ ಉತ್ತಮ ಸ್ನೇಹ ಬಾಂಧವ್ಯವನ್ನು ಹೆಚ್ಚಾಗಿ ಉಳಿದುಕೊಂಡಿರುವುದನ್ನು ಕಾಣುತ್ತೇವೆ. ಅಂದರೆ ಒಂದು ಸಂದರ್ಭದಲ್ಲಿ ಹಿತ್ತಲಲ್ಲಿ ಕಾಣಿಸಿದರೆ ಸಾಕು. ಚಾಂದ್ ಅಲೀ ಕೂಗಿ ಹೇಳುತಿದ್ದ "ಭಾಬೀಜಿ... ನೀರು ಬೇಕು"[೧೭] ಈ ಪ್ರಸಂಗ ಗಮನಿಸಿದರೆ ಪ್ರೀತಿಯೆಂಬ ಬಾಂಧವ್ಯ ಹಾಗಾಗಿ ಒಡಮೂಡುವುದು ಆಶ್ಚರ್ಯವೆನ್ನಿಸುತ್ತದೆ. ಆ ನಿಟ್ಟಿನಲ್ಲಿ ಚಾಂದ್ ಅಲೀಯ ಆಹ್ವಾನವನ್ನೇ ನಿರೀಕ್ಷಿಸುತ್ತಿರುವವಳಂತೆ. ಹಿತ್ತಾಳೆಯ ದೊಡ್ಡ ಲೋಟ ತುಂಬಾ ತಂಪಾದ 'ಲಸ್ಸೀ' ತರುವ ಮೊಹಿಂದರ್ ಭಾಬಿ. "ಹೇ ಕಳ್ಳಾ... ನನಗೊತ್ತಿಲ್ಲವೇ, ನಿನಗೆ ಬೇಕಾಗಿರುವುದು ನೀರಲ್ಲ ಎಂದು. ನೀನು ಕೂಗಿದಾಗಲೆಲ್ಲ ನೀರು ತಂದುಕೊಡಲು ಇಲ್ಲೇನು ನಿನ್ನ ಹೆಂಡತಿ ಇದ್ದಾಳಾ?"[೧೮] ಎಂದು ತಮಾಷೆ ಮಾಡುತ್ತಿದ್ದಳು. ಬಳಿಕ ಅದು ಇದೂ ಮಾತನಾಡುತ್ತಾ, ಪಕ್ಕನೆ ನೆನಪಿಸಿಕೊಂಡವಳಂತೆ, "ಯೇ.. ಅಲೀ, ನಾನು ನಿನಗೊಂದು ಚಂದದ ಹುಡುಗಿ ನೋಡಿ ಇಟ್ಟಿರುವ ತೆಳ್ಳಗೆ ಮಲ್ಲಿಗೆಯ ಬಳ್ಳಿಯ ಹಾಗಿದ್ದಾಳೆ. ರುಚಿಯಾದ ಲಸ್ಸೀ ಮಾಡುತ್ತಾಳೆ. ನಿನಗೆ ನಮ್ಮ ಜಾತಿಯ ಹುಡುಗಿಯ ರಷ್ಟೇ ಒಳ್ಳೆಯ ಲಸ್ಸೀ ಕುಡಿಸಿಯಾರು. ನಮ್ಮ ಜಾತಿಯ ಹುಡುಇಯಾದರೆ ನಿನಗೆ ಅಡ್ಡಿಯಿಲ್ಲವಷ್ಟೇ?" ಎಂದು ಗಂಭೀರ ಸ್ವರದಲ್ಲಿ ಪ್ರಶ್ನಿಸುತ್ತಾಳೆ.

"ಒಳ್ಳೆಯ ಲಸ್ಸೀ ಕುಡಿಸುವ ಹುಡುಗಿ ಯಾವ ಜಾತಿಯಾವಳಾದರೆ ಏನು ಭಾಬೀಜೀ. ಆದರೆ, ಅವಳು ನಿಮ್ಮಷ್ಟು ಮಾತನಾಡುವ ಹುಡುಗಿಯಗಿರದಿದ್ದರೆ ಸಾಕು"[೧೯] ಎಂದು ಚಾಂದ್ ಅಲೀ ಗಂಭೀರವಾಗಿ ಉತ್ತರಿಸುತ್ತಿದ. ಆಗೆಲ್ಲ ಭಾಬೀಜಿ ಕೋಪ ಪ್ರದರ್ಶಿಸುತ್ತಿದ್ದಳು. "ನಾನು ಯಾಕೆ ನಿನಗೆ ಹುಡುಗಿ ಹುಡುಕಿ ತಂದು ಮದುವೆ ಮಾಡಿಸಬೇಕು? ಚಂದದ ಹುಡುಗಿ ಸಿಕಕ ಬಳಿಕ ನೀನು ನನ್ನನ್ನೆಲ್ಲ ಕ್ಯಾರು ಮಾಡುತ್ತೀಯ?"[೨೦] ಆಗೆಲ್ಲ, ಚಾಂದ್ ಅಲೀ ಮುಖ ತುಂಬಾ ನಗುತ್ತಾ ಮೊಹಿಂದರ್ ಭಾಬಿಯ ಕಣ್ಣುಗಳಿಂದ ಧುಮ್ಮಿಕ್ಕುತ್ತಿರುವ ಪ್ರೀತಿಯ ಹೊಳೆಯಲ್ಲಿ ತಾನೆಂದೂ ಕಂಡಿರದಿದ್ದ ಅಮ್ಮನ ಮುಖವನ್ನು ಹುಡುಕುತ್ತಾನೆ. ಇಂತಹ ಚಿಂತನೆಯ ಹಂದರದಲ್ಲಿ ಸ್ವಲ್ಪ ಸಮಯದ ನಂತರ ಮೊಹಿಂದರ್ ಭಾಬಿ ಮತ್ತು ಸಹೋದರಿ ತನ್ವೀರ ಕಾರಳ ನಡುವಿನ ಹೋಲಿಕೆಯ ಸ್ವರೂಪವನ್ನು ಬಿಚ್ಚಿಡುವ ನಿಟ್ಟಿನಲ್ಲಿ ತನ್ವೀರ ಕಾರಳು ಬಂದಿದ್ದವಳು ಒಂದೇ ಒಂದು ದಿನವಾದರೂ ಕಬ್ಬಿಣದ ಕುಲುಮೆಯತ್ತ ಕಾಲು ಹಾಕಿದವಳಲ್ಲ. ಹೆಚ್ಚೂ ಕಮ್ಮಿ ಅಕ್ಕನಷ್ಟೇ ಎತ್ತರಕ್ಕೆ ಬೆಳೆದು ನಿಂತ ಹುಡುಗಿಗೆ ಅಕ್ಕನದೇ ಬಣ್ಣ. ಬಲ ಹುಬ್ಬಿನ

ಬಳಿ ಎದ್ದು ಕಾಣುವಷ್ಟು ಕರಿಮೆಣಸಿನ ಗಾತ್ರದ ದಪ್ಪಗಿನ ಕಪ್ಪು ಮಚ್ಚೆ ಇರದೇ ಹೋಗಿದ್ದರೆ, ಮೊಹಿಂದರ್ ಭಾಬಿಗಿಂತಲೂ ಅವಳು ಹೆಚ್ಚು ಚಂದದ ಹುಡುಗಿಯಾಗಿ ಬಿಡುತ್ತಿದ್ದಳು. ಅವಳಿಗೆ ಬಳುಕುವ ಬಳ್ಳಿಯಂತಹ ಶರೀರವಿತ್ತು. ಬಂಗಾರದ ಬಣ್ಣವಿತ್ತು. ಚೂಪು ಕಣ್ಣುಗಳಿದ್ದವು. ಸೊಂಟ ಮುತ್ತಿಡುತ್ತಿದ್ದ ತಲೆಗೂದಲ ಒಡತಿನ ಅವಳು. ತಾನು ಧಿಮಾಕು ಎಂದೇ ನಿರ್ಲಕ್ಷಿಸಿದ್ದ ತನ್ವೀರಳ ಧೈರ್ಯದ ಬಗ್ಗೆ ಚಾಂದ್ ಅಲೀಗೂ ಎರಡು ಮಾತಿಲ್ಲ. ತನ್ವೀರ್ ಅಲ್ಲದಿರುತ್ತಿದ್ದರೆ ಇದಿಷ್ಟು ಹೊತ್ತಿಗೆ ಮೊಹಿಂದರ್ ಭಾಬಿಯ ಸ್ಥಿತಿ ಏನಾಗಬಹುದಿತ್ತು ಎಂಬುದನ್ನು ಊಹಿಸುವುದೂ ಸಾಧ್ಯವಿಲ್ಲ. ಶಿಬಿರಕ್ಕೆ ಬಂದ ಈ ಭಿನ್ನ ಭಿನ್ನ ಸೌಂದರ್ಯದ ವರ್ಣನೆಯನ್ನು ಆ ಸಹೋದರಿಯರ ಆವಭಾವದ ಅಂತಃಕರಣವನ್ನು ಬೆಸೆಯುವ ವಿಭಿನ್ನ ಕ್ರಮಗಳನ್ನು ಗುರುತಿಸಲ್ಪಟ್ಟಿರುತ್ತಾನೆ. ಚಾಂದ್ ಅಲೀಗಾಗಿ ತನ್ವೀರ್ ಪರಿಚಯ ಪತ್ರ ಪಡೆದ ರೀತಿ ಯಾರೂ ಅಚ್ಚರಿ ಪಡುವಂತಿತ್ತು. ಶಿಬಿರದಲ್ಲಿ ರಾಹುಲ್ ಸಿಂಗನ ಜತೆ ಹರಟೆ ಹೊಡೆಯುತ್ತಿರುವಾಗಲೂ ಬಹಳ ಜಾಣತನದಿಂದ ವರ್ತಿಸುತ್ತಿದ್ದಳು. ಮೊಹಿಂದರ್ ಭಾಬಿಗಾಗಿ ಜೀವ ಪಣವಿಡುವುದರಲ್ಲಿ ಚಾಂದ್ ಅಲೀಗೆ ಹೆಮ್ಮೆಯಿತ್ತು. ಆದರೆ ಅಂದಿನ ಭಯಾನಕ ರಾತ್ರಿಯಲ್ಲಿ, ಮೊಹಿಂದರ್ ಭಾಬಿ ಕಣ್ಣೀರಿಟ್ಟು ಒತ್ತಾಯಿಸಿದಾಗಲೂ ಲಾರಿಯೇರಲು ನಿರಾಕರಿಸಿದ್ದ ತಾನು, ತನ್ವೀರಳ ವಿನಂತಿಯನ್ನೇಕೆ ನಿರಾಕರಿಸದಾದೆ? ಚಾಂದ್ ಅಲೀಗೆ ತನ್ನ ಬಗ್ಗೆಯೇ ಜಗುಪ್ಸೆಯೆನ್ನಿಸಿತ್ತು. ತನ್ವೀರ್ ತನ್ನ ಬಳಿ ಏನನ್ನೋ ಮಾತನಾಡಲಿರುವಳಂತೆ. ಆದ್ಯಾವ ಹೊಸ ಮಾತು? ಶಿಬಿರದ ಹೆಬ್ಬಾಗಿಲ ಬಳಿ ಓಡಾಡುತ್ತಿದ್ದ ಬಂದಿಬ್ಬರು ಸ್ವಯಂ ಸೇವಕರನ್ನು ಹೊರತುಪಡಿಸಿದರ ಇಡೀ ಶಿಬಿರವೇ ತಣ್ಣಗೆ ಮಲಗಿತ್ತು. ಮೊಹಿಂದರಳ ಹಾಸು-ಪಾಸಿನಲ್ಲಿ ಮಲಗಿದ್ದ ತನ್ವೀರ್ ಕೌರಳು ಎದ್ದು ಚಾಂದ್ ಅಲೀಯತ ದಿಟ್ಟಿಸಿ ನೋಡ ತೋಡಗುತ್ತಾಳೆ. ಚಾಂದ್ ಅಲೀ ಆಯಸ ಪಟ್ಟ ಹಾಗೆಯೇ ಮಲಗಿಕೊಂಡಿರುತ್ತಾನೆ. ಮೊಹಿಂದರ್ ಭಾಬಿ ತನ್ನ ಅಂಗೈಯನ್ನು ಚಾಂದ್ ಅಲೀಯ ತೋಳಿನ ಮೇಲೆ ಹಾಗೆಯೇ ಸ್ಪರ್ಶಿಸುತ್ತಾಳೆ.

"ನಮ್ಮಿಂದಾಗಿ ನಿಮಗೆ ಬಹಳ ತೊಂದರೆಯಾಗಿದೆ" ತನ್ವೀರಳು ಅಂತರಾಳದ ಮಾತನ್ನು ಹೊರಹಾಕುತ್ತಾಳೆ. ಆದರೆ ಚಾಂದ್ ಅಲೀ ನಿನೊಬ್ಬ ಗಂಡಸು ಹೆಚ್ಚು ಕಷ್ಟ ಸಹಿಸುವ ಶಕ್ತಿ ನಿನಗಿದೆ, ಆ ದಿನ ನೀನು ಹರೀಭಾಗೆಗೆ ಬಾರದೆ ಹೋಗಿದ್ದಾರೆ ನಾವಿಬ್ಬರು ಬದುಕು ಉಳಿಯುತ್ತಿರಲಿಲ್ಲ. ನಿನ್ನಿಂದಾಗಿ ನಾವು ಬದುಕಿದ್ದೇವು. ಇನ್ನೂ ಮುಂದೆ ಕೂಡ ಜೊತೆಯಲ್ಲಿಯೇ ಬದುಕ್‌ಲರೆವಾ?"[೨೧] ಚಾಂದ್ ಅಲೀಯ ಮನದ ಕಳವಳ ವಿಪರೀತವಾಗುತ್ತದೆ. ಅದೊಂದು ಅನುಮಾನಾಸ್ಪದವಾಗಿ ಸಮಸ್ಯೆಗೆ ಪರಿಹಾರವನ್ನು ಹುಡುಕುತ್ತಾನೆ. ಒಂದು ವೇಳೆ ಈ ಸಹೋದರಿಯರ ಸಂಬಂಧಿಕರು ಸಿಕ್ಕರೆ ಇವರು ನನ್ನನ್ನು

ಬಿಟ್ಟು ಅವರೊಡನೆ ಹೋಗುವರು. ಬಳಿಕ ನನ್ನನ್ನು ಸುಮ್ಮನೆ ಬಿಡುವರೆ? ಇವತ್ತಿನವರೆಗೂ ನಾನು ಸಹಕರಿಸಿದೆ ನನ್ನೊಡನೆ ಇವರು ಆತ್ಮೀಯತೆ ಬೆಳೆಸಿದ್ದಾರೆ, ಬೆಳೆಸಲು ಹೊಸ ಸಂಚು ಹುಡಿರುತ್ತಾರೋ ಎಂಬ ಅನುಮಾನಕ್ಕೆ ಒಳಗಾದ ಚಾಂದ್ ಅಲಿ ಮನ ಗೊಂದಲಕ್ಕೀಡಾಗುತ್ತದೆ. ಬಹುಶಃ ಅವರ ಮನೆಯವರು ಸಿಕ್ಕಿದ ಕೂಡಲೆ ನನ್ನನ್ನು ನೋಡಿ ಶತ್ರುವೆಂದು ತಿಳಿದು ನನ್ನ ಪ್ರಾಣಕ್ಕೆ ಎಲ್ಲಿ ಹಾನಿಯಾಗುತ್ತದೆ ಎಂಬ ಭಯದ ಬಿಂಬ ಕಾಡುತ್ತದೆ. ಚಾಂದ್ ಅಲೀ ತನ್ನ ನೋವಿನ ಸಂದರ್ಭವನ್ನು ಹಲವು ಕಾಲದವರೆಗೂ ತನ್ನ ಸಂಕೋಲೆಯನ್ನು ತನ್ನ ಮನಸ್ಸಿನಲ್ಲಿ ಇಟ್ಟು ಕೊಂಡಿದ್ದ. ಅದು ಆ ಸಹೋದರಿಯರಿಗಾಗಿ ಇಂದು ಅಪಾಯಕ್ಕೆ ಸಿಲುಕುತ್ತೇನೋ ಎಂಬ ಭಯ ಭೀತಿಯಿಂದ ಧೃಡವಾದ ನಿರ್ಧಾರವನ್ನು ತೆಗೆದುಕೊಂಡು ಮೊಹಿಂದರ ಭಾಬಿಗೆ ನೋವದರೂ ಪರವಾಗಿಲ್ಲ ಎನ್ನುವ ಯೋಚನೆಯಿಂದ, ಚಾಂದ್ ಅಲೀ ಖಾರವಾಗಿಯೇ ಹೇಳಿದ್ದ. "ಇನ್ನು ನನ್ನಿಂದ ಸಾಧ್ಯವಿಲ್ಲ; ಸಾಧ್ಯವಿಲ್ಲ ಎಂದರೆ ಸಾಧ್ಯವಿಲ್ಲ. ಯಾರು ಏನು ಹೇಳಿದರೂ ನಾನು ನಾಳೆ ಬೆಳಿಗ್ಗೆ ಇಲ್ಲಿಂದ ಹೊರಟು ಹೋಗುವವನೇ. ನಿಮಗಾದರೆ ನಿಮ್ಮನ್ನು ಕಾಪಾಡುವ ಸರ್ಕಾರವಿದೆ. ನಿಮ್ಮನ್ನು ಶಿಕ್ಷಿಸುವ ಸ್ವಯಂ ಸೇವಕರಿದ್ದಾರೆ. ಇಂದಲ್ಲ, ನಾಳೆಯಾದರೂ ನಿಮ್ಮ ಮನೆಯವರು ಬಂದು ನಿಮ್ಮನ್ನು ಕರೆದುಕೊಂಡು ಹೋಗಲಿದ್ದಾರೆ. ಇಲಲಿ ನನಗೆ ಯಾರು ಇದ್ದಾರೆ? ಇಲ್ಲಿ ನನಗೆ ನನ್ನ ಹೆಸರನ್ನ ಹೇಳುವ ಅವಕಾಶವೂ ಇಲ್ಲ."[೨೨] ಎಂಬ ನೋವಿನ ಸಂಗತಿಯನ್ನು ಬಿಚ್ಚಿಡುವ ಚಾಂದ್ ಅಲೀಯ ಸ್ಥಿತಿ ಓದುಗರರಿಗೆ ಮನ ಮುದುಡುವಂತೆ ಗೋಚರಿಸುತ್ತದೆ. ತನ್ವೀರಳ ಮಾತಿನಲ್ಲಿ "ನಿನ್ನ ಮಾತೆಲ್ಲವು ನಿಜ ಅಲೀ. ಅವನ ಮಾತುಗಳನ್ನೆಲ್ಲ ಮೊದಲೇ ನಿರೀಕ್ಷಿಸಿದ್ದವಳಂತೆ ತನ್ವೀರ್ ಹೇಳಿದ್ದಳು. ಆದರೂ ನಿನ್ನನ್ನು ನಾವಿಬ್ಬರೂ ಬೇಡಿಕೊಳ್ಳುತ್ತಿದ್ದೇವೆ. ನಾವು ಮೂವರೂ ಒಂದಷ್ಟು ದಿನಗಳ ಕಾಲ ಜೊತೆಯಲ್ಲೇಕೆ ಬದುಕಬಾರದು? ಅಂದರೆ! ನಿಮ್ಮ ಮನೆಯವರು ನಿಮಗೆ ಸಿಗುವವರೆಗೆ, ಅಲ್ಲವೆ? ಚಾಂದ್ ಅಲೀಯ ಪ್ರಶ್ನೆಯಲ್ಲಿ ಕುಹುಕವಿತ್ತು. ತನ್ವೀರ್ ಇದನ್ನು ಕೂಡಾ ನಿರೀಕ್ಷಿಸಿದ್ದಿರಬಹುದಾಗಿತ್ತು. ಆ ಸಂದರ್ಭದಲ್ಲಿ

"ಅಲ್ಲ, ಆನಂತರ ಕೂಡಾ"

"ಅದು ಇಲ್ಲಿ ಹೇಗೆ ಸಾಧ್ಯ?"

"ಇಲ್ಲಯೇ ಸಾರ್ಥಯವಾಗುವುದೆಂದು ನಾನೆಲ್ಲಿ ಹೇಳಿದೆ?"

"ಅಂದರೆ!? ಚಾಂದ್ ಅಲೀ ಅಚ್ಚರಿಗೊಂಡರು"[೨೩]

ಪೂರ್ವ ಭಾವಿಯಾಗಿ ಯೋಚಿಸಿದ್ದ ತನ್ವೀರ್ ಕಾರಳು ನಿಧಾನವಾಗಿಯೇ ಮೆಲು ದನಿಯಲ್ಲಿ ಎಲ್ಲ ವಿಚಾರವನ್ನು ವಿವರಿಸತೊಡಗತ್ತಾಳೆ. ಇದೊಂದು ಶಿಬಿರ ಮಾತ್ರವಲ್ಲ ನಮಗೆ

ಇದೊಂದು ಸಾವಿನ ಮನೆ ನಿನ್ನ ಪರಿಚಯ ತಿಳಿಯಬಾರದೆಂದು ನಮ್ಮ ಪರಿಚಯವನ್ನು ಕೂಡ ಯಾರಲ್ಲೂ ಅಪಾರವಾಗಿ ಸ್ನೇಹ ವಿಶ್ವಾಸವನ್ನು ಗಳಿಸಿಕೊಂಡಿಲ್ಲ. ಬಹಳ ದಿನಗಳು ಹೀಗೆಯೇ ಇರುವುದು ಕಷ್ಟ. ನಮ್ಮ ಸಂಬಂಧಿಕರು ಬರುವುದು ಅಪನಂಬಿಕೆಯೂ ಕೂಡ ನಾಳೆ ದಿನವೇ ಇಲ್ಲಿಂದ ಹೊರಟು ಹೋಗೋಣ. ಚಾಂದ್ ಅಲೀ ನೀನು ಗಂಡಸು, ಇಲ್ಲಿಂದ ಎಲ್ಲಿಗೆ ಹೋಗಬೇಕೆಂಬುದು ನಿರ್ಧರಿಸು ನಾವು ನೀನು ಎಲ್ಲಿಗೆ ಕರೆದರು ನಾವಿಬ್ಬರೂ ಬರುತ್ತೇವೆ. ನಮ್ಮಲ್ಲಿ ಸಾಕಷ್ಟು ಒಡವೆಗಳಿವೆ. ನಾನು ಅಕ್ಕ ಇಬ್ಬರು ಇಡೀ ರಾತ್ರಿ ನಮ್ಮ ಒಡವೆಗಳನ್ನೆಲ್ಲ ಕುರ್ತಾ ಪೈಜಾಮದೊಳಗೆ ತುಂಬಿಸಿಕೊಳ್ಳುತ್ತೇವೆ. ಒಂದರಮೇಲೊಂದು ಕುರ್ತಾ ಪೈಜಾಮ ಒತ್ತುಕೊಂಡು ಹೋದರೆ ಯಾರ ಪರಿಶೀಲನೆಗೂ ಸಿಗಲಾರದೆ ಪಾರು ಆಗಬಹುದು. ಇಲ್ಲಿ ನಕ್ಲೀಸ್‌ಗಳಿವೆ, ಬಂಗಾರಗಳಿವೆ ತೋಳು ಬಂದಿಗಳಿವೆ, ಸೊಂಟ ಪಟ್ಟಿಗಳಿವೆ. ಇವೆಲ್ಲವನ್ನು ಮಾರಿದರೆ ನಾಲ್ಕೈದು ಸಾವಿರ ಸಿಗಬಹುದು ಎನ್ನುವ ನಿಟ್ಟಿನಲ್ಲಿ ತನ್ವೀರ್‌ಗಳು ಯೋಚಿಸಿ ಹೇಳುತ್ತಾಳೆ. ಹಾಗೆಯೇ ಎಲ್ಲಾದರೂ ದೂರ ಹೋಗಿ ಒಂದೆರಡು ತಿಂಗಳು ಇರಬಹದೆಂದು, ಆ ಬಳಿಕ, ಗಲಾಟಯೆಲ್ಲ ಮುಗಿದ ನಂತರ ಪುನಃ ಮತ್ತೊಂದು ದಾರಿ ಸಿಕ್ಕೆ ಸಿಗುವುದು ಎಂಬ ಅಪಾರ ನಂಬಿಕೆಯೊಂದಿಗೆ ಈ ಊರಿಗೆ ಮರಳುವ ಚಿಂತೆನೆಯನ್ನು ನಡೆಸುತ್ತಾಳೆ. ಕಾಲ ಕಳೆದಂತೆ ಸರ್ಕಾರದವರು ಒಂದಿಲ್ಲೊಂದು ದಾರಿ ತೋರಬಹುದು ಎಂದು ಭಾವಿಸಿ ಮತ್ತೆ ಬಹುಶಃ ಸಿಗಲಿಲ್ಲವೆಂದರೆ ಮನಸ್ಸು ದೃಢವಾಗಿ ತೆಗೆದುಕೊಂಡು ಸಾಯುವವರೆಗೂ ಜೊತೆಯಲ್ಲಿ ಇರಬೇಕೆಂದರೆ ಅದು ದೇವರ ಇಚ್ಛೆ ಎಂದು ಆಕೆ ಬಲವಾದ ಮನಸ್ಥೈರ್ಯ ಕೊಟ್ಟು ಮಾನವೀಯತೆಯುಳ್ಳ, ಗಟ್ಟಿತನದ ಮಹಿಳಾ ಸ್ವರೂಪರವನ್ನು ತನ್ವೀರಳ ಹಾವ-ಬಾವಗಳಲ್ಲಿ ಸ್ಪಷ್ಟಿಸಲಾಗುತ್ತದೆ. ಆ ಸಂದರ್ಭವನ್ನು ಗಮನಿಸಿದರೆ ತನ್ವೀರಳು ತನ್ನ ವಯಸ್ಸನ್ನು ಮೀರಿ ಯೋಚಿಸಿರುವ ಶಕ್ತಿಯುತ ಚಿಂತನೆಗಳನ್ನು ಮೆಚ್ಚುವಂತಹದ್ದು, ಆ ಯೋಚನೆಗಳನ್ನು ಮೊಹಿಂದರ್ ಭಾಬಿ ತನ್ನ ಉಸಿರಿನೊಡನೆ ಕಿವಿಚಾಚಿ ಕೇಳತೊಡಗಿರುತ್ತಾಳೆ. ಇಂತಹ ಸ್ಥಿತಿಯಲ್ಲಿ ಚಾಂದ್ ಅಲೀಯ ಪ್ರತಿಕ್ರಿಯಗಾಗಿ ಸಹೋದರಿಯರು ಆತನ ಕಡೆ ದಿಟ್ಟಿಸುವುದನ್ನು ಕಾಣುತ್ತೇವೆ. ಅಂದರೆ ಸ್ವಾತಂತ್ರ್ಯ ಪೂರ್ವ, ಸ್ವಾತಂತ್ರ್ಯದ ನಂತರ ಇವುಗಳ ಕಾಳಘಟ್ಟದಲ್ಲೂ ಮಹಿಳೆಯರಿಗೆ ಬದುಕುವ ನೆಲೆಯಲ್ಲಿ ಹಲವು ಸಂಕೋಲೆಗಳನ್ನು ಎದುರಿಸುವ ಕ್ರಮ ತನ್ವೀರ್ ಮತ್ತು ಮೊಹಿಂದರಳ ಈ ಪಾತ್ರಗಳ ಮುಖಾಂತರ ಯಾರಿಗೆ ಸ್ವಾತಂತ್ರ್ಯವಿದೆ, ಯಾರಿಗೆ ಸ್ವಾತಂತ್ರ್ಯ ಇಲ್ಲ ಎನ್ನುವುದು ಸ್ಪಷ್ಟಗೊಳ್ಳುತ್ತದೆ. ಬದುಕಿನ ಉದ್ದಕ್ಕೂ ಮಹಿಳೆಯರಿಗೆ ಹೆಣಗಾಟವೇ ಜೀವನದ ಶೂಲ ವೇದನೆ ಎದ್ದು ಕಾಣುತ್ತದೆ. ಪುರುಷರ ಸರಿಸಮನಾಗಿ ಯೋಚಿಸುವ ಕ್ರಮಗಳನ್ನು ತನ್ವೀರಳ ಪಾತ್ರದೊಂದಿಗೆ ಸಮಾಜಕ್ಕೆ ಮುಖಾ-ಮುಖಿಯಾಗುತ್ತಾರೆ.

ಹೆಣ್ಣುತನವನ್ನು ತನ್ನೊಡನೆ ಬಚ್ಚಿಟ್ಟುಕೊಂಡಿರುವ ಮೊಹಿಂದರ್ ಭಾಬಿಯ ಗುಣಗಳಿಂದ ಸಮಾಜದ ವ್ಯವಸ್ಥೆಯನ್ನು ಪ್ರತಿರೋದಿಸುವ ಕ್ರಮವನ್ನು ಮೊಹಿಂದರ್ ಭಾಬಿಯ ಪಾತ್ರ ವಿಶಿಷ್ಟಗೊಳ್ಳುತ್ತದೆ. ಧರ್ಮಕ್ಕಿಂತ ಮಿಗಿಲಾದದ್ದು ಮಾನವೀಯತೆಯ ಗುಣ. ಈ ನಿಟ್ಟಿನಲ್ಲಿ ತನ್ವೀರಕಾರಳ ಹೇಳಿಕೆಗಳನ್ನು ಚಾಂದ್ ಅಲೀಯ ವಿರೋಧಿಸಲು ಸಾಧ್ಯವಾಗದ ಸಂಕಷ್ಟಕ್ಕೆ ಸಿಲುಕಿ ಚಡಪಡಿಸುತ್ತಾನೆ. ಶಿಬಿರದಿಂದ ಹೊರಹೊಗಲು ಹಲವು ಯೋಚನೆಗಳನ್ನು ತನ್ವೀರಳು ಧೈರ್ಯದ ಸ್ವರೂಪವಾಗಿ ಕಾಣುತ್ತಾಳೆ. ಒಂದೆಡೆ ಗಮನಿಸಿದರೆ ಸಹೋದರಿಯರ ಬಂಗಾರದ ಒಡವೆಗಳನ್ನು ಮಾರಿ ಹೊಲ ಮನೆ ಖರಿದಿಸಿ ಜೀವನಪರ್ಯಂತ ಸುಖವಾಗಿ ಇರಲು ಯಾವುದೇ ಸಂಶಯವಿಲ್ಲ. ಇಂತಹ ಸನ್ನಿವೇಶದಲ್ಲಿ ತನ್ವೀರಳು ಮಾತನ್ನು ನಿಲ್ಲಿಸುತ್ತಾಳೆ. ಮತ್ತೆ ತುಟಿ ಬಿಚ್ಚಿದ ಮೊಹಿಂದರ್ ಭಾಬಿ ಚಾಂದ್ ಅಲೀಯೊಡನೆ ಪ್ರತಿಕ್ರಿಯಿಸಲು ಪ್ರಯತ್ನಿಸುತ್ತಾಳೆ. ಆದರೂ ಕೂಡ ಚಾಂದ್ ಅಲೀ ತಟಸ್ಥವಾಗಿ ಕುಳಿತಲ್ಲೇ ಚಡಪಡಿಸುತ್ತಾನೆ. ಅಷ್ಟರಲ್ಲಿ ಕಾವಲುಗಾರನೊಬ್ಬನ ಧ್ವನಿಯ ಕೇಳಿ ತನ್ವೀರಳು ತನ್ನ ಬೆನ್ನ ಹಿಂದೆ ತೆಂಗಿನ ಕಾಯಿಯ ಗಾತ್ರದ ಬಟ್ಟೆ ಗಂಟನ್ನು ಎತ್ತಿ ಚಾಂದ್ ಅಲೀಯ ಮಡಿಲಿಗೆ ಹಿಡಲು ಸೂಚಿಸುತ್ತಾಳೆ. 'ನಿನೊಬ್ಬನೆ ಹೋಗಬಯಸುವೆಯಂದರೂ, ಇದು ನಿನಗೆ'" ಮುಂಜಾನೆ ಹತ್ತರ ವೇಳೆಗೆ ಶಿಬಿರದ ಬಾಗಿಲನ್ನು ತೆರೆಯಬೇಕೆಂದು ಆಜ್ಞೆ ಆಗಿರುತ್ತದೆ. ಈ ಮೂವರು ಬಾಗಿಲು ತೆರೆಯುವ ನಿರೀಕ್ಷೆಯಲ್ಲಿ ಇವರಿವರ ಕಣ್ಣುಗಳು ದಿಟ್ಟಿಸುತ್ತವೆ ಆ ಗೆಟ್ಟನ್ನು, ತನ್ವೀರಳ ಪ್ರಶ್ನೆಗೂ ಚಾಂದ್ ಅಲೀಯ ಪ್ರಶ್ನೆಗೂ ಗೊಂದಲ ಅಡಗಿರುತ್ತದೆ. ಮತ್ತೇ ಮತ್ತೇ ಗೊಣಗಾಟಗಳನ್ನು ಪ್ರಾರಂಬಿಸುತ್ತಾರೆ. ಅಷ್ಟರಲ್ಲೇ ಮೊಹಿಂದರ್ ಭಾಬಿಯು ನಿವಿಬ್ಬರು ಸುಮ್ಮನ್ನಿರುವಿರ ಎನ್ನುವ ಗಟ್ಟಿ ಧ್ವನಿಯಲ್ಲಿ ಪ್ರತಿಕ್ರಿಯಿಸುತ್ತಾಳೆ. ಏಕೆಂದರೆ ತೀರ್ಮಾನ ಎಂಬುದು ಅವರಿಬ್ಬರ ನಡುವೆ ಇರುವರೊಡನೆ ಮೊಹಿಂದರ್ ಕೌರಳ ಚಿಂತೆ ಮತ್ತು ಇವರಿಬ್ಬರ ಹೇಳಿಕೆಗಳ ನಂಬಿಕೆ ಅಪಾರವಾದದ್ದು. ಅಲ್ಲಿ ಇಬ್ಬರ ಮಾತಿಗೂ ಶಿಬಿರದ ನಿರ್ಬಂಧನೆಗೂ ಯೋಚಿಸಿ ತಕ್ಕ ನಿರ್ಧಾರವನ್ನು ತೆಗೆದುಕೊಳ್ಳುವ ನಿಟ್ಟಿನಲ್ಲಿ ಆಕೆ ಇವರಿಬ್ಬರ ತೊಳಲಾಟಕ್ಕೆ ಉತ್ತರಿಸಲು ಪ್ರಯತ್ನಿಸುತ್ತಾಳೆ ಹಾಗೆ ಇವರಿಬ್ಬರನ್ನು ಕೂಡ ಸಮಾಧಾನಿಸುವ ಗುಣ ಇವಳಿಗಿರುತ್ತದೆ. ಶಿಬಿರದಿಂದ ಹೊರಗೆ ಹೋಗುವವರ ಸಂಖ್ಯೆ ಹೆಚ್ಚಿರಲಿಲ್ಲ. ಲೂಧಿಯಾನದ ಸಂಬಂಧಿಕರ ಮನೆಗೆ ಹೋಗುವವರಿದ್ದೇವೆ ಎಂಬುದಾಗು ಎಲ್ಲರಲ್ಲೂ ತಿಳಿಸಿ ವಿದಾಯ ಹೇಳುತ್ತಿದ್ದ ಗುಂಪಿನಲ್ಲಿ ಎಂಟು ಮಂದಿ ಇದ್ದರು. ಅಮೃತಸರದ ಬಳಿಯ ಒಂದು ಹಳ್ಳಿಯಲ್ಲಿದ್ದ ಸೋದರ ಮಾವನ ಹೆಸರನ್ನು ನೆನಪಿಸಲು ಯತ್ನಿಸುತ್ತಿದ್ದ ಅಕ್ಕ ಮತ್ತವಳ ತಮ್ಮನ ಒಂದು ಜೋಡಿ. ದೆಹಲಿಯ ರೈಲು ನಿಲ್ದಾಣದ ಬಳಿಯಿರುವ ಸರಕಾರಿ ಕ್ಯಾಂಪ್ ಸೇರಿ, ತಮ್ಮ ಕುಟುಂಬದ ಪತ್ತೇದಾರಿಯ ಬಗ್ಗೆ ಆಸೆ ಹೊತ್ತಿದ್ದ ಇಬ್ಬರು ಮುದುಕರು. ಬೊಂಬಾಯಿಯಲ್ಲಿ ಬಂಧುವೊಬ್ಬರು ಬಟ್ಟೆ ವ್ಯಾಪಾರ ಮಾಡುತ್ತಿದ್ದಾರೆ. ನಾವು ಅಲ್ಲಿಗೆ ಹೋಗಲಿದ್ದೇವೆ

ಎಂಬುದಾಗಿ ಸ್ವಯಂ ಸೇವಕರಿಗೆ ತಿಳಿಸಿದ್ದ ಚಾಂದ್ ಅಲೀಯ ಕುಟುಂಬ ಯಾರು ಎಲ್ಲಿಗೆ ಹೋಗಲಿದ್ದಾರೆ ಎಂಬುದರ ಬಗ್ಗೆ ಸ್ವಯಂ ಸೇವಕರಿಗೆ ಅಂತಹ ಆಸಕ್ತಿಯೇನೂ ಇದ್ದಂತಿರಲಿಲ್ಲ. ಮೂರು ಪರಿಚಯ ಪತ್ರಗಳ ಜೊತೆ ಹತ್ತು ರೂಪಾಯಿಗಳ ಒಂಬತ್ತು ನೋಟುಗಳನ್ನು ಚಾಂದ್ ಅಲೀಯತ್ತ ಚಾಚಿ, ನಿಮಗೆ 'ಶುಭವಾಗಲಿ' ಎಂದು ಶಿಬಿರದ ಸ್ವಯಂ ಸೇವಕರ ಪ್ರತಿಕ್ರಿಯೆಯಾಗಿದೆ. ಸರಿಯಾಗಿ ಹನ್ನೊಂದ ವೇಳೆಗೆ ಬಟ್ಟೆ ಗಿರಣಿಯ ಹೆಬ್ಬಾಗಿಲಲ್ಲಿ ಸಣ್ಣದಾಗಿ ಬಾಗಿಲು ತೆರೆದಿತ್ತು. "ಹೋಗೋಣ" ಚಾಂದ್ ಅಲೀ ದೃಢ ನಿರ್ಧಾರದಿಂದ ಎದ್ದು ನಿಲ್ಲುತ್ತಾನೆ. ಇವರಿಬ್ಬರು ಅವನ ಹಿಂದೆ ಹೆಜ್ಜೆ ಹಾಕುತ್ತಾರೆ. ಬಟ್ಟೆ ಗಿರಣಿಯಿಂದ ರಸ್ತೆಯನ್ನು ದಾಟಿ ಸೇತುವೆ ತಲುಪುವವರೆಗೂ ಭಯದ ನೆರಳು ಕಾಡಿತ್ತು. ಸೇತುವೆಯ ದಡದಲ್ಲಿ ಒಂದು ಮರ ಪೆಟ್ಟಿಗೆಯ ಅಂಗಡಿ ಇದೆ, ಆ ಅಂಗಡಿಯ ಮಾಲಿಕನಾದ ವಯಸ್ಕರನೊಬ್ಬ ಶರಬತ್ತು ಮಾರುತ್ತಿದ್ದಾನೆ. ಅಂಗಡಿಯ ಬಳಿಯಲ್ಲಿ ಯುವ ಜೋಡಿಯೊಂದು ಶರಬತ್ತು ಸೇವಿಸಿರುತ್ತಾರೆ. ಬಿಸಿಲಿನ ತಾಪವು ನೆಲವನ್ನು ಸೇಡುತ್ತಿರುತ್ತಿದೆ. ಅಲ್ಲೆ ಇದ್ದ ನಿರ್ಜಾಮದರ್ಗದ ಮಿನಾರು ಬಿಸಿಲಿನ ತಾಪಕ್ಕೆ ಪ್ರಕಾಶಿಸುತ್ತಿದೆ. ಅಷ್ಟರಲ್ಲಿ ಮೊಹಿಂದರಳಾ ದಿಕ್ಕು ತೋಚಂತೆ ತನ್ವೀರಳ ಕೈ ಹಿಡಿದುಕೊಂಡು ಎತ್ತಲೋ ದಿಟ್ಟಿಸಿ ನೋಡುತ್ತಾಳೆ. ತನ್ವೀರಳು ಮಾತ್ರ ಅಂಗಡಿಯತ್ತ ನೋಡುವ ಪರಿ ಆಕೆಗೆ ಬಾಯಾರಿಕೆಯ ಸಂದರ್ಭ ಆವರಿಸಿದೆ. ಚಾಂದ್ ಅಲೀ ತನ್ವೀರಳು, ಮೊಹಿಂದರಳು, ಪೆಟ್ಟಿಗೆ ಅಂಗಡಿ,ಅಲ್ಲಿನ ಜನ, ನಿಜಾಮುದ್ದೀನ್ ಸ್ಟೇಶನ್ ಈ ಪ್ರಸಂಗವು ಅವರು ಇರುವ ಸ್ಥಳದಿಂದ ದಾಟುವ ಕ್ರಮವನ್ನು ಸೂಚಿಸುವುದನ್ನು ಗೊತ್ತು ಪಡಿಸುತ್ತದೆ. ಮೊಹಿಂದರ್ ಭಾಬಿ ತನ್ವೀರಳ ಕೈ ಹಿಡಿದುಕೊಂಡು ಹೊರಟೇ ಬಿಟ್ಟಳು. ಚಾಂದ್ ಅಲೀ ಅವರಿಬ್ಬರ ಬೆನ್ನ ಹಿಂದೆ ಕಾಲೆಳೆದ. ಹಳೆಯ ಪೈಜಾಮವೊಂದರಲ್ಲಿ ಬಂಗಾರದ ಒಡವೆಗಳನ್ನೆಲ್ಲ ಸೇರಿಸಿ, ಕೊಳವೆಯಂತೆ ಸೊಂಟಕ್ಕೆ ಕಟ್ಟಿಕೊಂಡಿದ್ದ ಚಾಂದ್ ಅಲೀಯ ನಡಿಗೆಯಲ್ಲಿ ನಿಧಾನವಾಗಿ ಆತ್ಮವಿಶ್ವಾಸ ಬೆಸೆಯಲಾರಂಬಿಸುತ್ತದೆ.

ಮುಂದಿನ ಜೀವನಕ್ಕೆ ಬೇಕಾದ ಸಾಮಗ್ರಿಗಳನ್ನು ಮತ್ತು ಉಳಿದುಕೊಳ್ಳಲು ಉತ್ತಮವಾದ ಸ್ಥಳವನ್ನು ಆಲೋಚಿಸುವ ನಿಟ್ಟಿನಲ್ಲಿ ಪರಸ್ಪರದ ಅವರವರದ್ದೆ ಪ್ರತಿಕ್ರಿಯೆ ಒಡಮೂಡುತ್ತದೆ. ಆ ಯೋಚನೆ ಹೇಗೆ ಎನ್ನುವುದು ಪ್ರಶ್ನೆಗೆ ಉತ್ತರ ದಕ್ಷಿಣದ ಯಾವುದಾದರೊಂದು ಪಟ್ಟಣದ ಹೋಟೆಲಲ್ಲಿ ಬಾಡಿಗೆಗೆ ಕೋಣೆ ಪಡೆದು ಸ್ವಲ್ಪ ದಿನ ಹಾಯಾಗಿದ್ದು ಬಿಡಬೇಕು. ಒಂದೆರಡು ಸಣ್ಣ ಒಡವೆಗಳನ್ನು ಮಾರಿದರೆ ಸಾಕು ಮೂವರಿಗೂ ಒಂದಷ್ಟು ಹೊಸ ವಸ್ತು ಕೊಳ್ಳಬೇಕು. ಎರಡು ಕಬ್ಬಿಣದ ಪೆಟ್ಟಿಗೆಗಳು ಬೇಕಾಗಬಹುದು. ಒಂದನ್ನು ಅವರಿಬ್ಬರು ಬಳಸಲಿ. ತನಗೊಂದು ಪ್ರತ್ಯಾಕ ಬೇಕು. ಆ ಊರಿನ ಸರಿಯಾದ

ಪರಿಚಯವಾದ ಬಳಿಕ ಹತ್ತಿರದ ಹಳ್ಳಿಗೆ ಹೋದರಾಯಿತು. ನಗದು ಬಿಸಾಡಿದರೆ ಜಮೀನು ಮಾರುವವರು ಸಾಲು ನಿಂತಿರುತ್ತಾರೆ. ಹೊಸ ಮನೆ ಕಟ್ಟಿಸುವುದೆಂದರೆ ವರ್ಷ ಬೇಕಾದೀತು. ಸರಿಯಾಗಿರುವ ಹಳೆ ಮನೆಯನ್ನೇ ಖರೀದಿಸಿದರಾಯಿತು. ಮನೆಯ ಬಳಿಯೇ ಹಟ್ಟಿ ಕಟ್ಟಿಸಬೇಕು. ಪ್ರಾರಂಭದಲ್ಲಿ ನಾಲ್ಕು ಎಮ್ಮೆ ಸಾಕು. ಹಾಲು ಮಾರಾಟ ಮಾಡಿಯೇ ದುಡ್ಡು ಸಂಪಾದಿಸುವ ಅಗತ್ಯವಿಲ್ಲ. ಸಾವಿರಗಟ್ಟಲೆ ಬೆಲೆಬಾಳುವ ಬಂಗಾರದ ಒಡವೆಗಳಿಲ್ಲವೇ? ರುಚಿಯಾದ ಲಸ್ಸೀ ತಯಾರಿಸಲು ತನ್ವೀರಳಿಗೂ ಗೊತ್ತಿರಬಹುದು. ಗೊತ್ತಿರದಿದ್ದರೆ ಮೊಹಿಂದರ್ ಭಾಬಿ ಕಲಿಸಿಕೊಟ್ಟರು. ಮಿಲಿಟರಿ ವಾಹನವೊಂದು ಬಿರುಗಾಳಿಯಂತೆ ಇವರನ್ನು ಸವರಿಕೊಂಡು ಹಾರಿಹೋಯಿತು. ಚಾಂದ್ ಅಲೀ ರಸ್ತೆಯ ಬದಿಗೆ ಹಾರಿದ್ದ. ಪೆಟ್ಟಿಗೆ ಅಂಗಡಿಯಲ್ಲಿ ದೊರೆತ ಮಾಹಿತಿ ಸುಳ್ಳಾಗಲಿಲ್ಲ. ಶಕರ್‌ಪುರದಲ್ಲಿ ಇವರನ್ನೇ ನಿರೀಕ್ಷಿಸಿ ನಿಂತಿದ್ದ ಜಾಗ, ಅರ್ಧ ತಾಸಿನ ಸುದೀರ್ಘ ಪ್ರಯಾಣ ನಡೆಸಿ, ಮೂವರನ್ನು ರೈಲು ನಿಲ್ದಾಣದ ಬಳಿ ಇಳಿಸಿತ್ತು. ನಿಲ್ದಾಣದ ಒಳಗೆ ಕಾಲೂರಲೂ ಜಾಗವಿಲ್ಲ. ಸಾಮಾನು ಸರಂಜಾಮುಗಳನ್ನು ನಡುವೆ ಸೇರಿಸಿಟ್ಟು ಸುತ್ತಲೂ ಕಾವಲು ಕುಳಿತ ಜನರ ಮಧ್ಯದಿಂದಲೇ ನಡೆದಾಡಬೇಕು. ಬಟ್ಟೆಯ ಪುಟ್ಟ ಗಂಟೊಂದನ್ನು ಎದೆಗವಚಿಕೊಂಡು ಅತ್ತಿತ್ತ ನೋಡುತ್ತಾ ಮೊಹಿಂದರ್ ಭಾಬಿ ಹೆಜ್ಜೆ ಬದಲಿಸುತ್ತಿದ್ದಳು. ಅಕ್ಕನ ಹೆಜ್ಜೆಯ ಮೇಲೆ ಹೆಜ್ಜೆ ಊರುತ್ತಾ ತನ್ವೀರ್ ನಡೆಯುತ್ತಾಳೆ. ತನ್ವೀರಳ ಯೋಚನೆಯ ಚಾತುರ್ಯತೆ ಮೆಚ್ಚುವಂತದ್ದು. ಆದರೆ ಆಕೆ ಗಂಡಸ್ಸಿನಂತೆ ಬದುಕಲು ಸಾಧ್ಯವಿಲ್ಲವಲ್ಲ ಎಂಬುದು ಮಾತ್ರ ತನ್ನೊಳಗೆನೇ ಪ್ರಶ್ನಿಸಿಕೊಳ್ಳುವ ಈಕೆ ಚಾಂದ್ ಅಲೀ ಮುಂದೆ ನಡೆಸಿ ಆತನೊಡನೆ ಹೋಗುವ ನಿಟ್ಟಿನಲ್ಲಿ ಆತನಿಗೂ ಮಾರ್ಗದರ್ಶಕಳಾಗಿ ಕಾಣುತ್ತಾಳೆ.

ಮುಂದೆ ರೈಲ್ವೆ ನಿಲ್ದಾಣದ ಪ್ರಸಂಗ ಬರುತ್ತದೆ. ಅಲ್ಲಿ ಪ್ಲಾಟ್ ಫಾರಂಗೆ ಟಿಕೇಟ್ ತೆಗೆದುಕೊಂಡು ಬರುವ ಯೋಚನೆಯಲ್ಲಿ ಈ ಮೂರು ಜನರಲ್ಲಿ ಪರಸ್ಪರ ನಾನ ರೀತಿಯ ಚರ್ಚೆ ನಡೆಯುತ್ತದೆ. ತದನಂತರ ಮೊಹಿಂದರ್‌ಭಾಬಿ ಮೌನವಾಗಿಯು, ಆಲೀಯ ಮನಸ್ಸು ಇಷ್ಟವಾಗದೇ ಇರುವುದು, ಅಷ್ಟರಲ್ಲಿ ಒಂದು ತೀರ್ಮಾನ ಎದುರಾಗುತ್ತದೆ. ಯಾವುದೋ ದೂರದ ಸ್ಥಳಕ್ಕೆ ಟಿಕೇಟ್ ತೆಗೆದುಕೊಳ್ಳುವ ಬಗೆಗೆ ನಿರ್ಧರಿಸುತ್ತಾರೆ. ಚಾಂದ್ ಅಲೀ ಟಿಕೇಟ್ ಕೌಂಟರ್ ಬಳಿ ಹೋಗುವ ಪ್ರಯತ್ನ ಆ ಗುಂಪು, ಗುಂಪು ಕಟ್ಟಿದ ಜನಸಂದಣಿಯ ಒಳಗೆ ನುಸುಳುತ್ತಾನೆ. ಆ ಜನರೊಡನೆ ಯಾವ ಮಾಹಿತಿಯು ಸಿಗದೆ ಟಿಕೇಟ್ ತೆಗೆದುಕೊಳ್ಳಲು ಆಗದೇ ಇರುವ ಸಂದರ್ಭ ಎದುರಾಗುತ್ತದೆ. ಅಷ್ಟರಲ್ಲಿ ಮುಂಬೈ – ಕಲ್ಕತ್ತದ ರೈಲು ಗಾಡಿ ರಾತ್ರಿಯಾಗಬಹುದು ಎಂದು ಎಲ್ಲೋ ಸುಳಿವು ಸಿಕ್ಕಿ, ಖಾನಪುರದಿಂದ ೮ರ ವೇಳೆಗೆ ಮದರಾಸಿಗೆ ವೇಗವಾಗಿ ಸಿಗುತ್ತದೆ ಎಂದು ಯಾರೋ ಹೇಳಿದರು. ಟಿಕೇಟು ಕೊಡುವ

ಕಿಟಕಿಯ ಎದುರು ಜನರು ಹದ್ದುಗಳಂತೆ ಆಕ್ರಮಿಸಿದ್ದರು. ಪಕ್ಕದ ಗೋಡೆಯಲ್ಲಿ ದೊಡ್ಡ ಫಲಕವೊಂದು ತೂಗುತ್ತಿತ್ತು. ಕೆಂಪು ಮತ್ತು ನೀಲಿ ಬಣ್ಣಗಳಲ್ಲಿ ಬರೆಯಲಾಗಿದ್ದ ಅಕ್ಷರಗಳು ಒಗಟಿನಂತೆ ಕಾಣಿಸಿದ್ದವು. ತನ್ವೀರಳಿಗಾದರೆ ಈ ಒಗಟು ಅರ್ಥವಾಗಬಹುದು. ಅವಳನ್ನೇ ಕರೆದುಕೊಂಡು ಬರಬೇಕು. ಮೊಹಿಂದರ್ ಭಾಬಿ ತಾನೂ ಬರುವೆ ಎನ್ನಬಹುದು. ಬರಲಿ, ಮೊಹಿಂದರ್ ಭಾಬಿ ಹೇಳಿದ ಊರಿಗೇ ಟಿಕೆಟು ಕೊಂಡರಾಯಿತು. ಯಾವ ಊರಾದರೂ ತನಗೇನು ಎನ್ನುವ ಸಂದರ್ಭವು ಮೊಹಿಂದರ್ ಭಾಬಿಯ ಪ್ರತಿಕ್ರಿಯೆಗಾಗಿ ಹಾತೊರೆಯುತ್ತಿರುವ ಅಲೀ ಮತ್ತು ತನ್ವೀರಳ ಕಳವಳವನ್ನು ಹಾಗೇ ಅವರ ನಡುವಿನ ಅಂತಃಕರಣವನ್ನು ಲೇಖಕರು ಈ ಮೂರು ಪಾತ್ರಗಳ ಮೂಲಕ ರೈಲ್ವ ಸ್ಟೇಷನ್ ಪ್ರಸಂಗವನ್ನು ಅಭಿವ್ಯಕ್ತಿಸಿದ್ದಾರೆ.

ಅವರಿಬ್ಬರು ಕುಳಿತಿದ್ದ ಜಾಗದಲ್ಲಿ ಹತ್ತು ಹದಿನೈದು ಜನರು. ಗಂಡಸರು, ಹೆಂಗಸರು, ಮಕ್ಕಳು, ಹೆಂಗಸರು ಪರಸ್ಪರ ತಬ್ಬಿಕೊಂಡು ಬೆನ್ನು ತಡವುತ್ತಿದ್ದಾರೆ, ಕಣ್ಣೊರೆಸಿಕೊಳ್ಳುತ್ತಿದ್ದಾರೆ. ಮೊಹಿಂದರ್ ಭಾಬಿಯ ಭುಜದ ಮೇಲೆ ಕೈಯಿರಿಸಿದ್ದ ಹಿರಿಯರೊಬ್ಬರು ಏನನ್ನೋ ಹೇಳುತ್ತಿದ್ದಾರೆ. ತನ್ವೀರಳನ್ನು ಮುದುಕಿಯೊಬ್ಬಳು ತಬ್ಬಿ ಹಿಡಿದು ಮುದ್ದಾಡುತ್ತಿದ್ದಾಳೆ. ಸಂದರ್ಭವನ್ನು ಗಮನಿಸಿದರೆ ಸಾರ್ವಜನಿಕರೊಂದಿಗೆ ತನ್ವೀರ್ ಕೌರಳ ನಡವಳಿಕೆ ಆ ಅಜ್ಜಿಯ ಪಾತ್ರದಿಂದ ಸ್ಪಷ್ಟಗೊಳ್ಳುತ್ತದೆ. ಅಷ್ಟರಲ್ಲಿ ಆರಡಿ ಎತ್ತರದಲ್ಲಿ ತೇಲುತ್ತಿದ್ದ ಏಳೆಂಟು ಬಣ್ಣ ಬಣ್ಣದ ಪೇಟಾಗಳು ನೇಣುಗಂಬಗಳ ತಲೆಗೆ ತೊಡಿಸಿದ ಮುಂಡಾಸುಗಳಂತೆ ಕಾಣಿಸಿದ್ದವು. ಚಾಂದ್ ಅಲೀ ಗಲಿಬಿಲಿಗೊಂಡು ಹಿಂದಕ್ಕೆ ಸರಿದ. ಚಹದಂಗಡಿಯ ಹಿಂಭಾಗಕ್ಕೆ ಸರಿದುನಿಂತು ಕಾಲುಗಳು ನಡುಗುತ್ತಿದ್ದವು. ಎದೆಬಡಿತ ಜೋರಾಯಿತು. ಹಣೆಯಲ್ಲಿ ಬೆವರು ಸಾಲುಗಟ್ಟಿತು. ಬೆನ್ನ ಹಿಂದೆ ಯಾರೋ ನಿಂತಿದ್ದಾರೆ ಅನ್ನಿಸಿದಾಗ ರಕ್ತ ಹೆಪ್ಪಾಯಿತು. ಮೆಟ್ಟಿಲುಗಳ ದಿಕ್ಕಿನಿಂದ ಯಾರೋ ಓಡಿಬರುತ್ತಿದ್ದಾರೆ ಎಂದು ಭಾಸವಾಯಿತು. ಬೆದರುತ್ತಲೆ ಕತ್ತು ತಿರುಗಿಸಿದ, ನಾಲ್ಕು ದಿಕ್ಕಿಗೆ ಧಾವಿಸುತ್ತಿರುವವರೇ ಕಾಣಿಸಿದರು. ಚಾಂದ್ ಅಲೀ ಅರೆ ಕ್ಷಣ ಹಾಗೆಯೇ ನಿಲ್ಲುತ್ತಾನೆ. ಚಾಂದ್ ಅಲೀಯು ತನ್ನ ಹೆಜ್ಜೆ ಹೆಜ್ಜೆಗೂ ಭಯದ ನೆರಳನ್ನೇ ಆವರಿಸಿಕೊಂಡು ಕ್ಷಣ ಕಾಲ ನಿಂತು ಮತ್ತೆ ನಡೆದು, ಭಯದಿಂದ ಅಪರಿಚಿತರು ಹಿಂಬಾಲಿಸಬಹುದೆ ಎಂದು ಖಾತರಿಪಡಿಸಿಕೊಂಡು ರೈಲ್ವೆ ನಿಲ್ದಾಣದ ಪ್ಲಾಟ್ ಫಾರಂಗೆ ವೇಗವಾಗಿ ಸಾಗುತ್ತಾನೆ.

ಚಾಂದ್ ಅಲೀಯು ಮತ್ತು ರೈಲು ನಿಲ್ದಾಣದ ಪ್ಲಾಟ್ ಪಾರಂ ಈ ಪ್ರಸಂಗ ಎಡರು ತೊಡರುಗಳಿಂದಲೇ ಸಾಗುತ್ತದೆ. ಏಕೆಂದರೆ ಅಲೀ ಟಿಕೇಟ್ ತೆಗೆದುಕೊಳ್ಳದ ತಪ್ಪಿಗಾಗಿ ಅನುಭವಿಸಿದ ನಾನಾ ರೀತಿಯ ತೊಂದರೆಗಳನ್ನು ಎದುರಿಸಬೇಕಾಗುತ್ತದೆ. ಹಾಗೆ ಆತ ಕಲಿತಿದ್ದ ಪಾಠವು ಕೂಡ 'ಇನ್ನೊಮ್ಮೆ ಕಾಣಿಸಿದರೆ ಕತ್ತಲೆ ಕೋಣೆಯಲ್ಲಿ ಕೂಡಿಹಾಕುತ್ತೇನೆ ಸಿಬ್ಬಂದಿ

ಒಬ್ಬ ಎಚ್ಚರಿಕೆ ಕೊಡುತ್ತಾನೆ. ಆದರೆ ಮೊಹಿಂದರ್ ಮತ್ತು ತನ್ವೀರಳನ್ನು ಸುತ್ತಿಕೊಂಡಿದ್ದ ಅಪಾಯದ ಪೇಟಗಳನ್ನು ಕಂಡು ವೇಗವಾಗಿ ಬರುವ ಗಡಿ ಬಿಡಿಯಲ್ಲಿ ಎಲ್ಲವನ್ನು ಮರೆಯುತ್ತಾನೆ. ಹಾಗೆಯೇ ಹಿಂದೂಸ್ತಾನ ಮತ್ತು ಪಾಕಿಸ್ಥಾನದಲ್ಲಿ ಅಪಾಯಕ್ಕೆ ಸಿಕ್ಕಿ ಬಿದ್ದಿದ್ದ ಎರಡು ಹೆಣ್ಣು ಮಕ್ಕಳನ್ನು ರಕ್ಷಿಸಿ ಹಿಂದೂ ದೇಶಕ್ಕೆ ತಂದು ಬಿಟ್ಟವನ್ನು ಚಾಂದ್ ಅಲೀಯಾಗಿರುತ್ತಾನೆ. ಲಾಹೋರಿನ ಚಿಕ್ಕಪ್ಪನವರಿಗೆ ಹಂಚಲಾಗಿದ್ದ ಹೊಸ ಮನೆಯಲ್ಲಿ ತನಗಾಗಿ ಮೀಸಲಿಟ್ಟಿರುವ ಪ್ರತ್ಯೇಕ ಕೋಣೆಯಲ್ಲಿ ಸುಖವಾಗಿವಾಗಿರುವುದನ್ನು ಬಿಟ್ಟು ಪ್ರಾಣದ ಹಂಗೂ ತೊರೆದು ಸಹೋದರಿಯರಿಬ್ಬರನ್ನು ಕಾಪಾಡುವ ನಿಟ್ಟಿನಲ್ಲಿ ತನಗೆ ಸಿಕ್ಕ ಪ್ರತಿಫಲವಾದರೂ ಏನು ಎನ್ನುವ ಪ್ರಶ್ನೆ ಎದುರಾಗುತ್ತದೆ. ಬಹುಮಾನ ಬೇಡ ಆದರೆ ಕರೆದುಕೊಂಡು ಬಂದವರೆ ನಡುದಾರಿಯಲ್ಲಿ ಬಿಟ್ಟು ಹೋಗುತ್ತಾರೆ. ಅವರಿಗೆ ಅವರ ಕಡೆಯವರು ಸಿಕ್ಕದ ಬಳಿಕ ತನ್ನ ಅಗತ್ಯವಾದರೂ ಏಕೆ ಅಥವಾ ತಾನೇ ಅವರನ್ನು ನಡುದಾರಿಯಲ್ಲೇ ಬಿಟ್ಟು ಬಂದೆನೋ ಎಂದು ಚಿಂತನೆಗೀಡಾಗುತ್ತಾರೆ.

ಅಲೀಯ ಎದೆಯೊಳಗೆ ಸಣ್ಣ ಅನುಮಾನ ಮೊಳಕೆಯೊಡೆಯಿತು. ತನ್ನಿಂದ ತಪ್ಪಿಸಿಕೊಳ್ಳುವ ಯೋಚನೆ ಅವರಿಗಿರುತ್ತಿದ್ದರೆ ತಮ್ಮೆಲ್ಲ ಅಭರಣಗಳ ಜವಾಬ್ದಾರಿಯನ್ನು ತನಗಾದವರು ಒಪ್ಪಿಸುತ್ತಿರಲಿಲ್ಲ. ಅವರೀಗ ಎಲ್ಲಿರಬಹುದು? ತಮ್ಮವರ ಜೊತೆಗೆ ಹೋಗಿದ್ದಿರಬಹುದೇ? ಅಥವಾ ಅಲ್ಲಿಯೇ ಕಾಯುತ್ತಾ ಕುಳಿತುಕೊಂಡಿರಬಹುದೇ ಪಾಪ, ಅವರಲ್ಲಿ ಒಂದು ರೂಪಾಯಿಯಷ್ಟೂ ಹಣವೂ ಇಲ್ಲವಲ್ಲ. ಎಲ್ಲವೂ ತನ್ನ ಬಳಿಯೇ ಇವೆ. ಹಸಿವಾದಾಗ ಅವರಿಗೆ ಒಂದು ತುಂಡು ರೊಟ್ಟಿ ಕೂಡಾ ಸಿಗದು. ಭಿಕ್ಷೆ ಬೇಡುಬೇಕಷ್ಟೆ. ಚಾಂದ್ ಅಲೀಯ ಎದೆಯೊಳಗೆ ಮೊಹಿಂದರ್‌ಭಾಬಿ ಕೈ ಹಾಕಿ ಕದಡಿದಳಂತೆ ಬಾವಿಸುತ್ತಾನೆ. ರೈಲುಗಾಡಿಯ ಸಮೀಪದಲ್ಲಿ ಕುಳಿತಿರುವಂತಹ ಚಾಂದ್ ಅಲೀಯ ಆಸುಪಾಸಿನಲ್ಲಿ ಅಮೀರ್ ಬಾಯಿ ಎಂಬುವವಳು ಪರಿಚಯವಾಗಿ ಮತ್ತೊಂದು ಬದುಕಿನ ಸ್ವರೂಪವನ್ನು ಅಮೀರ್ ಬಾಯಿ ಎಂಬಾಕೆಯಿಂದ ಮತ್ತೊಂದಡೆಗೆ ನಡೆಯುವ ಪ್ರಸಂಗ ಅಮೀರ್ ಬಾಯಿ ಪಾತ್ರದೊಂದಿಗೆ ವಿಶೇಷತೆಯನ್ನು ಗುರುತಿಸುತ್ತಾರೆ. ತನ್ವೀರಳ ಬಗೆಗೆ ಅಪಾರವಾದ ಗೌರವವನು ಹಾಗಾಗ ವ್ಯಕ್ತಪಡಿಸುವ ಅಲೀ ಒಮ್ಮೆ ಕ್ಯಾಂಪಿನಲ್ಲಿ ತೊಂಬತ್ತು ರೂಪಾಯಗಿಳನ್ನು ಆಕೆಗೆ ಕೊಡಲಿಲ್ಲವೆಂದು ಬೇಸರ ಪಡುತ್ತಾನೆ ಮತ್ತೆ ಪೈಜಾಮದ ಜೇಬನ್ನು ತಡವಿಕೊಂಡು ತನ್ವೀರ್ ಮತ್ತು ಮೊಹಿಂದರ್‌ಳ ಕುಳಿತಿರುವ ಸ್ಥಳವನ್ನು ನೆನಪಿಸಿಕೊಳ್ಳುತ್ತಾನೆ.

ರೈಲ್ವೆ ನಿಲ್ದಾಣದ ಕೌಂಟರ್ ಬಳಿ ಯಾರೋ ಒಬ್ಬ ಹೆಂಗಸನ್ನು ಕಂಡು ವಿಶ್ವಾಸರ್ಹತೆಯಿಂದ ಪರಸ್ಪರ ಮಾತನ್ನಾಡುತ್ತಾನೆ. ಆಕೆ ಗೋಣಿಚೀಲವನ್ನು ಮಾರಾಟ ಮಾಡುವಂತವಳು, ಅವಳ ಬಳಿ ನಿಂತು, ಹಲವು ರೀತಿಯಲ್ಲಿ ಯೋಚಿಸಿ ನೋಡುತ್ತಾನೆ.

ಅದು ತನ್ನಲ್ಲಿ ಇರುವ ಬಟ್ಟೆಗಳು ಮತ್ತು ಅಲ್ಪ ಸ್ವಲ್ಪ ಹಣವನ್ನು ಕೂಡಿ ಇಡಲು ಈ ಬಣ್ಣದ ಗೋಣಿಚೀಲ ಅಗತ್ಯವಿದೆ. ಎಂದು ಯೋಚಿಸಿ, ಆಕೆ ಆರಾಣಿಗೆ ಚೀಲದ ಬೆಲೆ ಹೇಳಿದರು. ಈತನ ಊರಿನಲ್ಲಿ ಆ ಚೀಲ ಮೂರಾಣಿಗೆ ಸಿಗುವಂತದ್ದು. ಆದರೂ ನಾಲ್ಕಾಣೆಗೆ ಕೊಡುತ್ತಾನೆ. ಉಳಿದ ಚಿಲ್ಲರೆಯನ್ನು ಆಕೆಗೆ ಉಚಿತವಾಗಿ ಕೊಡುವ ಮಾನವೀಯತೆಯ ಅಂತಃಕರಣವನ್ನು ಮೆಚ್ಚುವಂಥದ್ದು. ಆಕೆಗೆ ಸೋದರಿ ಎಂದು ಭಾವಿಸಿ ತೃಪ್ತಿಕರವಾಗಿ ಮಾತನ್ನಾಡಿಸುತ್ತಾನೆ. ಅಷ್ಟರಲ್ಲಿ ಅಲ್ಲೆ ಇದ್ದ ಚಹದಂಗಡಿ ಬಳಿ ಕುಳಿತಿದ್ದ ತನ್ವೀರ್ ಮತ್ತು ಮೊಹಿಂದರ್‌ಳು ಅವರ ನೆನಪು ಕಾಣುತ್ತದೆ. ಅಷ್ಟರಲ್ಲಿ ಅವರನ್ನು ಕರೆದುಕೊಂಡು ಬಂದು ಯಾವುದಾದರು ಹೋಟೆಲ್ ಬಳಿ ಹೋಗಿ ಹೊಟ್ಟೆ ತುಂಬ ಊಟ ಮಾಡಿ ಮುಂದಿನ ಯೋಚನೆ ಮಾಡೋಣ ಅಂದುಕೊಳ್ಳುತ್ತಾನೆ. ಮತ್ತೇ ಆ ಸಹೋದರಿಯರನ್ನು ಹುಡುಕಲು ಪ್ರಯತ್ನಿಸುತ್ತಾನೆ. ಆದರೂ ಅವರು ಸಿಗಲಿಲ್ಲ. ತನ್ವೀರ್ ಮತ್ತು ಮೊಹಿಂದರಳ ಇವರನ್ನು ಹಪಹಪಿಸುತ್ತಾನೆ. ಮುಂದೆ ಅನಾಥ ಪ್ರಜ್ಞೆ ಕಾಡುತ್ತದೆ. ಆ ಸಂದರ್ಭದಲ್ಲಿ ಅಮೀರಭಾಬಿ ಸಹಕಾರದಿಂದ ಸ್ವಲ್ಪ ಮಟ್ಟಿಗೆ ಚೇತರಿಸಿಕೊಳ್ಳುತ್ತಾನೆ. ಆಕೆ ಹೇಳುತ್ತಾಳೆ "ನಾನು ನಿನ್ನನ್ನು ನಿಖಾ ಮಾಡಿಕೊಳ್ಳವೆ" ಎಂದಾಗ ಇವನೇನೂ ಹಾಗೆ ಮಾಡಬೇಡ ಅನ್ನಲಿಲ್ಲ. ಕರಾಚಿಯಿಂದ ಲಾಹೋರಿಗೆ ಚಾಂದ್ ಅಲೀಯನ್ನು ಬೇರೆ ಯಾರೋ ಅಪರಿಚಿತರ ಜೊತೆಗೆ ಶಂಶಾದ್ ಮಾಯಿ ರೈಲು ಹತ್ತಿಸಿದಾಗಲೂ ಯಾಕೆ ಎಂದು ಪ್ರಶ್ನಿಸಲಿಲ್ಲ. ಮುಂದೆ ಲಾಹೋರಿನಲ್ಲಿ ರೋಷನ್ ಚಿಕ್ಕಪ್ಪನ ಆಶ್ರಯದಲ್ಲಿರುವಾಗ, ದೇಶವನ್ನು ಎರಡು ತುಂಡು ಮಾಡಿ ಹಂಚಿಕೊಂಡ ದೆಹಲಿಯ ನಾಯಕರುಗಳು ಚಾಂದ್ ಅಲೀಗೆ ಪಾಕಿಸ್ತಾನವನ್ನು ನೀಡಿ, 'ಇದು ನಿನ್ನ ದೇಶ' ಎಂದು ಸೂಚಿಸಿದಾಗಲೂ ಚಾಂದ್ ಅಲೀ ತುಟಿ ಎರಡು ಮಾಡಲಿಲ್ಲ.

ಶಂಶಾದ್ ಮಾಯಿ 'ನಾನು ಅಮೀರ್ ಭಾಯಿಯನ್ನು ನಿಖಾ ಆಗದೆ ಬಿಡುವವಳಲ್ಲ' ಎಂದು ಶಪಥ ಹಾಕದಿರುತ್ತಿದ್ದರೆ ಚಾಂದ್ ಅಲೀ ಇಂದು ಕೂಡ ಕರಾಚಿಯ ಎರಡು ಕೋಣೆಗಳ ಗುಡಿಸಲಲ್ಲಿ ಹಾಯಾಗಿಯೇ ಇರಬಹುದಿತ್ತು. ಅದಕ್ಕಿಂತಲೂ ಮುಖ್ಯವಾಗಿ ತನ್ನ ಬಾಲ್ಯದ ಗೆಳೆಯರನ್ನು ಮುಖ್ಯವಾಗಿ ಲಾಲ್ ಚೆಂದನನ್ನು ಮೊನ್ನೆ ಮೊನ್ನೆಯವರೆಗೂ ಕಂಡು ಮಾತನಾಡಿಸಬಹುದಿತ್ತು. ಈಗೆಲ್ಲಿರಬಹುದು ಲಾಲ್ ಚಂದ್ ಇಂತಹ ದಿನಗಳಲ್ಲೇ ಕಂಟೋನ್ ಮೆಂಟ್‌ನಲ್ಲಿದ್ದ ಅಂಗಡಿಯವನೊಬ್ಬ ಆ ಆಘಾತಕಾರಿಯಾದ ಸುದ್ದಿ, ನೀಡುವ ಸಂದರ್ಭ ಅನಿವಾರ್ಯವಾದುದ್ದು.

ಅಲೀಯು ತನ್ನ ಅಸ್ತಿತ್ವಕ್ಕಾಗಿ ಈ ನಿರ್ಧಾರ ತೆಗೆದುಕೊಂಡಿರುವುದು ವಿನಃ ತನ್ನ ಸ್ವಾರ್ಥಕ್ಕಲ್ಲ. ಆತ ತನ್ನ ಇರುವಿಕೆಗಗಿ ಅಮೀರ್ ಬಾಬಿಯನ್ನು ವಿವಾಹವಾಗಲೆಂದು

ಸೂಕ್ತವೆನ್ನಿಸಿ ಒಪ್ಪಿಗೆ ಕೊಡುತ್ತಾನೆ. ಅಂದರೆ ಪ್ರಮುಖವಾಗಿ ಮೊಹಿಂದರ್ ಮತ್ತು ತನ್ವೀರಳನ್ನು ಮತ್ತೊಮ್ಮೆ ಸಿಗಬಹುದೆನ್ನುವ ಹಂಬಲದಿಂದ ದೃಢನಿರ್ಧಾರವನ್ನು ತೆಗೆದುಕೊಳ್ಳುತ್ತಾನೆ.

ಆತ ಎಷ್ಟೋ ವರ್ಷಗಳ ನಂತರ ತನ್ನ ಮಕ್ಕಳ ತನ್ನ ಮೊಮ್ಮಕ್ಕಳನೊಡನೆ ಅನೂನ್ಯತೆಯಿಂದ ಸಂಬಂಧವನ್ನು ಬೆಸೆದುಕೊಂಡು ಮುಪ್ಪಾದ ಕ್ಷಣದಲ್ಲೂ ಆ ಸಹೋದರಿಯರನ್ನು ನೆನೆದು ಕುಂತಲ್ಲೇ ಒಂದು ನಿರ್ಧಾರ ತೆಗೆದುಕೊಳ್ಳುತ್ತಾನೆ. ಸುಮಾರು ವರ್ಷಗಳವರೆಗೂ ತನ್ವೀರ್ ಮತ್ತು ಮೊಹಿಂದರ್‌ಳು ಸಿಕ್ಕಿರಲಿಲ್ಲ. ಆದರೆ ಅವರದ್ದೆ ಆಭರಣಗಳು ಈತನೊಡನೆ ಇವೆ. ಈ ಒಡವೆಗಳನ್ನು ಆ ಸಹೋದರಿಯರಿಗೆ ಏನಾದರು ಮಾಡಿ ಹಿಂಮರಳಿಸಬೇಕೆಂಬ ದೃಢ ನಿರ್ಧಾರ ಆದರೆ ಅವರಲ್ಲಿರುವವರು ಎಂಬುದು ಗುರುತು ಸಿಕ್ಕಿರಲಿಲ್ಲ. ಎಷ್ಟೋ ವರ್ಷ ನಂತರ ಎಲ್ಲಾ ಹಳೆಯ ಘಟನೆಗಳನ್ನು ನೆನೆದು, ಆ ದುಬಾರಿ ಬೆಲೆ ಬಾಳುವ ಒಡವೆಗಳನ್ನು ಮತ್ತೆ ಮರಳಿಸಲು ಹಲವು ರೀತಿಯಲ್ಲಿ ಪ್ರಯತ್ನಿಸುತ್ತಾನೆ. ಅಂದರೆ ಮಾನವೀಯ ಗುಣಕ್ಕೆ ಎಷ್ಟೊಂದು ಗೌರವಿಸುತ್ತಿದ್ದ ಎಂದು ತಿಳಿಯಲಾಗುತ್ತದೆ. ತುಂಬಾ ಯೋಚಿಸಿ ಅಂದಿನ ಕ್ಷಣಗಳನ್ನು ನೆನೆಯುತ್ತಾ, ಅಷ್ಟರಲ್ಲಿ ಒಂದು ಯೋಚನೆ ಹೊಳೆಯುತ್ತದೆ. ಅದು ಮತ್ತೆ ನಾನು ಆ ನಿರಾಶ್ರಿತರ ಕ್ಯಾಂಪಿಗೆ ಹೋಗಿ ಅಲ್ಲಿನ ದರ್ಗಾದ ಬಳಿ ಹೋದರೆ ಮತ್ತೆ ಸಿಕ್ಕಬಹುದು ಎನ್ನುವ ಮಹಾದಾಸೆಯಿಂದ ಹೊರಟು ಹೋಗುತ್ತಾನೆ. ಅಲ್ಲಿ ಎಲ್ಲ ಕಡೆ ಹುಡುಕುತ್ತಾನೆ. ಈ ತಾತನಾದ ಚಾಂದ್ ಅಲೀಗೆ ಸಿಗದೇ ಇರುವ ಕಾರಣದಿಂದ ಆಕೆಯ ತಮ್ಮ ಕರ್ತಾರ್‌ಸಿಂಗ್ ಮಾತ್ರ ಸಿಗುತ್ತಾನೆ. ಆತನೊಂದಿಗೆ ಪರಸ್ಪರ ಮಾತನಾಡಿದ್ದು, ತನ್ವೀರ್ ಎಲ್ಲಿದ್ದಾರೆ ಎಂದು ಕೇಳಿ, ಆ ಸ್ಥಳ ಕರೆದುಕೊಂಡು ಹೋಗಿ ಎಂದು ವಿನಂತಿಸಿಕೊಂಡು ಹೋಗುತ್ತಾನೆ. ಆಕೆ ಅವರನ್ನು ನೋಡಲೆಂದು ಮತ್ತೊಂದು ಆಭರಣ ಕೊಡಬೇಕೆಂದು ನೀನು ನಂಬಿಕೆಯಿರಿಸಿ ಕೊಟ್ಟಿದ್ದ ಬಂಗಾರದ ಒಡವೆಗಳನ್ನೆಲ್ಲ ಹಾಗೆಯೇ ಇಟ್ಟುಕೊಂಡಿರುವ ಹುಡುಗ ಇಲ್ಲೇ, ಇಲ್ಲೇ ನಿನ್ನ ಕಣ್ಣೆದುರೇ ಇದ್ದಾನೆ ತನ್ವೀರ್ ಎಂದು ಗಟ್ಟಿಯಾಗಿ ಚೀರಬೇಕೆನ್ನಿಸಿತ್ತು. ಆದರೆ ಒಣಗಿದ ಗಂಟಲೊಳಗಿನಿಂದ ಮಾತೇ ಹೊರಡುತ್ತಿರಲಿಲ್ಲ. ಕರ್ತಾರ್ ಸಿಂಗರಿಗೆ ಗೊತ್ತಾಗಿಬಿಟ್ಟರೆ ಕಚಕ್ಕನೆ ಕತ್ತು ಕತ್ತರಿಸಿ ಕೆರೆಗೆ ಬಿಸಾಡುವುದು ಖಂಡಿತ. ಬೆವರಿದ ಮುಖವನ್ನು ಪಕ್ಕಕ್ಕೆ ತಿರುಗಿಸಿ ತಲೆ ತಗ್ಗಿಸಿ ಕುಳಿತುಬಿಟ್ಟಿದ್ದರು ಚಾಂದಜ್ಜ, ಅಷ್ಟರಲ್ಲಿ ಧೋಟಿ ದೀದಿಯನ್ನು ಕೆರೆಯ ದಂಡೆಯ ಬಳಿ ಬಿಟ್ಟು ಹೋಗಿದ್ದ ಯುವತಿ ಮತ್ತೊಮ್ಮೆ ಬಂದಿದ್ದಳು. ದೂರದಲ್ಲಿ ಗಂಡಸರಿಬ್ಬರು ಅಗಲೂ ಇವರತ್ತವೇ ಕಣ್ಣು ನೆಟ್ಟು ನಿಂತಿದ್ದರು. “ಈಗ ಹನ್ನೊಂದು ದಾಟಿದೆ. ನೀವು ನಾಳೆ ಬೆಳಗ್ಗೆ ಬಂದರೆ, ಬೇಕಾದಷ್ಟು ಹೊತ್ತು ಮಾತನಾಡಬಹುದು”[೨೫] ಎಂದು ಯುವತಿ ತನ್ವೀರಳತ್ತ ಕೈಚಾಚಿದಳು. ಕೀಲು ಕೊಟ್ಟ ಗೊಂಬೆಯಂತೆ ತನ್ವೀರ್ ಎದ್ದು ನಿಂತಿದ್ದಳು. ನಾಳೆ ಬೆಳಿಗ್ಗೆ ಅದೇ ಕೌಂಟರ್ ಬಳಿಗೆ ಬನ್ನಿ ಧೋಟಿದೀದಿ ಸಿಗುತ್ತಾರೆ. ಎಂದು ಯುವತಿ ತನ್ವೀರಳ ಕೈ ಹಿಡಿದು ನಡೆಸುತ್ತಾ ಹೋಗಿಬಿಡುತ್ತಾಳೆ. ಈ ಸನ್ನಿವೇಶವನ್ನು ಕಂಡ ಚಾಂದ್ ಅಲೀಯು ದಿಗ್ಭ್ರಮೆಗೊಂಡಂತೆ ಮರುಗುತ್ತಾನೆ. ಅಷ್ಟರಲ್ಲಿ ಕರ್ತಾರ್ ಸಿಂಗ್ ಬರುತ್ತಾನೆ. ಚಾಂದಜ್ಜನೊಡನೆ

ಪರಸ್ಪರ ಮಾತುಕತೆಗಳೊಂದಿಗೆ ತನ್ನ ಸಹೋದರಿಯರ ಬಾಲ್ಯ ಜೀವನವನ್ನು ನೆನೆದು ದುಃಖಿತನಾಗುತ್ತಾನೆ. ಇಷ್ಟೆಲ್ಲ ಕೇಳಿದ ಚಾಂದಜ್ಜ ಒಡವೆಗಳನ್ನು ಹಿಂದಿರುಗಿಸಲು ಪ್ರಯತ್ನಿಸಿ, ಆ ಪ್ರಯತ್ನದಿಂದ ಸೋಲು ಕಂಡು ಆಭರಣಗಳನ್ನು ಕೊಡುವುದರಿಂದ ಆಪಾದನೆ ಹೆಚ್ಚಾಗಬಹುದು. ಆದರೆ ಈಗ ವಯಸ್ಸಾಗಿದೆ ಆಕೆಗೆ ಹಿಂದಿರುಗಿಸಲು ತನ್ನ ಜೇಬುಗಳನ್ನು ಹುಡುಕುತ್ತಿರುತ್ತಾನೆ. ಆಕೆಗೆ ಹಿಂದಿರುಗಿಸಲು ತನ್ನ ಜೇಬುಗಳನ್ನು ಹುಡುಕುತ್ತಿರುತ್ತಾನೆ. ರೂಮಿನಿಂದ ಹೊರಡುವಾಗಲೇ ಜುಬ್ಬಾದ ಎರಡೂ ಜೇಬುಗಳಲ್ಲಿ ತುಂಬಿಕೊಂಡಿದ್ದ ಬಟ್ಟೆಯ ನಾಲ್ಕು ಪುಟ್ಟ ಪುಟ್ಟ ಗಂಟುಗಳು ಭದ್ರವಾಗಿರುವುದನ್ನು ಬೆರಳುಗಳು ಖಚಿತಪಡಿಸಿದ್ದವು. ಐವತ್ತು ವರ್ಷಗಳ ಹಿಂದೆ ಅವರಿಬ್ಬರನ್ನು ರೈಲು ನಿಲ್ದಾಣದಲ್ಲಿ ಬಿಟ್ಟು ಹೋಗುವ ಸಂದರ್ಭದಲ್ಲೂ ಇದೇ ರೀತಿಯಲ್ಲಿ ಸೊಂಟ ತಡವಿಕೊಂಡು ಸರಿಸುಮಾರು ಐವತ್ತು ವರ್ಷಗಳ ಹಿಂದೆ ಪರಿಣಾಮಕಾರಿಯಾದ ಘಟನಾವಳಿಗಳನ್ನು ನೆನೆದು ಕೊನೆಗೂ ಹಿಂದಿರುಗಿಸಲಾರದ ಸ್ಥಿತಿ ಎದುರಾಗಿ "ಇಡೀ ಲೋಕವೇ ತಮ್ಮನ್ನು ಗಮನಿಸುತ್ತಿದ್ದರು ಅದರ ಗೊಡವೆ ತಮಗಿಲ್ಲ ಅಂತ ಕಣ್ಣು ಮುಚ್ಚಿ ತಮಗೆ ತಾವೇ ಹೇಳಿಕೊಂಡರು. ಅಲ್ಲಾಹುವೇ, ನಾನು ಮಾಡಿರಬಹುದಾದ ಎಲ್ಲ ತಪ್ಪುಗಳನ್ನೂ ಮಾಫ್ ಮಾಡು ಎಂದು ಪ್ರಾರ್ಥಿಸುತ್ತಾನೆ."[೨೬] ತನ್ವೀರ್ ಮತ್ತು ಮೊಹಿಂದರ್ ಭಾಬಿ ಇವರ ಹೊಂದಾಣಿಕೆಯ ಬದುಕು ಹಾಗೇ ಒಬ್ಬರಿಗೊಬ್ಬರು, ನಡುವಿನ ಅಂತಃಕರಣ ಸಾವಿನ ಅಳುವಿನಲ್ಲೂ ಕೂಡ ಚಾಂದಜ್ಜನ ಅನಿವಾರ್ಯದ ಸ್ಥಿತಿ ಐವತ್ತು ವರ್ಷಗಳ ಹಿಂದಿನ ಘಟನಾವಳಿಗಳು ಯತ್ತೇಚ್ಛವಾಗಿ ಆತನೊಡನೆ ನೆರಳಂತೆ ಕಾಡುವ ಪರಿ ಬಹಳ ವಿಶಿಷ್ಠವಾದದ್ದು. ಕೊನೆಗೊಮ್ಮೆ ಅಸಾಯಕ ಹೆಣ್ಣು ಮಕ್ಕಳನ್ನು ನೋಡಲೆಂದು ಹೋದ ಚಾಂದ್ ಅಲೀ ತನ್ನ ಮನವೇದನೆಯನ್ನು ಹೇಳಲಾರದ ಸಂದರ್ಭ ತನ್ವೀರಳಿಗೆ ಮಾತಿಲ್ಲದ ಮುಪ್ಪಿನಲ್ಲಿ, ಗುರುತಿಸಲಾರದ ಆಕೆಯ ಮನಸ್ಥಿತಿಯನ್ನು ಕಂಡು ಕೊನೆಯಲ್ಲಿ ಆಕೆಯ ಮುಖ ದರ್ಶನ ಕಂಡು ದುಃಖಿತನಾಗಿ ತಾನು ನಂಬಿರುವ ದೇವರಿಗೆ ತನ್ನ ಅಸಾಯಕತೆಯನ್ನು ಅರ್ಪಿಸಿ ಕ್ಷಮೆಯನ್ನು ಕೊರುವ ಸಂದರ್ಭ ಮೌಲ್ಯಧಾರಿತವಾದ ಮಾನವೀಯತೆಯ ಗುಣವುಳ್ಳವದ್ದು, ತನ್ವೀರಳು ಮತ್ತು ಮೊಹಿಂದರ್ ಕೌರಳ ಬಾಲ್ಯದ ಚಿತ್ರಣ, ಯೌವ್ವನಕ್ಕೆ ಬಂದ ಬಗೆಗೆ ಜೀವನ ಪರ್ಯಂತ ಸಂಕೋಲೆಗೆ ಸಿಕ್ಕಿ, ನರಳುವಿಕೆಯ ದಾರುಣ್ಯ ಸ್ಥಿತಿಯನ್ನು ಲೇಖಕರು ತಮ್ಮ 'ಸ್ವಾತಂತ್ರ್ಯದ ಓಟ' ಎಂಬ ಕಾದಂಬರಿಯಲ್ಲಿ ಮುಖ್ಯ ಪಾತ್ರಗಳಾಗಿ ಅವಳಡಿಸಿಕೊಂಡಿರುವುದ ಸ್ಪಷ್ಟಸಿಕೊಂಡಿದೆ.

'ಕೈಜಮ್ಮ' ಕಾದಂಬರಿಯಲ್ಲಿ ಬರುವಂತಹ 'ಕೈಜಮ್ಮ'ನ ಪಾತ್ರ ವಿಶಿಷ್ಟವಾಗಿರುತ್ತದೆ. ಆಕೆ ಗುಣದಲ್ಲಿ ನಿಷ್ಠೆ, ಪ್ರೀತಿ, ವಾತ್ಸಲ್ಯ ತುಂಬಿರುವ ಒಬ್ಬ ಸಾಧಾರಣ ಮಹಿಳೆಯಾಗಿರುತ್ತಾಳೆ. ಕೈಜಮ್ಮ ಬದುಕಿನಲ್ಲಿ ನಾನಾ ತರವಾದ ನೋವುಗಳನ್ನು ಅನುಭವಿಸುವಂತೆ ಇರುವಳು. ಈಕೆಗೆ ಸಂಸಾರದ ಬಗೆಗೆ ಹಲವು ಚಿಂತನೆ, ಬದುಕಿನಲ್ಲಿ ನೋವುಂಡ ಕ್ಷಣಗಳನ್ನು ಕೈಜಮ್ಮನ ಪಾತ್ರ

ವಿಸ್ತರಿಸಿಕೊಳ್ಳುತ್ತದೆ. ಕೈಜಮ್ಮನ ಬದುಕಿನಲ್ಲಿ ಪ್ರೀತಿ, ವಾತ್ಸಲ್ಯಕ್ಕಿಂತ ಬದುಕಿನಲ್ಲಿ ಕಿತ್ತು ತಿನ್ನುವ ಸಂಕಟಗಳನ್ನು ಹೆಚ್ಚಾಗಿ ಕಾದಂಬರಿಯುದ್ದಕ್ಕೂ ಎದ್ದು ಕಾಣುತ್ತವೆ. ಮುತ್ತುಪ್ಪಾಡಿಯ ಎಂಬ ಗ್ರಾಮದಲ್ಲಿ ಕಾದಂಬರಿ ಹೆಣಿಯಲ್ಪಡುವುದರಿಂದ ಕಾದಂಬರಿ ಆ ಸ್ಥಳವನ್ನೇ ಅವಲಂಬಿಸಿರುವುದನ್ನು ಕಾಣುತ್ತೇವೆ. ಮೂಕಜ್ಜ ಎಂಬಾತನು ಈಕೆಯ ಗಂಡನಾಗಿದ್ದು, ಈಕೆಗೆ ಯಾವುದೇ ರೀತಿಯಲ್ಲಿ ಒಲವು ತೋರದಿರುವುದರಿಂದ ಕುರುಹುಗಳು ವಿಸ್ತರಿಸಿಕೊಳ್ಳುತ್ತವೆ.

ಕೈಜಮ್ಮನ ಬದುಕಿನಲ್ಲಿ ನಿಜವಾದ ಬವಣೆಗಳೆಂದರೆ ಇದೊಂದು ಘಟನಾವಳಿಯನ್ನು ಪ್ರಸ್ತಾಪಿಸಲಾಗುತ್ತದೆ. "ಹಿತ್ತಲ ಬಾಗಿಲಲ್ಲಿ ಮನೆಗೆಲಸದ ಹೆಂಗಸಿಗೆ ಬುತ್ತಿ ಕಟ್ಟಿಕೊಟ್ಟು ಬೀಳ್ಕೊಡುತ್ತಿದ್ದ ಕೈಜಮ್ಮನವರಿಗೆ ಗಂಡನ ಅಸಹಜ ಸ್ವರ ಕೇಳಿಸಿತ್ತು".[೨೭] ಕುತೂಹಲ ತಡೆದುಕೊಳ್ಳಲಾಗದೆ ಹಿತ್ತಲ ಬಾಗಿಲು ಮುಚ್ಚಿ ಅಡುಗೆ ಕೋಣೆ ಹಾದು. ಮಲಗುವ ಮನೆಯೊಳಕ್ಕೆ ಬಂದು ಇಣುಕು ಹಾಕಿ ಬಳಿಕ ಹಜಾರದತ್ತ ಬಂದ ಕೈಜಮ್ಮನವರು ಒಳ ಬಾಗಿಲ ಪರದೆಯ ಸಂದಿಯಿಂದ ಹಜಾರದೊಳಕ್ಕೆ ಕತ್ತು ತೂರಿ "ಯಾರೂ" ಎಂದು ಕೇಳಿದರು. ಈ ಸಂದರ್ಭ ಆಕೆಯ ಒಲವು ಎಷ್ಟರ ಮಟ್ಟಿಗೆ ಆಕೆಗೆ ಭಯದ ವಾತಾವರಣ, ಹಾಗೆ ಮಹಿಳೆಯ ಬದುಕಿನ ಚಿತ್ರಣವನ್ನೇ ಲೇಖಕರು ಸಮಾಜಕ್ಕೆ ಮುಖಾಮುಖಿ-ಯಾಗಿಸಿದ್ದಾರೆ. ಮೂಸಜ್ಜನ ಬದುಕಿಗೆ ಒಡಲಲ್ಲಿ ಕೈಜಮ್ಮನ ಪಾತ್ರ ವಿಶೇಷ, ದೀರ್ಘವಾದದ್ದು, ಕೈಜಮ್ಮ ಎರಡನೇ ಹೆಂಡತಿಯಾಗಿ ಆತನೊಂದಿಗೆ ತನ್ನ ಬದುಕಿನ ಬವಣೆಗಳನ್ನು ಅಭಿವ್ಯಕ್ತಿಸುತ್ತಾಳೆ. ಆಕೆಗೆ ಮಕ್ಕಳಿಲ್ಲದ ಸಂದರ್ಭದಲ್ಲಿ ವೈದ್ಯರ ಬಳಿ ಯಾವುದೇ ಉತ್ತಮವಾದ ಚಿಕಿತ್ಸೆಯಿಲ್ಲದ ಕಾರಣದಿಂದ ಮಕ್ಕಳ ಭಾಗ್ಯದ ಕೊರತೆ ಕಾಣಲಾರಂಭಿಸಿ ಮೂಸಜ್ಜ ಹಿರಿಯ ಹೆಂಡತಿಯ ಮಗನನ್ನು ಕರೆದುಕೊಳ್ಳುವ ಪ್ರಸಂಗ ಕೈಜಮ್ಮನ ಅಂತಃಕರಣವನ್ನು ಕಲಕುವಂತದ್ದು.

ವಯಸ್ಸಾದ ಮೂಸಜ್ಜನ ಸ್ವರ ಇಂದೂ ಸಣ್ಣಸ್ವರವಾಗಿ ಅಭಿವ್ಯಕ್ತಿಸಲಾಗಿದೆ. ಆದರೆ ಆತ ಯುವಕನಾಗಿದ್ದ ಕಾಲಗಳಲ್ಲಿ ಗಟ್ಟಿಯಾಗಿ, ಜನ ಪ್ರತಿಕ್ರಿಯಿಸುವಾಗೆ ಸ್ವರ ಕಾಣುತ್ತಿತ್ತು. ಆ ರಾಗವನ್ನು ಕಂಡ ಕೈಜಮ್ಮ ಗಂಡನ ಅಸಹಾಯಕತೆಯನ್ನು ನೋಡಿ ಅಂದಿನ ಒಲವನ್ನು ನೆನಪಿಸಿಕೊಳ್ಳುವ ಸಂದರ್ಭ ವಿಶೇಷವಾಗಿ ಕಾದಂಬರಿಯ ಪ್ರಾರಂಭದಲ್ಲಿ ಗೋಚರವಾಗುತ್ತದೆ. ಕೈಜಮ್ಮ ಗುಣದಲ್ಲಿ ಗಂಡನಿಗೆ ಕನ್ನಡಿಯಿಡಿದ್ದಂತೆ ಕಾಣುತ್ತಿದ್ದಳು. ಮೂಸಜ್ಜನವರಿಗಿಂತ ಏನಿಲ್ಲವೆಂದರೂ ಒಂದು ಕೈಜಮ್ಮಳಿಗೆ ಪ್ರೀತಿ ಕುಂಠಿತವಾಗಲೇ ಇಲ್ಲ. ಆದರೆ ಸಂದರ್ಭ ಎಂದರೆ ಹಿತ್ತಲ ಬಾಗಿಲಲ್ಲಿ ಮನೆಗೆಲಸದ ಹೆಂಗಸಿಗೆ ಬುತ್ತಿ ಕಟ್ಟಿಕೊಟ್ಟು ಬೀಳ್ಕೊಡುತ್ತಿದ್ದ, ಅ ವಯಸ್ಸಾದ ಗಂಡನ ಸ್ವರ ಕೇಳಿ ಎಲ್ಲೋ ಮನಸ್ಸು ವಾಲುವ ಸಂದರ್ಭ ಮೊದಮೊದಲು ಸೊಗಸಾಗಿ ಚಿತ್ರಿಸುತ್ತಾ ಇರುತ್ತದೆ. ಕೈಜಮ್ಮ ಅಷ್ಟರಲ್ಲಿ ಒಳಬಾಗಿಲು ತೆರೆದು, ಸರಿಸಿ ಹೊರಗೆ

ಮುಖವಿಟ್ಟು ಆಕೆ "ರೊಟ್ಟಿ ಅಲ್ಲಿಗೆ ತರಲ?" ಎಂದು ಕೇಳುತ್ತಾಳೆ. ಆಗ ಮೂಸಜ್ಜ ತನ್ನ ಮುಜುಗರ ಬಿಟ್ಟು ಎಲ್ಲೋ ಒಂದು ಕಡೆ. ಆಕೆಗೆ ಅಲ್ಪ ಸ್ವಲ್ಪ ಒಲವು ತೋರುವ ದನಿಯಲ್ಲಿ "ಸ್ವಲ್ಪ ಜಾಸ್ತಿಯೇ ಇರಲ್ಲಿ" ಎನ್ನುತ್ತಾ ಮೂಸಜ್ಜ ಕೈಜಮ್ಮಳಿಗೆ ಪ್ರತಿಕ್ರಿಯಿಸುತ್ತಾನೆ. ಪಿಂಗಾಣಿಯ ಬಟ್ಟಲೊಂದರಲ್ಲಿ ಅಕ್ಕಿ ರೊಟ್ಟಿಗಳನ್ನು ಹೊರಗೆ ತಂದು ಮೂಲೆಯಲ್ಲಿದ್ದ ಮೇಜಿನ ಮೇಲಿರಿಸಿದ ಕೈಜಮ್ಮಳು ಸ್ವಲ್ಪ ಹೊತ್ತಿನಲ್ಲಿ ಮತ್ತೆರಡು ಪಾತ್ರೆಗಳಲ್ಲಿ ಹಸಿಮೀನಿನ ಸಾರು ತುಂಬಿಸಿಕೊಂಡು ಬಂದರು. ಮೂಲೆಯಲ್ಲಿದ್ದ ಇನ್ನೊಂದು ಲಾಂದ್ರವನ್ನು ಕಡ್ಡಿಗೀರಿ ಬೆಳಗಿಸಿದಳು. ತದನಂತರ ಗಂಡನತ್ತ ಕುತೂಹಲದ ನೋಟವನ್ನು ಬೀರುತ್ತಾ ತನ್ನ ಕೆಲಸ ಮುಗಿಸಿದ್ದವಳಂತೆ ಒಳಗೆ ಹೋದರು. ಕೈಜಮ್ಮಳಿಗೆ ತನ್ನ ಗಂಡ ಮೂಸಜ್ಜನ ಒಲವು ಸಿಗದ ಕಾರಣದಿಂದ ತನ್ನ ದುಃಖ ದುಮ್ಮಾನಗಳನ್ನು ಹೊರಹಾಕದೆ ಇರುವ ಸಂದರ್ಭಗಳು ಎದುರಾಗುತ್ತಲೇ ಇತ್ತು. ಆದರೂ ಒಮ್ಮೆ ಆಕೆಯ ನೋವುಗಳನ್ನು ಹೊರಹಾಕುತ್ತಾಳೆ. ಆದರೂ ಮರುಗದ ಆತನು ಇಂದು ವಯಸ್ಸಾಗಿದೆ, ಆ ಮುಪ್ಪಿನ ಸಂದರ್ಭದಲ್ಲಿ ಕೈಜಮ್ಮನ ಸಹಕಾರ ತೀರ ಅಗತ್ಯವಾಗಿ ಬೇಕಿದೆ. ಆ ನಿಟ್ಟಿನಲ್ಲಿ ಕೈಜಮ್ಮಳಿಗೆ ಸಿಗದ ಒಲವು ಮುಪ್ಪಿನಲ್ಲಿ ಸಿಗುವ ಚೈತನ್ಯ ಒಡಮೂಡುವುದು ಗೋಚರವಾಗುತ್ತದೆ. ಕೈಜಮ್ಮ ಒಳಕ್ಕೆ ಹೋಗುತ್ತಿದ್ದಂತೆ, ತಟ್ಟೆಯಲ್ಲಿದ್ದ ಕೊನೆಯ ರೊಟ್ಟಿಯನ್ನು ಬಾಯಿಗೆ ಹಾಕಿಕೊಂಡು, ತಂಬಿಗೆಯನ್ನೆತ್ತಿ ನೀರು ಕುಡಿದು, ಬಳಿಕ ಆ ತಂಬಿಗೆಯನ್ನು ಎತ್ತಿಕೊಂಡು ಹೊರಗೆ ಹೋಗುವ ದೃಶ್ಯ ವಿಶೇಷವಾಗಿದೆ. ಅದಾಗದೇ ಊಟ ಮುಗಿಸಿದ ಚಾಂದ್ ಅಲೀಯು ಹಿಂಬಾಲಿಸುತ್ತಾನೆ. ಆಕೆಯನ್ನು ಇಬ್ಬರು ಬಾಯಿ ಮುಕ್ಕಳಿಸಿಕೊಂಡು ಹಜಾರದೊಳಕ್ಕೆ ಕಾಲಿಡುವಷ್ಟರಲ್ಲಿ ಮೂಸಜ್ಜ ಎದ್ದು ನಿಲ್ಲುತ್ತಾನೆ. ಈ ಸಂದರ್ಭ ಚಾಂದ್ ಅಲೀಯ ಪಾತ್ರಕ್ಕೂ, ಕೈಜಮ್ಮನ ಪಾತ್ರಕ್ಕೂ ಕಳೆದುಕೊಂಡಿರುವಂತಹ ತನ್ವೀರ್ ಮತ್ತು ಮೊಹಿಂದರ್ ಕೌರ್ ಈಕೆಯೊಂದಿಗೆ ಇರುವಂತಹ ಅಂತಃಕರಣವನ್ನು ಕೈಜಮ್ಮಳ ಪಾತ್ರದೊಂದಿಗೆ ಬೆಳಗುವ ಸ್ವರೂಪ, ಸಂದರ್ಭ ಸ್ಪಷ್ಟಗೊಳಿಸುತ್ತದೆ. ಎಷ್ಟೋ ಹೊತ್ತಿನ ನಂತರ ಕೈಜಮ್ಮ ತನ್ನ ಗಂಡ ಮೂಸಜ್ಜನನ್ನು "ಏಳಿ, ರೊಟ್ಟಿ ಕೊಡುತ್ತೇನೆ".[೨೮] ಎಂದು ಹೇಳುತ್ತಾಳೆ. ಆಗಾಗಲೇ ನಿರುತ್ಸಾಹ ಸ್ವರದಲ್ಲಿ ಬಳಲುತ್ತಿರುವ ಮೂಸಜ್ಜ "ಬೇಡ ನನಗೆ ಹಸಿವಿಲ್ಲ, ನೀನು ತಿಂದು ಬಿಡು".[೨೯] ಮೆಲು ಸ್ವರದಲ್ಲಿ ಎಂದು ಆತ ಮೆಲು ಸ್ವರದಲ್ಲಿ ಪ್ರತಿಕ್ರಿಯಿಸುತ್ತಾನೆ. ರಾತ್ರಿ ಊಟವನ್ನು ಬಿಡುವುದು ಇದೇನೂ ಮೊದಲ ಸಲವಲ್ಲ ಆದ್ದರಿಂದ ಕೈಜಮ್ಮಳು ಹೆಚ್ಚು ಚಿಂತಿಸಲಿಲ್ಲ. ತಾವು ಊಟ ಮುಗಿಸಿ ಪಾತ್ರೆಗಳನ್ನು ತೊಳೆದಿಟ್ಟು ಬರುವಷ್ಟರಲ್ಲಿ ಮೂಸಜ್ಜ, ಮುಸುಕೆಳೆದುಕೊಂಡು ಮಲಗಿರುವುದರಿಂದ ನಿದ್ರೆ ಬಂತ ಎಂದು ಪ್ರಶ್ನಿಸುತ್ತಲೇ ಮಂಚದ ಕೆಳಗಿರಿಸಿದ ಹಾಸಿಗೆಯನ್ನು ಹೊರಗೆಳೆದು ಬಿಡಿಸಿದ ಕೈಜಮ್ಮಳು ಗೋಡೆಯಲ್ಲಿ ತೂಗುತ್ತಿದ್ದ ಲಾಂದ್ರದ ಬೆಳಕನ್ನು ಕುಗ್ಗಿಸಿ, ಹಾಸಿಗೆಯಲ್ಲಿ ಮಲಗಿ ಆಯಾಸದಿಂದ ಆಕಳಿಸುತ್ತಾಳೆ. "ಒಳ ಬಾಗಿಲಿಗೆ ಚಿಲಕ ಹಾಕಿದೆಯಾ?[೩೦] ಕತ್ತಲನ್ನು

ಸೀಳಿಕೊಂಡು ಬಂದ ಪ್ರಶ್ನೆಯನ್ನು ನಿರೀಕ್ಷಿಸಿಯೇ ಇದ್ದವರಂತೆ ಕೈಜಮ್ಮನವರು ತಕ್ಷಣ ಹುಂ, ಯಾಕೆ? ಎಂದು ಮರು ಪ್ರಶ್ನೆ ಹಾಕುತ್ತಾಳೆ. ಇದೊಂದು ದೀರ್ಘಸಮಯದ ಪರಸ್ಪರ ಮಾತುಕತೆಗಳ ಪ್ರಸಂಗವಾಗಿದೆ? ಅದು ನನ್ನ ಬಡಿಗೆ ಹಜಾರದಲ್ಲೇ ಇತ್ತಲ್ಲಾ? ಒಳಗೆ ತಂದೆಯಾ? ಎಂದು ಮೂಸಜ್ಜನವರು ಮುಸುಕಿನೊಳಗಿಂದಲೇ ಪ್ರಶ್ನಿಸಿದನು.

"ಇಲ್ವಲ್ಲಾ..., ಯಾಕೇ?

ಹೀಗೆ, ಹುಂ, ನೀನು ನಿದ್ರೆ ಮಾಡು

ಒಂದೆರಡು ನಿಮಿಷಗಳ ಬಳಿಕ ಮೂಸಜ್ಜ ಪುನಃ ಪ್ರಶ್ನಿಸಿದರು. ನೀನು ಚಾಪೆಗಳನ್ನು ಕೊಡಲು ಹೋದಾಗ ನಿನ್ನ ಹತ್ರ ಏನಾದ್ರೂ ಮಾತಾಡಿದ್ನಾ?

ಏನಾಗಿದೆ ನಿಮ್ಗೆ?

ಏನಾಗಿದೆ?! ಏನೂ ಇಲ್ಲ, ಸುಮ್ಮನೆ ಕೇಳಿದೆ, ಅಷ್ಟೇ, ನಿನ್ನ ಜೊತೆಗೆ ಮಾತೆ ಆಡ್ಬಾರ್ದಾ?

ಕೈಜಮ್ಮ ಮೌನವಾದಳು.

ಕಪಾಟಿಗೆ ಬೀಗ ಹಾಕಿದಿಯಲ್ವಾ?

ಹೂಂ

ಬೀಗದ ಕೈ ಎಲ್ಲುಂಟು?

ಇಲ್ಲೇ ಗೋಡೆಯ ಆಣೆಯಲ್ಲುಂಟು, ಯಾಕೆ?

ಹೀಗೇ ಕೇಳಿದೆ.

ಕೈಜಮ್ಮ ಸುಮ್ಮನಾದಳು.

ನಿನ್ನ ಬಂಗಾರವೆಲ್ಲ ಕಪಾಟಿನಲ್ಲೇ ಉಂಟಲ್ಲ?

ಹೂಂ

ಈ ಮನೆಯಲಿ ನಾವಿಬ್ಬರೇ ಅಲ್ವಾ?

ಕೈಜಮ್ಮ ಉತ್ತರಿಸಲಿಲ್ಲ.

ನಿದ್ರೆ ಬಂತಾ?

ನೀವು ನಿದ್ರೆ ಮಾಡಲು ಬಿಟ್ರೆ ಅಲ್ವಾ?

ನಿನಗೆ ಭಯವಾಗ್ತಾ ಉಂಟಾ?

ಯಾಕೇ? ನನಗೇಕೆ ಭಯ?

ಮತ್ತೆ ಐದು ನಿಮಿಷ ಸತ್ತಿತ್ತು.

ನಿದ್ರೆ ಬಂತಾ? ಈ ಬಾರಿ ಪ್ರಶ್ನಿಸಿದ್ದವಳು ಕೈಜಮ್ಮ

ಯಾಕೆ ಹೆದರಿಕೆ ಅಗ್ತಾ ಉಂಟಾ?

ಹೂಂ

ಏನಾಗಿಬಿಟ್ಟಿದೆ ಅಂತ ಈಗ ಹೆದರುವುದು?"[೩೧]

ಮತ್ತೆ ನೀವು ಹುಚ್ಚು ಹುಚ್ಚಾಗಿ ಮಾತನಾಡಿದ್ರೆ ನನ್ಗೆ ಹೆದ್ರಿಕೆಯಾಗುವುದಿಲ್ವಾ? ಕೈಜಮ್ಮಳು, ದುಃಖಿತಳಾಗುತ್ತಳೆ. ಹೆಂಡತಿಯ ಎಲ್ಲಾ ಮಾತುಗಳನ್ನು ಅರಗಿಸಿಕೊಳ್ಳುವವರಂತೆ ಸ್ವಲ್ಪ ಹೊತ್ತು ಯೋಚಿಸಿ ನಂತರ, "ನಾನು ಬದ್ರುದ್ದೀನನನ್ನು ಮನೆಯಿಂದ ಓಡಿಸಬಾರದಿತ್ತು ಅಲ್ವಾ? ಕೈಜಮ್ಮ ದಡಕ್ಕನೆ ಎದ್ದು ಕುಳಿತುಕೊಳ್ಳುತ್ತಾಳೆ. ಹಾಗಾದರೆ ಹೊರಗೆ ಬಂದಿರುವ ಇಬ್ರಲ್ಲಿ ಒಬ್ಬ, ನಮ್ಮದೇ ಮಗ ಬದ್ರುದ್ದೀನನೆ? ಯಾ ಅಲ್ಲಾಹುವೇ? ಇದೆಂತಹ ಆಟ ಎಂದು ದೇವರಲ್ಲಿ ಪ್ರಾರ್ಥಿಸಿಕೊಳ್ಳುವ ಮುಖಾಂತರ ತನ್ನ ವೇದನೆಯನ್ನು ಬಿಚ್ಚಿಡುತ್ತಾನೆ."[೩೨] ಇಂತಹ ಪ್ರಸಂಗದಲ್ಲಿ ಹಜಾರದಲ್ಲಿ ಮಲಗಿದ್ದ ಚಾಂದ್‌ಅಲಿಗೂ ಮತ್ತು ಮೂಸಜ್ಜನಿಗೂ ಇವರೊಡನೆ ಗೊಂದಲಗೀಡಾದ ಕೈಜಮ್ಮಳ ಪರಸ್ಪರ ಮಾತುಕತೆಗಳಲ್ಲಿ ಹಲವು ಮರಾವೆಗಳು ಜೊತೆಗೆ ಆಶ್ರಯ ಕೊಟ್ಟಿರುವ ಮೂಸಜ್ಜ ಮತ್ತು ಕೈಜಮ್ಮಳ ಅಂತಃಕರಣ ಮೆಚ್ಚುವಂತಹದ್ದು.

ಕೈಜಮ್ಮಳ ಬದುಕಿನ ಕೊನೆಯ ಘಟ್ಟವೆಂದರೆ ಮೂಸಜ್ಜನ ವರ್ತನೆಯಲ್ಲಿ ಹಲವು ಭಿನ್ನಾಭಿಪ್ರಾಯಗಳನ್ನು ಈಕೆ ಎದುರಿಸುವ ಹಾಗೆ ಸಮಧಾನಿಸಿಕೊಳ್ಳುವ ಭವಣೆಗಳನ್ನು ಸುಮತಿ ಎಂಬ, ಮೂಸಜ್ಜನ ಮನೆಯ ಕೆಲಸದವಳಿಗೆ ಮಾತ್ರ ತಿಳಿದಿರುತ್ತದೆ. ಆತನ ಹಿರಿಯ ಹೆಂಡತಿಯ ಮಗ ಬೊಂಬಾಯಿನಲ್ಲಿದ್ದ ಮಗ ಮೂಸಜ್ಜನ ಬಣ್ಣದಾಗೇ ಇರುವಂತೆ ಕಾಣಲಾರದು. ಸ್ವಲ್ಪ ಮಟ್ಟಿಗೆ ಕೈಜಮ್ಮನ ಮೈ ಬಣ್ಣದ ಹೋಲಿಕೆಯಾದರು, ಆದರೆ ಕೈಜಮ್ಮನ ಮಗನಲ್ಲ. ಈತ ಹಿರಿಹೆಂಡತಿಯ ಮಗ, ಆಕೆ ಯಾವ ಬಣ್ಣದಲ್ಲಿರುವಳು ಎಂದು ತಿಳಿಯದು, ಈತ ಅಪ್ಪಟ ಬಿಳಿ ಬಣ್ಣ ಹೊಂದಿದ್ದಾನೆ ಎಂದು ಸುಮತಿ ಮತ್ತು ಆ ಮನೆಯಲ್ಲಿರುವ ಎಲ್ಲರಿಗೂ ಅನುಮಾನಕ್ಕಿಡಾದ ವಿಷಯವಾಗಿದೆ. ಈ ಗೊಂದಲ ನಡುವೆ ಕೈಜಮ್ಮನ ಸಂಸ್ಕೃತಿ, ಆಚಾರ, ವಿಚಾರ, ನಡವಳಿಕೆ, ಪ್ರೀತಿ, ವಾತ್ಸಲ್ಯ, ಅಗಾಧವಾದ ಉತ್ತಮ ಉಳುವಿಕೆಯ ಚಿತ್ರಣವಾಗಿದೆ. ಕೈಜಮ್ಮ ಪ್ರೀತಿಯಿಂದ ಕಟ್ಟಿಕೊಡುತ್ತಿದ್ದ ಬುತ್ತಿ ಅವಳ ಮನೆಯ ಮಂದಿಗೆಲ್ಲ, ಅವಳಿಗೆ ಇಬ್ಬರು ಮಕ್ಕಳು ಸರಿ ಸುಮಾರು ಏಳು ವರ್ಷದ ಮಗಳು ಜಲಜ ಮತ್ತು ಆರು ವರ್ಷದ ಮಗ ಸತೀಶ. ಇವರು ಕೈಜಮ್ಮಳ ಸಹಾಯಕ್ಕೆ ಸುಮತಿ, ಜಲಜ, ಸತೀಶ

ಸಹಾಯಕರಾಗಿ ಮುಂಬರುತ್ತಾರೆ. ಪಂಚಲಿಂಗೇಶ್ವರ ದೇವಸ್ಥಾನದ ಹಬ್ಬ, ಹರಿದಿನ, ಜಾತ್ರೆಗಳನ್ನು ಐದು ವರ್ಷಕ್ಕೊಮ್ಮೆ ಪೂಜೆ, ಪುನಸ್ಕಾರಗಳು ನಡೆಯುತ್ತದೆ, ಆ ಸಂದರ್ಭದಲ್ಲಿ ಸುಮತಿ ಕೆಲಸಕ್ಕೆ ಬರದೇ ಇದ್ದಾರೆ. ಕೈಜಮ್ಮನ ವರ್ತನೆ ಆಕಾಶವೇ ತಲೆಯ ಮೇಲೆ ಬಿದ್ದಂತಾಗಿರುತ್ತದೆ. ಮೂಸಜ್ಜನವರು ಮಾತ್ರ ಇಷ್ಟು ವರ್ಷಗಳ ಅವಧಿಯಲ್ಲಿ ಒಂದು ದಿನವೂ ಸುಮತಿಯ ಬಳಿ ಸುಖ, ದುಃಖ ವಿಚಾರಿಸಿದವರಲ್ಲ. ಸುಮತಿಯ ವ್ಯವಹಾರ ಅದು ಏನಿದ್ದರೂ ಕೈಜಮ್ಮನವರ ವರ್ತುಲದೊಳಗೇ ಮುಗಿದು ಹೋಗಬೇಕು. ವಾರದಲ್ಲೊಮ್ಮೆ ಪ್ರತಿ ಶುಕ್ರವಾರದ ಸಂಜೆ ತನ್ನ ಕೂಲಿಯ ಹಣ ಎರಡು ರೂಪಾಯಿಗಳನ್ನು ಸುಮತಿ ಸ್ವೀಕರಿಸುತ್ತಿದ್ದದ್ದು ಕೈಜಮ್ಮಳಿಂದಲೇ. ಇಂತಹ ಸಂದರ್ಭಗಳಲ್ಲಿ ಸುಮತಿಯ ಬದುಕಿನ ಚಿತ್ರಣವು ಸವಿಸ್ತಾರವಾಗಿ ತೆರೆದುಕೊಳ್ಳುತ್ತದೆ.

ನಡುವೆ ಸುಮತಿ, ಚಾಂದ್ ಅಲೀ, ಅಮೀರ್ ಬಾಯಿ ನಡುವಿನ ವರ್ಣನೆ, ಚಿಂತನೆ, ಬದುಕಿನ ಕ್ರಮಗಳು, ಆ ಸಂಕೋಲೆಯ ನೆರಳಿನಂತೆ ಸ್ಥಿತಿಗಳು ಗಡಿಬಿಡಿಯಾದ ಅವರದ್ದೇ ಆದ ಸಂಸ್ಕೃತಿಯ ಪಾಲನೆಗಳು ಇವೆಲ್ಲವು ಕೂಡ ಶಂಷಾದ್ ಮಾಯಿನೊಡನೆ ಅರುಳುತ್ತಾ, ಬಾಡುತ್ತಾ, ವಿಭಿನ್ನ ನೆಲೆಗಳನ್ನು ಗೋಚರಿಸುವ ನಿಟ್ಟಿನಲ್ಲಿ ಮುತ್ತುಪ್ಪಾಡಿಯ ಗ್ರಾಮದಲ್ಲಿರುವ ಮೂಸಜ್ಜನ ಚಾವಡಿಯೇ ಆಶ್ರಯವಾಗಿ ಉಳಿಯುವಿಕೆಗೆ ಕಾರಣವಾಗುತ್ತದೆ. ಈ ನಡುವೆ ರೋಷವಾಗಿ ಚಿಕ್ಕಪ್ಪನ ಪಾತ್ರ ಕೇವಲ ಕ್ಷಣಿಕವಾದುದ್ದು. ಆತ ಮೊಹಿಂದರ್ ಭಾಬಿ ಮತ್ತು ತನ್ವೀರ್‌ಳ ಬಗೆಗೆ ಪ್ರಸ್ತಾಪ ಮಾಡುತ್ತಾನೆ. ಆದರೆ ಸ್ಥಳದಲ್ಲಿದ್ದ ಕೈಜಮ್ಮಳಿಗೆ ಅರ್ಥವಾಗದೆ ಬೊಂಬಾಯಿಯಲ್ಲಿದ್ದ ಹುಡುಗ, ಚಾಂದ್ ಅಲೀ, ಅಮೀರ್ ಭಾಬಿ, ರೋಷನ್, ಶಂಷಾದ್ ಬೇಗಮ್, ಇವರ ಪೂರ್ವ ವಿಚಾರವನ್ನು ತಿಳಿಯದೇ ಆಕೆಗೆ ತರ್ಕಕ್ಕೀಡಾಗುತ್ತದೆ. ಇಪ್ಪತ್ತು ವರ್ಷಗಳಷ್ಟು ಹಿಂದೆ ಬೊಂಬಾಯಿಯಲ್ಲಿ ಫಕೀರರುಗಳ ಜೊತೆಯಲ್ಲಿ ಬದ್ರುದ್ದೀನ್ ತಿರುಗಾಡಲಾರಂಭಿಸಿದ ಬಳಿಕ ಮೂಸಜ್ಜನವರ ನಡವಳಿಕೆಯಲ್ಲಿ ವಿಪರೀತ ಬದಲಾವಣೆ-ಯಾಗಿದೆ ಎಂಬುದನ್ನು ಮೊದಲು ಗುರುತಿಸಿದವ ಕೈಜಮ್ಮಳು ಎರಡನೆಯವಳೂ ಅವಳೇ ಬೇರೆ ಯಾರಿದ್ದರೂ ಟೈಲರ್ ಮೂಸಜ್ಜರನ್ನು ಮೊದಲ ಬಾರಿಗೆ ಎದುರುಗೊಂಡಿದ್ದಾಗ ಖೈರುನ್ನೀಸಾಳಿಗೆ ಅದವರ ತಾರುಣ್ಯದ ಹೆಸರು ತುಂಬು ಯೌವನ, ಟೈಲರ್ ಮೂಸಾರಿಗೆ ಆಗ ನಲವತ್ತು. ಮೂಸಜ್ಜರನ್ನು ಮೊತ್ತ ಮೊದಲು ಕಂಡ ರಾತ್ರಿಯೇ ಆಸೆಯಾಗಿತ್ತು, ಬದುಕಿದರೆ ಇಂಥವರ ಜೊತೆಗೆ ಬದುಕಬೇಕು ಎಂಬ ತರಾತುರಿಯ ಚಿಂತನೆಗಳು ಒಡಮೂಡುತ್ತವೆ. ಪಾದರಸವನ್ನೇನೂ ಕಂಡವಳಲ್ಲ ಖೈರುನ್ನೀಸಾ. ಚಿಕ್ಕವಳಿದ್ದಾಗ ಅವಳನ್ನು ಯಾರಿಗಾದರೂ ಪರಿಚಯಿಸುವಾಗ ಅವಳಮ್ಮ ಹೇಳುತ್ತಿದ್ದ ಮಾತುಗಳಲ್ಲಿ ಪಾದರಸ ಬೆರೆತಿರುತ್ತಿತ್ತು. 'ಪಾದರಸದಂತೆ ಚುರುಕು ನನ್ನ ಮಗಳು' ಅಮ್ಮ ಹೆಮ್ಮೆಯಿಂದಲೇ

ಸಿರಿಗನ್ನಡ ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಹೇಳುತ್ತಿದ್ದಳು. ಯಾಕೋ ಆ ಪಾದರಸದ ಗುಣವೇ ಖೈರುನ್ನೀಸಾಳನ್ನು ಬೊಂಬಾಯಿಗೆ ಸೇರಿಸಿತು. ಅವಳೇ ಕಂಡುಕೊಂಡಂತೆ ಮೂಸಜ್ಜ ಕೂಡಾ ಪಾದರಸವನ್ನು ಮೀರಿಸುವ ಚುರುಕು ಜೀವ. ಮೊದಲ ದಿನವೇ ಅವರ ಮಾತಿನ ಶಕ್ತಿಗೆ, ಪ್ರೀತಿಯ ಮೋಡಿಗೆ ಖೈರುನ್ನೀಸಾ ಸಂಪೂರ್ಣ ನೀರಾಗಿದ್ದಳು. ನಿಖಾ ಆಗುವ ಮೊದಲೇ ಮೂಸಜ್ಜನಿಗೆ ಹೆಂಡತಿಯಾಗಿರುತ್ತಾಳೆ.

131015

ಇಂತಹ ನಡುವೆ ಕೈಜಮ್ಮ, ಖೈರುನ್ನೀಸಾ, ಪಾತ್ರವು ಮೂಸಜ್ಜನ ಬದುಕಿನಲ್ಲಿ ಸ್ವಾತಂತ್ರ ಕಳೆದು ಕೊಂಡಿರುವ ಕತ್ತಲೆಯ ಬದುಕಿನ ಚಿತ್ರಣವನ್ನು ಬೊಳುವಾರರು ಕಾದಂಬರಿಯಲ್ಲಿ ಮತ್ತೇರಡು ಪಾತ್ರಗಳ ಮೂಲಕ ಮಹಿಳಾ ಪ್ರಜ್ಞೆಗೆ ಸೇರಿಸಿರುವ ಜೊತೆಗೆ ಸುಮತಿಯ ಪಾತ್ರವನ್ನು, ಆಕೆಯ ಬಡತನ ನಿಗಿಸಿಕೊಳ್ಳುವಿಕೆಯನ್ನು, ಹಾಗೇ ಆಕೆಯ ಜೀವನ ಹೀರುವಿಕೆಗಾಗಿ ಪರಪುರುಷರಿಗೆ ದೇಹ ಹಂಚುವಿಕೆಯನ್ನು ಕಾವೇರಿ ಎಂಬ ಪಾತ್ರವು ಸವಿಸ್ತಾರವಾಗಿ ಹೇಳುವ ಘಟನಾವಳಿಯನ್ನು ಸ್ಪಷ್ಟಪಡಿಸುವ ಲೇಖಕರ ಮಹಿಳಾ ಅಂತಃಕರಣ ಪ್ರಜ್ಞೆಯನ್ನು ಸವಿಸ್ತಾರವಾಗಿ ಅಭಿವ್ಯಕ್ತಿಸುತ್ತಾರೆ.

'ಸುಮತಿಯಕ್ಕ'ನ ಪಾತ್ರ ಕಾದಂಬರಿಯಲ್ಲಿ ಅಪರೂಪದ ವಿಸ್ಮಯತೆಯನ್ನು ತೆರೆದುಕೊಳ್ಳುತ್ತದೆ. ಅವಳು ಸಾಧಾರಣ ಮನೆಗೆಲಸದ ಹೆಣ್ಣಾದರೂ ಅಸಾಧಾರಣವಾದ ಹೆಣ್ಣತನವನ್ನು, ತಾಯಿತನದ ಮೌಲ್ಯತೆಯುಳ್ಳ ಗುಣಗಳನ್ನು ಒಳಗೊಂಡಿರುವುದನ್ನು ಬೊಳುವಾರರು ಚಿತ್ರಿಸುತ್ತಾರೆ. ಈ ನಿಷ್ಠೆಯುಳ್ಳ ಗುಣಗಳು ಯಾರಿಂದಲೋ ಕಲಿತಿದ್ದಲ್ಲ, ಶಾಲಾ-ಕಾಲೇಜುಗಳ ಅಧ್ಯಾಯನ ಸಂಸ್ಕಾರಗಳಿಂದ ಪಡೆದಿದ್ದು ಅಲ್ಲ, ಮನುಷ್ಯ ಸಂಬಂಧಗಳನ್ನು ಕೇವಲ ಮನುಷ್ಯ ಸಂಬಂಧಗಳಾಗಿ ಕಾಣುವ ಗೌರವಿಸುವ ಬಾಳುವ ಸರಳ ತಿಳುವಳಿಕೆಯ ಮೂಲದಲ್ಲಿ ಅರಳಿದವು. ಈ ಅರಳುವಿಕೆಯು ಅವಳ ವಯೊ ಸಹಜ ಮನೋಧರ್ಮಕ್ಕೆ ಅನುಗುಣವಾಗಿ ಆಗುವ ವಿಕಾಸಶೀಲ ವಿಸ್ತರಣೆಯಾಗಿದೆ. ಅವಳು ಬೇರೆಯವರಿಗೆ ಹೇಳುವವಳಲ್ಲ. ತನಗೆ ತಾನೇ ಅನುಸರಿಸಿಕೊಂಡು ಬಾಳುವವಳು. ಬೊಳುವಾರರು ಇಂತಹ ಪಾತ್ರಗಳ ನಡವಳಿಕೆಯನ್ನು ಬದುಕಿನ ಸಹಜತೆಯನ್ನು ಅಭಿವ್ಯಕ್ತಿಸುತ್ತಾರೆ.

ಸಂಸಾರದ ಒಳಗಿದ್ದು ಮಾನವೀಯ ನಿಷ್ಠೆಯ ಮನೋಧರ್ಮದಲ್ಲಿ ಬಾಳುವ ವ್ಯಕ್ತಿತ್ವ ಸುಮತಿಯಕ್ಕನದು. ಅವಳ ಹೆಸರೇ ಅವಳ ವ್ಯಕ್ತಿತ್ವಕ್ಕೆ ಒಡ್ಡಿದ ಕನ್ನಡಿ ರೂಪದ್ದು. ಸಂಸ್ಥೀಕರಣಗೊಂಡ ಧರ್ಮ, ಮತಭಾವದಲ್ಲಿ ಜಡಗೊಂಡಾಗ ಅದನ್ನು ವಿರೋಧಿಸಿ ಜಂಗಮಶೀಲ ಭಾವದಲ್ಲಿ ಮನುಷ್ಯರ ನಡುವೆ ಅದನ್ನು ಕೊಂಡುಹೋದವರು ಸೂಫಿಗಳು ತತ್ವಪದಕಾರರು. ಅವರ ನಡೆನುಡಿ ಜೀವಪರ ನೆಲೆಯಲ್ಲಿ ಅರಳಿದ್ದು. ಈ ಸಾಲಿನಲ್ಲಿ ಅರಳಿದ ವ್ಯಕ್ತಿತ್ವ ಜೋಳಿಗೆ ಬಾಬಾನದ್ದು. ಜನ್ನತ್ ಹಾಜಿಯವರ ಅಪ್ಪಟ ಚಿನ್ನದಂತಹ ಹೆಂಡತಿಯ

ಗುಣವನ್ನು, ಚಾಂದಜ್ಜನಿಗೆ ವಿವರಿಸುವಾಗ ಸುಮತಿಯಕ್ಕನ ಬಾಯಿಯಲ್ಲಿ ಹೇಳಿಸಿದ, ನಿಮ್ಮ ದೇವರಿಗೆ ಹೆಂಡತಿ ಇರುತ್ತಿದ್ದಾರೆ ಅವರು ಜನ್ನಾತುಮ್ಮನ ಹಾಗೆ ಇರುತ್ತಿದ್ದರು ಎಂಬ ಮಾತು, ಲೇಖಕರಿಗೆ ಮಹಿಳೆಯರ ಬಗೆಗೆ ಇರುವ ವಿಶೇಷ ಒಲವನ್ನು ತೋರಿಸುತ್ತದೆ. ಇಡಿ ಕಾದಂಬರಿಯಲ್ಲಿ ಒಂದೇ ಒಂದು ಕೆಟ್ಟ ಹೆಣ್ಣು ಪಾತ್ರ ಇಲ್ಲ ಎಂಬುದು ಇದಕ್ಕೆ ಸಾಕ್ಷಿಯಾಗುತ್ತದೆ. ಸಂಸ್ಕೃತಿಯ ಬೇರು ಮುಪ್ಪಾದರೂ ಆ ಹೆಮ್ಮರದ ಕೊಡುಗೆ ಅಪಾರವಾದದ್ದು. ಅಂದರೆ ಚಿಗುರುವ ಕ್ಷಣಗಳನ್ನೆಲ್ಲ ಮುಪ್ಪಿನ ಕಾಲದಲ್ಲಿ ನೆನೆಯುವ ಹಲವು ಪಾತ್ರಗಳು ಬೋಳುವಾರರ ಕಥೆ ಕಾದಂಬರಿಯಲ್ಲಿ ಅಡಕಗೊಂಡಿರುವುದನ್ನು ಗಮನಿಸಲಾಗುತ್ತದೆ. ಆ ಹಿನ್ನೆಲೆಯಲ್ಲಿ ಹಿಂದೂ-ಪುರಾಣದ ಕಥೆಗಳನ್ನು ಮುಸ್ಲಿಂ ಬದುಕಿನ ಸಂದರ್ಭದ ನಡವಳಿಕೆಗೆ ಉದಾಹರಣೆಯಾಗಿಸುವ ಪ್ರಜ್ಞೆ ಲೇಖಕರು ಚಾಂದಜ್ಜ ಮತ್ತು ಹೆಂಡತಿಯಾದ ಐಸಮ್ಮಳ ಬದುಕಿನ ಕ್ರಮಗಳನ್ನು ತೆರೆಯುವ ಮೂಲಕ ಕಾದಂಬರಿಗೆ ಹೊಸತನವನ್ನು ಮೂಡಿಸುತ್ತದೆ. ಅಂತಹ ಸಂಸ್ಕೃತಿಯ ಮೂಲಕ ಮಹಿಳೆ ಪುರುಷರಿಗೆ ಪರ ವಿರೋಧದ ದನಿಯನ್ನು ಪ್ರತಿಕ್ರಿಯಿಸುವ ಸ್ವಾತಂತ್ರ್ಯ, ಹಿಂದೂ ಪುರಾಣದ ಮೂಲಕ ಮಹಿಳೆಯರ ಆಕ್ರಂದನವನ್ನು ಅಭಿವ್ಯಕ್ತಿಸಲು ಸರಳವಾದ ಸಂದರ್ಭವಾಗಿ ಕಾಣಲ್ಪಡುತ್ತದೆ. ವಿಶೇಷವೆಂದರೆ ರಾಮಾಯಣವೆಂಬ ಪುರಾಣದ ಕಥೆಯನ್ನು ತೆಗೆದು ರಾಮ ಕಾಡಿಗೆ ಹೋದ ಪ್ರಸಂಗವನ್ನು ಚಾಂದಜ್ಜ ಹೆಂಡತಿಗೆ ಉದಾಹರಿಸಿದರೆ ಅವನ ಹೆಂಡತಿ ಐಸಮ್ಮ, "ಮೂರು ಹೆಂಡತಿಯರನ್ನು ಕಟ್ಟಿಕೊಂಡದ್ದಕ್ಕೆ ಅಲ್ಲಾಹು ಕೊಟ್ಟ ಶಿಕ್ಷೆ ಅದು" ಎಂದು ಮುಖಕ್ಕೆ ಹೊಡೆದಂತೆ ಉತ್ತರಿಸುವುದು ಇದಕ್ಕೊಂದು ಉದಾಹರಣೆ. ಸೈತಾನನ ಅಶೋಕವನದಲ್ಲಿ ಸಿಕ್ಕಿಹಾಕಿಕೊಂಡಿರುವ 'ರಾಮನ ಹೆಂಡತಿಯನ್ನು ಅದಷ್ಟು ಬೇಗ ಪಾರು ಮಾಡು ಅಲ್ಲಾಹುವೇ' ಎಂದು ಜನ್ನಾತುಮ್ಮ ಕಣ್ಣೀರಿಡುತ್ತಾ ದುವಾ ಮಾಡುವುದು ಮತ್ತೊಂದು ಉದಾಹರಣೆ. ಅರೆಸ್ಸಸ್ ಒಲವಿನ ಡ್ರೈವರ್ ರವಿಯಣ್ಣ. ಟಿವಿಯಲ್ಲಿ ರಾಮಾಯಣ ಪ್ರಸಾರವಾಗುತ್ತಿರುವ ಹೊತ್ತಿನಲ್ಲಿ, ನೆರೆಮನೆಯ ಮುಸ್ಲಿಂ ಹೆಣ್ಣು ಮಗಳೊಬ್ಬಳಿಗೆ ಹೆರಿಗೆಬೇನೆ ಆರಂಭವಾಗುತ್ತದೆ. ಬಾಡಿಗೆಗೆ ಕಾರು ಬೇಕಾಗುತ್ತದೆ. ಟಿವಿ ಕಾರ್ಯಕ್ರಮ ಮುಗಿಯದೆ ಹೊರಡಲು ರವಿಯಣ್ಣ ಒಪ್ಪುವುದಿಲ್ಲ. ಆಗ ರೌದ್ರಾವತಾರ ತಾಳಿ ಗಂಡನಿಗೆ ಬುದ್ಧಿ ಹೇಳುವ ಹೆಂಡತಿ ಸುಗುಣ, ಲವಕುಶರನ್ನು ಹೊಟ್ಟೆಯಲ್ಲಿಟ್ಟುಕೊಂಡ ಸೀತಾಮಾತೆಯಂತೆ ಚಿತ್ರಣಗೊಂಡಿದೆ. ಈ ಎಲ್ಲಾ ಸುಳಿ ಸೂಕ್ಷ್ಮಗಳ ನೆಲೆಯಲ್ಲಿ ಸಾಂಸ್ಕೃತಿಕ ಸಾಮರಸ್ಯದ ಸಂಗತಿಗಳನ್ನು ಲೇಖಕರು ನಿರೀಕ್ಷಿಸಿದ್ದಾರೆ.

ಅದು ಅನುಭವ ದ್ರವ್ಯದ ಋಜುತ್ವವನ್ನು ಕಾಣಿಸುವುದಷ್ಟೇ ಅಲ್ಲದೆ ಗ್ರಾಮಭಾರತದ ಕೂಡೂಟ್ಟಿನ ಬದುಕಿನ ಸಂಬಂಧದ ಸ್ವರೂಪವು ವಿಭಿನ್ನ ನೆಲೆಗಳಲ್ಲಿ ಚಿತ್ರಣಗೊಳ್ಳುತ್ತವೆ.

ಝೀನತ್ ಮತ್ತು ಅಸ್ಲಮರ ನಿಖಾ ಒಳ್ಳೆಯ ಮನಸ್ಸುಗಳಿಗೆ ಜಗತ್ತಿನ ಒಳ್ಳೆಯ ಅನ್ನಿಸಿಕೊಂಡಿರುವ ಎಲ್ಲಾ ಜೀವಗಳ ಹರಕೆ ಹಾರೈಕೆ ಇದ್ದೇ ಇರುತ್ತದೆ ಎಂಬುದನ್ನು ಮನಗಾಣಿಸುವ ಆದರ್ಶವಾದ ವಿವಾಹವಾಗುವುದನ್ನು ಕಾಣುತ್ತೇವೆ. ಇಂತಹ ಸಂಬಂಧಗಳು ಮಹಿಳೆಯರ ಬದುಕಿನತ್ತ ಹೆಣೆಯುತ್ತಲೇ ಸಾಗುತ್ತದೆ. ಅಂದರೆ ದೇವನೂರು ಮಹಾದೇವರವರ ಹೇಳಿಕೆಯಂತೆ **"ಸಂಬಂಜ ಎನ್ನುವುದು ದೊಡ್ಡದು ಕಾಣ"**[೩೩] ಎಂದು ಕುಸುಮಬಾಲೆ ಎಂಬ ಕಾದಂಬರಿಯಲ್ಲಿ ವಿಶಾಲ ಮನಸ್ಸಿನಿಂದ ಸವಿಸ್ತಾರವಾಗಿ ಸಂಬಂಧಗಳ ಬಗೆಗೆ ಹೇಳಿರುವುದು ಮೆಚ್ಚುವಂತಹದ್ದು.

'ಜನ್ನಾತುಮ್ಮಾ' ಈ ಪಾತ್ರವನ್ನು **"ಮದರ ತೆರೇಸಾ"** ಎಂಬ ಹೊಗಳಿಕೆಯಿಂದ ಪ್ರಮುಖ ಪಾತ್ರವಾಗಿ ಕಾದಂಬರಿಯಲ್ಲಿ ಜನ್ನಾತುಮ್ಮಾಳ ಮೊದಲು ಹೆಸರು ಶಬಾನಾಳನಾಗಿದ್ದರೂ ಈಕೆಯ ಧರ್ಮಕ್ಕೆ ಅನ್ವಯವಾಗುವಂತೆ ಕೆಲವು ಮೆಚ್ಚಿಗೆಯುಳ್ಳ ಗುಣಗಳನ್ನು ಅನುಸರಿಸಿದ್ದರಿಂದ ಮದರ ತೆರೇಸಳ ತಾಯ್ತನದಂತೆ ಈಕೆಗೆ ಇದೆ ಎಂಬ ಅಭಿಪ್ರಾಯದಿಂದ ಜನ್ನಾತುಮ್ಮಾ ತನ್ನ ಧರ್ಮದ ಸೇವೆಗೆ ಪಾತ್ರಳಾಗಿದ್ದಾಳೆ. ಜನ್ನಾತುಮ್ಮಾ ಕೊಡುವ ಕಾರಣ ಮುಸ್ಲಿಂ ಮಹಿಳೆಯರ ಒಳಿತಿನ ಬಗ್ಗೆ ಇರುವ ಕಾಳಜಿಯಿಂದ ಕೂಡಿದ್ದಾಗಿದೆ. ಮುಸ್ಲಿಂ ಹುಡುಗಿಯರನ್ನು ಶಾಲೆಗೆ ಕಳುಹಿಸುವುದೇ ಕಷ್ಟ. ಅಂಥದ್ದರಲ್ಲಿ ಕಲಿತ ನಿನ್ನಂಥವಳು ಹೀಗೆ ಮಾಡಿದ್ದರಿಂದ ಮುಸ್ಲಿಂ ಹುಡುಗಿಯರನ್ನ ಶಿಕ್ಷಣಕ್ಕೆ ಕಳುಹಿಸಲೇ ಹೆದರುವಂಥ ಸ್ಥಿತಿ ನಿರ್ಮಾಣವಾಗುತ್ತದೆ ಎಂಬ ಅವಳ ಆತಂಕ ವಸ್ತು ಸ್ಥಿತಿಗೆ ಕನ್ನಡಿ ಹಿಡಿಯುವಂತಿದೆ. ಅಷ್ಟೇ ಅಲ್ಲ, **'ಲವ್ ಜಿಹಾದ್'** ಎಂಬ ಪದ ಪ್ರಚಾರಗೊತ್ತಿಲ್ಲದ ಅದೇ ಜನ್ನಾತುಮ್ಮ, ಕಲಿತ ಮುಸ್ಲಿಮ್ ಹುಡುಗರು ಹಿಂದೂ ಹೆಣ್ಣನ್ನು ಮದುವೆಯಾಗುವುದನ್ನೂ ತಪ್ಪು ಎನ್ನುತ್ತಾಳೆ. ಹೀಗೆ ಮಾಡುವುದರಿಂದ ಮುಸ್ಲಿಂ ಹುಡುಗಿಯರಿಗೆ ಸಿಗಬೇಕಾದ ಕಲಿತ ಗಂಡು ಪರರ ಪಾಲಾಗುತ್ತದೆ ಎಂಬ ಸಮರ್ಥನೆಯ ನಿಟ್ಟಿನಲ್ಲಿ ಧರ್ಮದ ತಾಯ್ತನದ ಉಳುವಿಕೆಗಾಗಿ ಪ್ರಯತ್ನಿಸುವ ಆಕೆಯ ಚಿಂತನೆ ವಿಶಿಷ್ಟವಾದುದ್ದು. ಈ ಸಂಗತಿ ಸರಳ ತೀರ್ಮಾನಕ್ಕೆ ಬರುವುದಲ್ಲ. ಅಲ್ಲದೆ ಏಕಮುಖ ತೀರ್ಮಾನದಲ್ಲಿ ಕೊನೆಯಾಗುವುದೂ ಅಲ್ಲ. ಬದುಕಿನ ಬದಲಾವಣೆಯ ಸಂಕ್ರಮಣ ಘಟ್ಟದಲ್ಲಿ ಇವೆಲ್ಲಾ ಸಹಜ. ಜನ್ನಾತುಮ್ಮಾ ಪ್ರಗತಿ ವಿರೋಧಿಯ ಮಾತನ್ನಾಡುತ್ತಿಲ್ಲ. ಆದರೆ ಅವಳ ಆತಂಕ ಮುಸ್ಲಿಂ ಮಹಿಳೆಯ ಶಿಕ್ಷಣಕ್ಕೆ ಸಂಬಂಧಿಸಿದ್ದು. ಈ ಆತಂಕವನ್ನು ನಿರಾಕರಿಸುವಂತೆಯೂ ಇಲ್ಲ. ಒಂದು ಕಡೆ ಹೊಸ ಬದಲಾವಣೆ ಆಗುವಾಗ ಇನ್ನೊಂದು ಕಡೆ ಅದರ ಪರಿಣಾಮ ಬೇರೆಯ ಕಹಿ ಹಿನ್ನಡೆಗೂ ಕಾರಣವಾಗಬಹುದು. ಹಾಗಂದು ಬದಲಾವಣೆಯೇ ಬೇಡ ಅನ್ನುವುದಲ್ಲ. ಈ ಸೂಕ್ಷ್ಮಗಳನ್ನು ಕಾದಂಬರಿ ಸೂಕ್ಷ್ಮವಾಗಿ ಗ್ರಹಿಸಲಾಗುತ್ತದೆ. ಈ ಬಗೆಯ ವೈರುಧ್ಯಗಳ ಸೂಕ್ಷ್ಮಗಳನ್ನು

ಒಳಗೊಂಡಂತೆ ಇಡೀ ಮಹಿಳಾ ಪ್ರಸಂಗಗಳನ್ನು ಕಾದಂಬರಿ ಮಹಿಳಾ ಪ್ರಜ್ಞೆ ಸಾದರಪಡಿಸುತ್ತದೆ. ಒಟ್ಟಾರೆ ಮಹಿಳಾ ಪ್ರಜ್ಞೆಗೆ ಲೇಖಕರು ಮಹಿಳೆಯರಲ್ಲಿರುವ ಅಪಾರವಾದ ಗೌರವ ಮೊಹಿಂದ್ ಕೌರ್ ಮತ್ತು ತನ್ವೀರ್ ಕೌರ್ ಎಂಬ ಪ್ರಮುಖ ಪಾತ್ರಗಳ ಮೂಲಕ ಮುಂಬರುವ ಮಹಿಳಾ ಪಾತ್ರಗಳು ಕೂಡ ದೇಶಗಳಿಗೆ ಹಾಗೆ ಹೆಣ್ಣಿನ ಅಂತಃಕರಣವನ್ನು ಅರಿಯದ ಅವ್ಯವಸ್ಥೆಯ ಸಮಾಜಕ್ಕೆ ಸಂಬಂಧಗಳ ಲಿಂಗಬೇಧಗಳ ತಾರತಮ್ಯಕ್ಕೆ ಅಂತಿಮವಾಗಿ ಕೊಡುವ ಸಂದೇಶ ಮಹಿಳಾ ಸಂವೇದನೆ "ಸ್ವಾತಂತ್ರ ಬರೀ ದೇಶಕ್ಕಲ್ಲ ಇದು ಮಹಿಳೆಯರಿಗೂ ಅತ್ಯಗತ್ಯ ಎಂಬ ಘೋಷಣೆಯನ್ನು 'ಸ್ವಾತಂತ್ರ್ಯದ ಓಟ' ಎಂಬ ಕಾದಂಬರಿಯುದ್ಧಕ್ಕೂ ಮಹಿಳೆಯರ ಬದುಕು ಬವಣೆಯನ್ನು ಲೇಖಕರು ಸಮಾಜದ ಮುಖ್ಯವಾಹಿನಿಗೆ ಮುಖಾಮುಖಿ ಮಾಡಿರುವುದು ಕಾಣುತ್ತೇವೆ.

೧.೨. ವೈಯಕ್ತಿಕ ಮತ್ತು ಸಾಮಾಜಿಕ ನೆಲೆ

ಕಾದಂಬರಿಯ ಲೇಖಕರ ದೃಷ್ಟಿಯಲ್ಲಿ ಹಿಂದೂ ಮುಸ್ಲಿಂ ಜಗತ್ತು ಹೇಗೆ ಒಡಮೂಡಿದೆ ಎಂಬುದು ಕಾದಂಬರಿಯಲ್ಲಿ ವೈಯಕ್ತಿಕ ಮತ್ತು ಸಾಮಾಜಿಕ ನೆಲೆ, ಎಂಬಲ್ಲಿ ಕಾದಂಬರಿಯು ನಿರ್ಣಯಿಸುವ ನಿರ್ಣಾಯತ್ಮಕ ಅಂಶಗಳ ಕಡೆಗೆ ಬೆಳಕು ಹರಡಿಸಿರುವುದನ್ನು ಮತ್ತು ವ್ಯಕ್ತಿಯ ಬದುಕಿನಲ್ಲಿ ವೈಯಕ್ತಿಕ ಗುಣಗಳ ಮೇಲೆ ಸಮಾಜದ ಬದುಕಿನ ಕ್ರಮದ ಹಿಡಿತವನ್ನು, ಅದರ ನಿಲುವುಗಳನ್ನು ಸ್ಪಷ್ಟಪಡಿಸುವ ಮೂಲಕ ಧರ್ಮ ಮತ್ತು ವೈಚಾರಿಕತೆಯನ್ನು ಪ್ರತಿಪಾದಿಸಿರುವ ಬದುಕಿನ ಮೌಲ್ಯಗಳ ವಿಶ್ಲೇಷಣಾತ್ಮಕ ಫಲಶೃತಿಗಳನ್ನು ಭದ್ರಗೊಳಿಸಿರುವ ಚಾಂದ್ ಅಲೀಯ ಪಾತ್ರದೊಂದಿಗೆ ಲೇಖಕರು ವ್ಯಕ್ತಿಯ ಗುಣಗಳನ್ನು ಆತನ ಜೀವನ ಚರಿತ್ರೆಯ ಮೂಲಕ ಇಡೀ ಕಾದಂಬರಿಯ ಉದ್ದಕ್ಕೂ ಸವಿಸ್ತಾರವಾಗಿ ಅಭಿವ್ಯಕ್ತಿಸಿದ್ದಾರೆ.

ಅಷ್ಟೇ ಅಲ್ಲದೆ ಕಾದಂಬರಿ ಪ್ರಾರಂಭದಿಂದ ಅಂತ್ಯದವರೆಗೆ ಮಹಿಳಾ ಪಾತ್ರ ಹೆಚ್ಚಿನದಾಗಿ ಕಾಣುತ್ತಿದೆ. ಅದರಲ್ಲೂ ಮೊಹಿಂದರ್ ಕೌರ್ ಮತ್ತು ತನ್ವೀರ್ ಕೌರ್ ಇವರಿಬ್ಬರ ಪಾತ್ರಗಳ ಮೂಲಕ ಕಾದಂಬರಿಯ ಕೇಂದ್ರಬಿಂದುವಾಗಿ ತೆಗೆದು, ಇತರೇ ಮಹಿಳೆಯರಲ್ಲಿ ಕೈಜಮ್ಮ, ಸುಮತಿ, ಅಮೀರಭಾಬಿ, ಜನ್ನಾತುಮ್ಮಾ, ಖೈರುನ್ನೀಸಾಳು, ಸುಮತಿಯಕ್ಕ ಮುಂತಾದ ಪಾತ್ರಗಳ ಇರುವಿಕೆಯ ಗುಣಗಳನ್ನು, ಈ ಪಾತ್ರಗಳು ಸಮಾಜದ ಅರಿವು ಕುರುಹಗಳನ್ನು ಪ್ರತಿಬಿಂಬಿಸುವ ಕನ್ನಡಿಯಂತಿದೆ. ಚಾಂದ್ ಅಲೀ ಮತ್ತು ಮೂಸಜ್ಜರ ಪಾತ್ರಗಳು ಕಾದಂಬರಿಯುದ್ದಕ್ಕೂ ಮೌಲ್ಯಧಾರಿತ ಗುಣಗಳನ್ನು ಹಾಗೇ ಸಮಾಜದಲ್ಲಿ ನೊಂದ ನೋವುಗಳು, ಹತಾಶೆ ಭಾವನೆಗಳು, ಜೀವನದ ಗುರಿಕ್ರಮಗಳು ಬದಲಾದರೂ ಸಮಸ್ಯೆಗಳ ಸಂಕೋಲೆಯ ಪರಿ ಹೊಂದಾಣಿಕೆಗೆ ತೀರ ಹತ್ತಿರವಾದುದ್ದು. ಹಾಗೆಯೇ ಮೊಹಿಂದರ್ ಕೌರ್

ಮತ್ತು ತನ್ವೀರ್ ಕೌರ್‌ಳ ಪಾತ್ರ ಬಲು ವಿಶಿಷ್ಟವಾದುದ್ದು. ಈ ಪಾತ್ರಗಳಲ್ಲಿ ಯಾವುದೇ ಸ್ವಾರ್ಥವಿಲ್ಲದೆ, ತಮ್ಮನ್ನು ಗಡಿಯ ಭಾಗದಿಂದ ರಕ್ಷಿಸಿದ ಚಾಂದ್ ಅಲೀ ಎಂಬಾತನಿಗೆ ತಮ್ಮ ಒಡವೆಗಳನ್ನು ಕೊಡುವ ಮುಖಾಂತರ, ಆ ಸಹೋದರಿಯರ ಗುಣ ಅಮೂಲ್ಯವಾದದ್ದು. ಆಭರಣಗಳನ್ನು ಕಾಪಾಡಿಕೊಂಡು ಮತ್ತೇ ಹಿಂದಿರುಗಿಸಲು ಯತ್ನಿಸುವ ಪ್ರಯತ್ನ, ಆತನಿಗೆ ಐವತ್ತು ವರ್ಷಗಳ ಹಿಂದೆ ಪರಿಚಯವಾದ, ಸಂಕಷ್ಟಕ್ಕೆ ಸಿಲುಕಿದ ಮಹಿಳೆಯರ ಇರುವಿಕೆಯ ಮೌಲ್ಯಯುತ ಗುಣಗಳನ್ನು, ಚಾಂದ್ ಅಲೀಯ ಅಂತಃಕರಣವು ಇಡೀ ಕಾದಂಬರಿಯಲ್ಲಿ ಅಡಗಿರುವ ಮಾನವೀಯತೆಯ ಸಾಮಾಜಿಕ ಪ್ರಜ್ಞೆಯುಳ್ಳ ವ್ಯಕ್ತಿತ್ವಗಳನ್ನು ತಿಳಿಸುತ್ತದೆ.

ಚಾಂದ್ ಅಲೀಯು ರೈಲ್ವೆ ಸ್ಟೇಷನ್ ಪ್ರಸಂಗದಲ್ಲಿ ಮೊಹಿಂದರ್ ಮತ್ತು ತನ್ವೀರಳ ಬೆಲೆಬಾಳುವ ಆಭರಣಗಳನ್ನು ಬಚ್ಚಿಡುವ ಕಾರಣಗಳಿಂದ ಚೀಲಗಳನ್ನು ಮಾರುತ್ತಿರುವ ಹೆಂಗಸೊಬ್ಬಳನ್ನು ಕಂಡು ಮೂರು ಚೀಲವನ್ನು ಖರೀದಿಸುತ್ತಾನೆ. ನಂತರ ಒಂದು ರೂಪಾಯಿ ನೋಟನ್ನು ಆಕೆಗೆ ಕೊಡುತ್ತಾನೆ. ಆ ಚೀಲಗಳ ಬೆಲೆ ಹನ್ನೆರಡಾಣೆಯಾಗಿರುತ್ತದೆ. ಉಳಿದ ನಾಲ್ಕಾಣೆಯನ್ನು ನೀನೇ ಇಟ್ಟುಕೋ ಸಹೋದರಿ ಎಂದು ಆತ ತನ್ನ ಸಹೋದರಿಯಂತೆ ಭಾವಿಸಿ, ಆಕೆಯ ದುಡಿಮೆಯ ಅರಿವನ್ನು ತಿಳಿದು ಚಿಲ್ಲರೆಯನ್ನು ಆಕೆಯಲ್ಲಿಯೇ ಬಿಡುತ್ತಾನೆ. ಈ ಪ್ರಸಂಗ ವ್ಯಕ್ತಿಯ ಗುಣ ಮತ್ತು ಸಾಮಾಜಿಕ ಅರಿವನ್ನು ಮುಖಾಮುಖಿಗೊಳಿಸುತ್ತದೆ.

ಪ್ರದೇಶದಿಂದ ಸಮಸ್ಯೆಗೆ ಸಿಲುಕಿರುವ ಮೊಹಿಂದರ್ ಭಾಬಿ ಮತ್ತು ತನ್ವೀರ್ ಕೌರ್ ಇವರ ಸಹಕಾರಕ್ಕೆಂದು ಕೋರಿಕೊಂಡ ಚಾಂದ್ ಅಲಿಯನ್ನು "ನಮಗೆ ಯಾಕೋ ಭಯವಾಗುತ್ತಿದೆ ಅಲೀ. ಕ್ಯಾಂಪಿನವರೆ ನೀನು ಬಂದರೆ ಬದುಕಿರುವವರೆಗೂ ನಿನ್ನ ಸಲುವಾಗಿ ದೇವರನ್ನು ಪ್ರಾರ್ಥಿಸುವೆ".[೩೪] ವ್ಯಕ್ತಿಯ ಅಸಹಾಯಕತೆಯಲ್ಲಿ, ನಂಬಿಕೆಯ ಸ್ವರೂಪವಾಗಿ ಅಲೀಯ ವ್ಯಕ್ತಿತ್ವದಲ್ಲಿ ಕಾಣುತ್ತದೆ. ಅಲೀ ಸಮಾಜದ ಸುಧಾರಕರು ಅಲ್ಲ, ಸಮಸ್ಯೆಗಳನ್ನು ಬಿಡಿಸುವ ಅಧಿಕಾರಗಳು ಇಲ್ಲ, ಗೊತ್ತು ಗುರಿಯಿಲ್ಲದ ಜನರು, ದೇಶ, ಭಾಷೆ, ಈ ನಡುವೆ ಆತನ ಬಲವಾದ ನಂಬಿಕೆ, ಅಲೀ ಕಲಿತಿರುವ ವಿದ್ಯೆ, ಬರೀ ಮಾನವೀಯತೆಯ ಗುಣ ಬಿಟ್ಟರೆ ಉಳಿದ್ಯಾವುದು ಆತನಿಗೆ ಅರಿವಿಲ್ಲದ ಸ್ಥಿತಿಯಲ್ಲೂ ಸಹಕಾರದ ಭಾವನೆ ಮಾತ್ರ ಆತನಿಗೆ ರಕ್ಷಕವಚವಾಗಿ ಕಾಣಲಾಗುತ್ತದೆ. ಇಂತಹ ಸಂದರ್ಭಗಳನ್ನು ಲೇಖಕರು ಪಾತ್ರಗಳ ಮೂಲಕ ಮೌಲ್ಯಧಾರಿತ ವ್ಯಕ್ತಿತ್ವಗಳನ್ನು ಕಾದಂಬರಿಯುದ್ದಕ್ಕೂ ಚಿತ್ರಿಸಿರುವುದನ್ನು ಕಾಣುತ್ತೇವೆ.

೧.೩. ಧರ್ಮಾತೀತ ನೆಲೆಯಲ್ಲಿ ಪ್ರತಿಪಾದಿತವಾಗುವ ಮೌಲ್ಯ

ಕಾದಂಬರಿಯಲ್ಲಿ ಸ್ಥಳೀಯ ವಿವರವು ಸಂವೃದ್ಧವಾಗಿ ತೆರೆದುಕೊಳ್ಳುವ ನಿಟ್ಟಿನಲ್ಲಿ ಸ್ಥಳನಾಮಗಳ ಬಗೆಗೂ ವಿವರ ಪೂರ್ಣವಾದ ಮಾಹಿತಿಗಳು, ಮುತ್ತುಪ್ಪಾಡಿಯ ಗ್ರಾಮದ ಆಸುಪಾಸಿನ ನಡುವೆ ಇಡೀ ಕಾದಂಬರಿ ಹೆಣೆಯಲ್ಪಡುತ್ತದೆ. ಮನುಷ್ಯನ ಪ್ರೀತಿ, ಧಾರ್ಮಿಕ

ನಂಬಿಕೆಗಳನ್ನು ಮೀರಿಸಿ ಬೆಳೆಯುವಂತಹ ವಿಭಿನ್ನ ನೆಲೆಗಳಾಗಿ ಧರ್ಮಗಳನ್ನು ವಿರೋಧಿಸುವ ನಿಟ್ಟಿನಲ್ಲಿ ಸಮಾಜದ ಅರುಹು-ಕುರುಹುಗಳನ್ನು ಸ್ಪಷ್ಟಪಡಿಸುತ್ತದೆ. ಮಾನವೀಯತೆಯ ನೆಲೆಯಲ್ಲಿ ವಾತ್ಸಲ್ಯ, ಕರುಣೆ, ಅಂತಃಕರಣ ಇಂತಹ ಭಾವಸಂಬಂಧಿ ಗುಣಗಳನ್ನು ಆರ್ದ್ರವಾಗಿ ತಿಳಿಸುತ್ತದೆ.

ಪಾಕಿಸ್ತಾನದ ಚಾಂದ್‌ಅಲೀ ಎಂಬ ಪಾತ್ರವು ಹಿಂದೂಸ್ತಾನದ ಗಡಿಯ ಭಾಗಕ್ಕೆ ಬರುವ ಪ್ರಸಂಗದಲ್ಲಿ ಹಲವಾರು ಸಮಸ್ಯೆಗಳಿಗೆ ಸಿಲುಕಿ ಹಿಂದೂಸ್ತಾನದಲ್ಲಿ ಉಳಿಯುವ ಸಂದರ್ಭ ಎದುರಾಗುತ್ತದೆ. ಸಿಖ್ ಮಹಿಳೆಯರಿಬ್ಬರನ್ನು ರಕ್ಷಿಸುವ ನಿಟ್ಟಿನಲ್ಲಿ ತನ್ನ ಧರ್ಮವನ್ನು ಮೀರಿ ಅವರಿಗೆ ಸಹಾಯ ಮಾಡುವುದು ಆತನ ಮೌಲ್ಯಧಾರಿತ ಗುಣವಾಗಿರುತ್ತದೆ. ಹಾಗೆಯೇ ಅಬ್ಬಾಸ್ ಮಗ ಉಮ್ಮರ್ ಕುಂಞೀ ಹಿಂದೂ ಧರ್ಮಕ್ಕೆ ಮತಾಂತರವಾಗಿ ಉಮೇಶ್‌ಕುಮಾರ್ ಎಂದು ಹೆಸರಿಟ್ಟುಕೊಂಡ ಬಗೆಗೆ ಬರುವ ಪ್ರಸಂಗದಲ್ಲಿ ಧರ್ಮಾತೀತ ನೆಲೆಯನ್ನು ಕಾಣಲಾಗುತ್ತದೆ. ಹಾಗೆ ಶ್ಯಾನುಭೋಗ, ಸೀತಾರಾಮ ನಿಡ್ವಣ್ಣ ಮತ್ತು ಮೂಸಜ್ಜನವರೊಡನೆ ಪರಸ್ಪರ ಮಾತುಕತೆಗಳೊಂದಿಗೆ ಧರ್ಮ, ಜಾತಿಯೆಂಬ, ವ್ಯವಸ್ಥೆ ಮೀರಿ ಸಮಾಜದಲ್ಲಿ ಬದುಕುವ ಚಿಂತನೆಗಳು ಎದುರಾಗುತ್ತವೆ. "ಯಾವ ಜಾತಿ-ಯವನಾದರೂ ಆಗಬಹುದು ಶ್ಯಾನ್ಬಾಗ್ರೇ, ಆದರೆ ನಿಮಗೆ ಗೊತ್ತಿರುವ ನಿಯತ್ತಿನ ಹುಡುಗನಾದರೆ ಸಾಕು".[೩೫] ಎನ್ನುವ ಮೂಸಜ್ಜನ ಪ್ರತಿಕ್ರಿಯೆ ಮೆಚ್ಚುವಂತಹದ್ದು. ಮಂಗಳೂರು ಸೆಷನ್ಸ್ ಕೋರ್ಟಿನ ಪ್ರಸಂಗದಲ್ಲಿ ಇಮಾಮ್ ರೆಹಮಾನ್, ರೋಷನ್ ಅಲೀ, ಚಾಂದ್ ಅಲೀ, ಹಾಫೀಜ್ ಇಂತಹ ಪಾತ್ರಗಳೊಂದಿಗೆ ಧರ್ಮಾತೀತ ನೆಲೆಗಳನ್ನು ಸೂಕ್ಷ್ಮಿಸುವ ನೆಲೆಗಳನ್ನು ಕಾಣುವ ನಿಟ್ಟಿನಲ್ಲಿ ಧರ್ಮವೆ ಅವಲಂಬಿಸುವ, ತಿರಸ್ಕರಿಸುವ, ಪಾತ್ರಗಳು ಅಲ್ಲಲ್ಲಿ ಗೋಚರಿಸುತ್ತವೆ.

ಬೆಳ್ತಂಗಡಿಯ ಪ್ರಸಂಗದಲ್ಲೂ ನಡೆದ ಪರಾವರ್ತನ ಕಾರ್ಯಕ್ರಮದಲ್ಲಿ ಪೂಜ್ಯ ಶ್ರೀ ಪೇಜಾವರ ಶ್ರೀಗಳವರ ಪುಣ್ಯ ಆಶೀರ್ವಚನ ಪಡೆದು ಹಿಂದೂ ಧರ್ಮಕ್ಕೆ ಮರಳಿದ ಪುತ್ತೂರಿನ ಬಿ. ಉಮೇಶ್‌ಕುಮಾರ್ ಅವರು ತನಗೆ ತನ್ನೂರಿನ ಕೆಲವು ಮುಸ್ಲಿಮರು ಬೆದರಿಕೆ ಒಡ್ಡುತ್ತಿದ್ದಾರೆಂದೂ, ಇದಕ್ಕೆ ಪುತ್ತೂರಿನ ಸಬ್‌ಇನ್‌ಸ್ಪೆಕ್ಟರ್ ಅವರ ಪರೋಕ್ಷ ಪ್ರೋತ್ಸಾಹವಿದೆಯೆಂದೂ ದೂರಿದ್ದಾರೆ. 'ಹೊಸ ದಿಗಂತ'ಕ್ಕೆ ಅವರು ನವೆಂಬರ್ ಹನ್ನೊಂದರಂದು ನಡೆದ ಪರಾವರ್ತನ ಬಳಿಕ ತನಗೆ ನೀಡಲಾಗುತ್ತಿರುವ ದೈಹಿಕ ಹಾಗೂ ಮಾನಸಿಕ ಹಿಂಸಿಸುವ ಧರ್ಮಗಳ ಒತ್ತಡವನ್ನು ಉಮೇಶಕುಮಾರ್ ವ್ಯವಸ್ಥೆಯನ್ನು ವಿರೋಧಿಸುತ್ತಾರೆ. ಸ್ವ ಇಚ್ಛೆಯಿಂದ ಬೆಳ್ತಂಗಡಿಯಲ್ಲಿ ನಡೆದ ಪರಾವರ್ತನ ವಿಧಿಯಲ್ಲಿ ಪೂಜ್ಯ ಶ್ರೀ ಶ್ರೀ ಪೇಜಾವರ ಸ್ವಾಮೀಜಿಗಳ ಸಮುಖದಲ್ಲಿ ಹಿಂದೂ ಧರ್ಮವನ್ನು ಸ್ವೀಕರಿಸಿ ಉಮೇಶಕುಮಾರ್.ಬಿ ಎಂದು

ಬದಲಿಸಿಕೊಂಡಿರುವುದನ್ನು ಆತನ ಊರಿನ ಜನರಿಗೆ ತಿಳಿದ ವಿಷಯ. ಆದರೂ ತನ್ನ ಊರಿನಲ್ಲಿ ಬಹಿರಂಗವಾಗಿ ತಿರುಗುವ ಧೈರ್ಯ ಮೆಚ್ಚುವಂತಹದ್ದು. ಹಾಗೇ ದೂಮಣ್ಣ ಮಾಸ್ತ್ರು ಭಾಷಣ ಮಾಡುವಾಗ ಮದರಾಸಿನ ಕುಟುಂಬಗಳಿಗೆ ಸೇರಿದ ಸುಮಾರು ಸಾವಿರದಷ್ಟು ದಲಿತರು, ಮೇಲ್ಜಾತಿಯ ದೇವರುಗಳನ್ನು ಸಾಮಾಜಿಕ ಬಹಿಷ್ಕಾರಕ್ಕೆ ಪ್ರತೀಕವಾಗಿ ಸಾಮೂಹಿಕ ಇಸ್ಲಾಂ ಧರ್ಮಕ್ಕೆ ಮತಾಂತರವಾಗಿದ್ದು, ತಮ್ಮ ಸ್ವಧೈರ್ಯವನ್ನು ನಾವು ಇಂತಿಂಥಾ ತಾರೀಖಿನಂದೇ ಮತಾಂತರ ಆಗ್ತೇವೆ"[೨೬] ಎನ್ನುವ ಘೋಷಣೆಯನ್ನು ಕೈಗೊಳ್ಳುವ ಘಟನಾವಳಿಗಳನ್ನು ದೂಮಣ್ಣ ಮಾಸ್ತ್ರು ಭಾಷಣದಲ್ಲಿ ಸವಿಸ್ತಾರವಾಗಿ ತಿಳಿಸುತ್ತಾರೆ. ಇದರಿಂದ ಕೆರಳಿದ ವಿಶ್ವ ಹಿಂದೂ ಪರಿಷತ್ ಸಂಘಟನೆಯು, ಮತಾಂತರಗೊಂಡಿದ್ದ ಐವತ್ತು ಕುಟುಂಬಗಳನ್ನು ಮರುಮತಾಂತರಗೊಳಿಸಿ ಮಾತೃ ಧರ್ಮಕ್ಕೆ ಮರಳಿ ಸ್ವೀಕರಿಸುವ ಕಾರ್ಯಕ್ರಮವನ್ನು ಪ್ರಕಟಿಸಲಾಗುತ್ತದೆ. ಅದುವರೆಗೆ ತಮಗೇನು ಸಂಬಂಧ ಇಲ್ಲದವರಂತೆ ನಿದ್ರೆ ಮಾಡುತ್ತಿದ್ದ ಮದರಾಸು ಮತ್ತು ದೆಹಲಿಯ ಆಳುವವರೆಲ್ಲ ಹೆದರಿ ಎಚ್ಚೆತ್ತುಕೊಳ್ಳುವ ದೃಶ್ಯ ಅಭಿವ್ಯಕ್ತಿಸುತ್ತದೆ.

ಈ ಸಂದರ್ಭದ ಮರುದಿನ ನಮಾಜಿನ ಕರೆಯಿಂದಾರಂಭಗೊಂಡ ಮತಾಂತರಸಕ್ತರ 'ಸ್ವಲಾತ್' ಪಠಣದ ಸದ್ದು ಅಡಗಿದ್ದು ಸೂರ್ಯಾಸ್ತದ ಸಮಯದಲ್ಲಿ ಬೋಧಿಸಲಾದ 'ಕಲೀಮ'ವನ್ನು ಸ್ವೀಕರಿಸಿ ಮತಾಂತರಗೊಂಡ ನಂತರವೇ, ಬಹಳಷ್ಟು ದಲಿತರು ಹೊಸ ಬಟ್ಟೆ ಧರಿಸುತ್ತಾರೆ. ಮತಾಂತರಕ್ಕೆ ಬಹು ಹಿಂದೆಯೇ ತಾಲೀಮು ಮಾಡಿದ್ದ ಕೆಲವರು ಉದ್ದುದ್ದ ಗಡ್ಡ ಬಿಟ್ಟಿರುತ್ತಾರೆ. ಕಾರ್ಯಕ್ರಮಕ್ಕೆ ಬಂದಿದ್ದ ಮುಸ್ಲಿಂ ಹೆಂಗಸರಿಗೆ, ದಲಿತರ ಮನೆ ಮನೆಗೆ ಹೋಗಿ ಅಲ್ಲಿದ್ದ ಹೆಂಗಸರನ್ನು ಕರೆದುಕೊಂಡು ಬಂದು ಮೈದಾನದಲ್ಲಿ ಕುಳಿತಿರುವ ಕೆಲಸದ ಜವಾಬ್ದಾರಿಗಳನ್ನು ವಹಿಸಲಾಗುತ್ತದೆ. ಇದ್ದುದರಲ್ಲಿ ಚೆನ್ನಾಗಿರುವ ಬಟ್ಟೆ ತೊಟ್ಟುಕೊಂಡಿದ್ದ ದಲಿತ ಮಹಿಳೆಯರು, ಮುಸ್ಲಿಂ ಸಂಪ್ರದಾಯದಂತೆ ತಲೆಯ ಮೇಲೆ ಮುಸುಕು ಎಳೆದು ಮುಖವನ್ನು ತೆರೆಮರೆಯಲ್ಲಿ ಹಾಗಾಗ ನೋಡುವ ಪ್ರಸಂಗ ವಿಭಿನ್ನವಾಗಿ ಕಂಡುಬರುತ್ತದೆ.

ಮೀನಾಕ್ಷಿಪುರಂನ ದಲಿತರ ಸಾಮೂಹಿಕ ಮತಾಂತರವು "ಭಾರತೀಯ ಜನತಾ ಪಾರ್ಟಿ" ಮತ್ತು "ರಾಷ್ಟ್ರೀಯ ಸ್ವಯಂ ಸೇವಾ ಸಂಘ"ಗಳ ನಿದ್ರೆಗೆಡಿಸಿರುವುದರಿಂದ, ಅದನ್ನು ಅವು ಸವಾಲಾಗಿ ಸ್ವೀಕರಿಸಲು ಪಣತೊಟ್ಟಿವೆ ಎಂದು ಎಲ್ಲಾ ಪೇಪರುಗಳಲ್ಲೂ ಹಬ್ಬಿರುವುದನ್ನು ಕಾಣಲಾಗಿದೆ. ಅಷ್ಟರಲ್ಲಿ ದೇಶವು ಗಾಂಧಿ ಜಯಂತಿ ಆಚರಿಸಿ ಎರಡು ವಾರಗಳು ಕಳೆಯುವಷ್ಟರಲ್ಲಿ ಆ ಸಂಘಟನೆಗಳು ತಮಗೆ ಬೆಂಬಲ ನೀಡುತ್ತಿದ್ದ ಧಾರ್ಮಿಕ ನಾಯಕರುಗಳನ್ನೆಲ್ಲ ಕರೆಸಿಕೊಂಡು ದೆಹಲಿಯಲ್ಲಿ ಸುಮಾರು ಹತ್ತು ಲಕ್ಷ ಜನರನ್ನು ಸೇರಿಸಿ ವಿರಾಟ್ ಹಿಂದೂ ಸಮ್ಮೇಳನ ನಡೆಸಿ ತಮ್ಮ ಶಕ್ತಿ ಪ್ರದರ್ಶನ ಮಾಡಿದ್ದವು. ಮಾತ್ರವಲ್ಲ,

ಪರಾವರ್ತನ ಎಂಬ ವಿನೂತನ ಕಾರ್ಯಕ್ರಮವನ್ನು ಪ್ರಕಟಿಸಿ, ಹಿಂದೂ ಧರ್ಮವನ್ನು ತೊರೆದು ಹೋಗಿರುವ ಜನರನ್ನೆಲ್ಲ ಮರಳಿ ಮಾತೃ ಧರ್ಮಕ್ಕೆ ಕರೆತರುವ ಆಂದೋಲನದ ಮೂಲಕ ದೇಶಾದ್ಯಂತ 'ಹಿಂದೂ ಸಮಾಜದ ವಿರಾಟ್' ಸ್ವರೂಪದ ಸಮಗ್ರ ದರ್ಶನ, ಸಮಾಜದ ಮುಖ್ಯವಾಹಿನಿಗೆ ಮುಖಾಮುಖಿ ಮಾಡುವುದನ್ನು ಕಾಣುತ್ತೇವೆ.

ಅಲ್ಲದೆ ಶಾಲಿನಿ ಮತ್ತು ಕಾಸಿಮ್‌ರವರ ಪ್ರೇಮ ಪ್ರಸಂಗವು ಕೂಡ ಧರ್ಮಾತೀತವಾಗಿದ್ದು, ಸಮಾಜದ ವಿರೋಧಿಗಳ ಕ್ರೂರತನಕ್ಕೆ ಗುರಿಯಾಗಿದ್ದು, ಹಲವು ಸವಾಲುಗಳನ್ನೇ ಎದುರಿಸುವುದನ್ನು ಕಾಣುತ್ತೇವೆ. ಇಂತಹ ಪ್ರಸಂಗಗಳು ಕಾದಂಬರಿಯುದ್ದಕ್ಕೂ ಸಮಾಜದ ವ್ಯವಸ್ಥೆಯನ್ನೇ ಧರ್ಮಾತೀತ ನೆಲೆಯಲ್ಲಿ ತಮ್ಮದೇ ಆದ ಸಂಬಂಧಗಳನ್ನು ಬೆಸೆಯುವ ಮೂಲಕ ವ್ಯವಸ್ಥೆಯ ಕಪಿಮುಷ್ಟಿಯಿಂದ ಬಿಡುಗಡೆಯೊಂದಿ ಇಡೀ ಸಮಾಜಕ್ಕೆ ಧರ್ಮ, ಜಾತಿ, ಇಂತಹವುಗಳನ್ನು ವಿರೋಧಿಸಿ ಮಾನವೀಯತೆಯ ಗುಣಗಳನ್ನು ಸ್ವೀಕರಿಸಿರುವುದು ಸ್ಪಷ್ಟವಾಗಿದೆ. ಇಂತಹ ಘಟನಾವಳಿಗಳನ್ನು ಕಾದಂಬರಿಯ ಜೀವಾಳವಾಗಿ ಲೇಖಕರು ಕಟ್ಟಿಕೊಟ್ಟಿರುವ ಚಿತ್ರಣವು ವಿಶಿಷ್ಟವಾದುದ್ದು.

೧.೪. ಆರೋಗ್ಯ, ಶಿಕ್ಷಣ, ವರ್ತಮಾನದ ಸೆಲೆಗಳು

ಕಾದಂಬರಿಯಲ್ಲಿ ಹಿಂದೂ, ಮುಸ್ಲಿಂ ಸ್ಪಷ್ಟ ನಿಲುವುಗಳನ್ನು ಲೇಖಕರು ತಮ್ಮ ಸೃಜನ ಪ್ರಕ್ರಿಯೆಯೊಳಗೆ, ಧರ್ಮಗಳು ಬೇರೆಯಾದರು ಬದುಕಿನ ಚಿತ್ರಣವನ್ನು ಕಟ್ಟಿಕೊಡಲು ತಾಳುವ ವ್ಯವಧಾನವನ್ನು ಸ್ಪಷ್ಟಗೊಳಿಸಲಾಗುತ್ತದೆ. ವ್ಯವಸ್ಥೆಯ ಜಾಲವು ಸಮಾಜದಲ್ಲಿ ಆಕ್ರಮಿಸಿಕೊಂಡ ವಿದ್ರೋಹಕ ಚಿತ್ರಣವನ್ನು, ಕಾದಂಬರಿ ಉದ್ದಕ್ಕೂ ಕಟ್ಟಿಕೊಂಡಿರುವುದನ್ನು ಸವಿಸ್ತಾರವಾಗಿ ತಿಳಿಸಲ್ಪಡುತ್ತದೆ. ಹಿಂದೂ, ಮುಸ್ಲಿಂ ಸಮುದಾಯಗಳ ಶಿಕ್ಷಣ ತೆರೆದುಕೊಳ್ಳುವ ಬಗೆಗೆ ತಾಳುವ ನಿಲುವುಗಳನ್ನು ವಿವರಿಸುವ ಮುಖಾಂತರ ಸಮಾಜದ ಶಿಕ್ಷಣ ವ್ಯವಸ್ಥೆಯ ಅರುಹು ಕುರುಹುಗಳನ್ನು ಸೂಚಿಸುವ ಮೂಲಕ ಜೊತೆಗೆ ಹಲವು ಪಾತ್ರಗಳ ಮುಖಾಂತರ ಪರಿಸ್ಥಿತಿಗೆ ಎದುರಾಗಿ, ಅನಾರೋಗ್ಯದಿಂದ ಬಳಲುತ್ತಿರುವ ಸಂದರ್ಭಗಳು ಮುತ್ತುಪ್ಪಾಡಿಯ ಗ್ರಾಮದ ಆಸುಪಾಸಿನ ಸಮಾಜದ ಅವ್ಯವಸ್ಥೆಯು ಸ್ಪಷ್ಟಗೊಂಡಿದೆ.

ಮುತ್ತುಪ್ಪಾಡಿ ಉಗ್ರಾಣಿಯ ಪ್ರಸಂಗ ಶಿಕ್ಷಣದ ಬಗೆಗೆ ಹೆಚ್ಚು ಅರಿವು ಮೂಡಿಸಿರುವ ಸಂದರ್ಭವಾಗಿದೆ. ಊರಿನ ಶ್ಯಾನುಭೋಗ–ಸೀತಾರಾಮ, ನಿಡ್ವಾಣ್ಣಾಯರು, ಹೆಡ್‌ಮಾಸ್ಟರ್ ನಾರಾಯಣ ಭಟ್ಟರು, ತಹಸೀಲ್ದಾರ್‌ರು ಸೇರಿದಂತೆ ಶಿಕ್ಷಣದ ಧನಾತ್ಮಕ ಮತ್ತು ಋಣಾತ್ಮಕ ಚಿಂತನೆಗಳ ಅರಿವುಗಳನ್ನು ಮೂಡಿಸುವ ಘಟ್ಟ ಈ ಪಾತ್ರಗಳೊಂದಿಗೆ ತೆರೆದುಕೊಳ್ಳುತ್ತದೆ. ಗುಡ್ಡೆ ಶಾಲೆಯ ಇತಿಹಾಸದಲ್ಲೇ ಮೊಟ್ಟ ಮೊದಲು ಶಿಕ್ಷಕರ ದಿನಾಚರಣೆ ಆಚರಿಸಲು ತಹಸೀಲ್ದಾರರೊಂದಿಗೆ ಶ್ಯಾನುಭೋಗರೊಡನೆ ಹಲವು ಗಣ್ಯವ್ಯಕ್ತಿಗಳನ್ನು ಆಹ್ವಾನಿಸಲಾಯಿತು.

ಆ ಸಂದರ್ಭದಲ್ಲಿ ತಹಸೀಲ್ದಾರರು, ಹೆಡ್‌ಮಾಸ್ಟರ್ ನಾರಾಯಣಭಟ್ಟರ ಬಗೆಗೆ ನಾಲ್ಕು ಒಳ್ಳೆಯ ಗುಣಗಳನ್ನು ಹೇಳಬೇಕೆನ್ನುವ ಅನಿವಾರ್ಯ ಎದುರಾಗುತ್ತದೆ. ಆದರೆ ಊರ ವ್ಯವಹಾರದ ವಿಷಯಕ್ಕೆ ಬಂದಾಗ "ಆದ್ರೆ ಶ್ಯಾನುಭೋಗರೇ, ಊರು ಅಂದ್ರೆ ಶಾಲೆ ಮಾತ್ರ ಅಂತ ತಿಳ್ಕೊಂಡಿದ್ದೀರೋ ಹ್ಯಾಗೇ, ಶಾಲೆ ನೋಡಿಕೊಳ್ಳಲು ಅವರು ಇರುತ್ತಾರೆ. "ನೀವು ದೂರ ನಿಂತು ಬೆಂಬಲ ಕೊಟ್ಟರೆ ಸಾಕಾಗ್ತದೆ. ಆದ್ರೆ ರೆವಿನ್ಯೂ ವಿಚಾರವನ್ನು ನೀವೊಬ್ರೆ ನೋಡಬೇಕಾದವರು, ಅದಕ್ಕೆ ಮಾಸ್ತ್ರನ್ನು ಕರೆದು ದಸ್ತಾವೇಜು ಬರೆಯಿರಿ ಅಂತ ಹೇಳಲಿಕ್ಕೆ ಆಗುವುದಿಲ್ಲ. ಹಿಂದೆಯೆಲ್ಲ ಊರಿನ ಶ್ಯಾನುಭೋಗತನ ಅಂದ್ರೆ ಹ್ಯಾಗಿರಬೇಕು ಎನ್ನುವುದಕ್ಕೆ ಈ ಕಚೇರಿಯಲ್ಲಿ ನಿಮ್ಮನ್ನು ಉದಾಹರಿಸುತ್ತಿದ್ದರಂತೆ. ಆದ್ರೆ, ನಾನು ನೋಡಿದ ಹಾಗೆ ಕಳೆದ ಒಂದು ವರ್ಷದಿಂದ ನೀವು ನಿಮ್ಮ ಕೆಲಸದ ಬಗ್ಗೆ ಗಮನವೇ ಕೊಟ್ಟ ಹಾಗೆ ಕಾಣಿಸ್ತ ಇಲ್ಲ".[೩೭] ಎಂದು ಗ್ರಾಮದವರೆಲ್ಲ ತಮ್ಮ ಊರಿನ ಕೊರತೆಗಳನ್ನು ಈ ಸಮಾರಂಭದಲ್ಲಿ ತಹಸೀಲ್ದಾರ್ ಮತ್ತು ಅವರೊಂದಿಗಿರುವ ಗಣ್ಯವ್ಯಕ್ತಿಗಳಿಗೆ ಗ್ರಾಮದ ಅವ್ಯವಸ್ಥೆಯನ್ನು ಹೇಳುವ ನಿಟ್ಟಿನಲ್ಲಿ ಶಿಕ್ಷಣದ ಅರಿವನ್ನು ತಿಳಿದಿರುವುದನ್ನು ಗುಡ್ಡೆ ಶಾಲೆಯ ಸಮಾರಂಭದಲ್ಲಿ ಸ್ಪಷ್ಟಗೊಳ್ಳುವುದು ಕಾಣುತ್ತವೆ.

ಮದರಾಸಿನ ಪ್ರಸಂಗವು ಕೂಡ ವಿದ್ವಾನ್ ಕದ್ರಿ ನರಸಿಂಹಭಟ್ಟರ ನಡುವಳಿಕೆಯನ್ನು, ಹಾಗೆ ಅವರಿಗೆ ಸಿಕ್ಕಿದ ಗಾಂಧಿ ಮಾಸ್ಟರ್ ಎಂಬ ಬಿರುದನ್ನು ಪಡೆದಿದ್ದು, ಇವರ ಎರಡನೆ ಮಗ ನಾರಾಯಣಭಟ್ಟರು. ಮಂಗಳೂರಿನ ಲೋಕಲ್ ಶಾಲೆಯಲ್ಲಿ ಅಸಿಸ್ಟೆಂಟ್ ಮಾಸ್ಟರ್‌ರಾಗಿ ಸೇವೆ ಸಲ್ಲಿಸಿದ್ದರಿಂದ ಹೆಡ್‌ಮಾಸ್ಟರ್ ಎಂಬ ಕೀರಿಟ ಸಹಿತ ಮುತ್ತುಪ್ಪಾಡಿಯ ಕಿರಿಯ ಪ್ರಾಥಮಿಕ ಶಾಲೆಗೆ ವರ್ಗಾವಣೆ ಬಂದಾಗ, ಅಭಿನಂದನೆಗಳನ್ನು ಸಲ್ಲಿಸುವ ಜೊತೆಗೆ ಹೆಂಡತಿಯಾದ ವಸಂತಿಯ ಕಾಲ್ಗುಣವೆಂದು ತನ್ನ ಶಿಕ್ಷಣದ ಗರ್ವವನ್ನು ನಡೆದುಕೊಳ್ಳುವ ರೀತಿಯನ್ನು ಕಾಣುತ್ತೇವೆ. ಎಂದೋ ಹೇಳಿದ ಗಾಂಧಿ ಮಾಸ್ಟರ್ "ಇಕಾ ಮಾಣಿ, ಹೊಟ್ಟೆ ತುಂಬಿಸುವುದಷ್ಟೇ ನಿನ್ನ ಉದ್ಯೋಗದ ಉದ್ದೇಶವಾಗಿದ್ರೆ, ಇಲ್ಲೇ ಕದ್ರಿ ದೇವಸ್ಥಾನದ ದಾರಿಯಲ್ಲಿ ಒಂದು ಹೋಟೆಲಿಟ್ಟು ಬಿಡು. ನಾನು ಮೂವತ್ತು ಮೂವತ್ತೈದು ವರ್ಷಗಳ ಮಾಸ್ತರಿಕೆಯಲ್ಲಿ ಪಡೆದ ಒಟ್ಟು ಸಂಬಂಳವನ್ನು ಬರೇ ಗೋಳಿಬಜೆ ಮತ್ತು ಬಿಸ್ಕುಟಂಬಡೆ ಮಾರಿ ಎರಡೇ ವರ್ಷದಲ್ಲಿ ನೀನು ಬಾಚಿಕೊಳ್ಳಬಹುದು. ಹಳ್ಳಿಯ ಶಾಲೆಗೆ ಹೆಡ್ ಮಾಸ್ಟರ್‌ನಾಗುವುದೆಂದರೆ ಸಾಮಾನ್ಯ ಸಂಗ್ತಿ ಅಲ್ಲ. ನೀನು ಬರೀಯ ಶಾಲೆಗೆ ಮಾತ್ರವಲ್ಲ, ಇಡಿ ಊರಿಗೇ ಮಾಸ್ತ್ರು ಎಂಬುದನ್ನು ಮರೀಬೇಡ"[೩೮] ಎಂದು ಕದ್ರಿ ನರಸಿಂಹಭಟ್ಟರು ತನ್ನ ಸುಪುತ್ರನಾದ ನಾರಾಯಣಭಟ್ಟರಿಗೆ ಕಿವಿಮಾತನ್ನು ಹೇಳುವ ರೀತಿ ಮೆಚ್ಚುವಂತಹದ್ದು. ಈ ನಡುವೆ ಸುನಂದ ಬಾಯಿ ಟೀಚರ್ ಇವರು ಊರಿನ ಜನರೊಂದಿಗೆ ಹಾಗೂ

ನಾರಾಯಣಭಟ್ಟರೊಂದಿಗೆ ಶಾಲಾಭಿವೃದ್ಧಿಗೆ ಅವರದ್ದೇ ಕೊಡುಗೆ ಸ್ವರೂಪವನ್ನು ಹೇಳಲ್ಪಡುತ್ತದೆ. ಇವರೊಂದಿಗೆ ಸದಾನಂದ ಎಂಬ ಶಿಕ್ಷಕ ಮನೆಪಾಠ ಮಾಡುವ ಸಮಿತಿಯನ್ನು ರಚಿಸಿಕೊಳ್ಳುವ ನಿಟ್ಟಿನಲ್ಲಿ ಶಿಕ್ಷಣದ ಪ್ರಜ್ಞೆ ಮತ್ತು ಶಾಲಾಭಿವೃದ್ಧಿಗೆ ಮುಖ್ಯನಾಗಿರುತ್ತಾನೆ. ಹಾಗೆ 'ಶಾಲಾ ಶಿಸ್ತು ಸಮಿತಿಗೆ ವಾರಿಜ ಎಂಬ ಶಿಕ್ಷಕ ಕಲಿಸಿಕೊಡುವಂತಹ ನಡವಳಿಕೆ ಅತ್ಯಗತ್ಯವಾದುದ್ದು, ಸುನಂದಬಾಯಿ ಟೀಚರು ಪರಿಸರದ ಪ್ರಜ್ಞೆ ಮೂಡಿಸುವುದು, ಆಫೀಸಿನ ಜವಾನನಾದ ಸುಂದರಣ್ಣ ಬರುವಂತ ಅರ್ಜಿಗಳನ್ನು ಸನ್ನಡತೆಯಿಂದ ಬರೆಯುವ ಗುಣ, ಮೆಚ್ಚುಗೆಗೆ ಪಾತ್ರರಾಗುತ್ತಾರೆ. ಇಂತಹ ನಿಷ್ಠೆಯುಳ್ಳ ಶಾಲಾ ಶಿಕ್ಷಕರ ದೃಢ ನಿರ್ಧಾರಗಳನ್ನು, ವಿದ್ಯಾರ್ಥಿಗಳ ಭವಿಷ್ಯಕ್ಕಾಗಿ ಅಪಾರ ಕಾಳಜಿಯನ್ನು ತೆಗೆದುಕೊಂಡಿರುವ ಶಿಕ್ಷಕ, ಶಿಕ್ಷಕಿಯರನ್ನು, ಜವಬ್ದಾರಿಯುಳ್ಳ ಶಾಲೆಯ ಅಭಿವೃದ್ಧಿಗೆ ತಮ್ಮನ್ನೇ ಮುಡುಪಾಗಿಡಲು ಹೇಳಿ, ಆದೇಶಿಸಿ ಸರಿಸಮಾನವಾಗಿ ಪಾಲಿಸಿರುವ ಹೆಡ್ ಮಾಸ್ಟರಿಗೆ ಕೊಟ್ಟಂತೆ ಬಿರುದು "ಗಾಂಧಿ ಮಾಸ್ಟರಿಗೆ ತಕ್ಕ ಮಗ"[೩೯] ಎಂದು ಗ್ರಾಮಸ್ಥರು, ಶಿಕ್ಷಣದ ಸಮಿತಿಯವರು ಮೆಚ್ಚುಗೆ ವ್ಯಕ್ತ ಪಡಿಸುತ್ತಾರೆ. ಇಂತಹ ಘಟನಾವಳಿಗಳನ್ನು ಲೇಖಕರು ಶಿಕ್ಷಣದ ಅರಿವನ್ನು ಶಾಲಾ ಹೆಡ್‌ಮಾಸ್ಟರೊಂದಿಗೆ ಇವರೆ ಶಿಕ್ಷಕ ವರ್ಗದವರು ಸೇರಿ ಶಾಲಾ ಅಭಿವೃದ್ಧಿಗೆ ತಮ್ಮನ್ನೇ ತೊಡಗಿಸಿಕೊಳ್ಳುವ ಕಾಳಜಿಯುಳ್ಳ ಪ್ರತಿಭೆಗಳನ್ನು ಲೇಖಕರು ಚಿಂತನೆ ಸಮಾಜದ ಉಳಿಯುವಿಕೆಗಾಗಿ ಮಕ್ಕಳ ಅಭಿವೃದ್ಧಿಗಾಗಿ ಯೋಚಿಸಿರುವ ಕ್ರಮ ಸಮಾಜಮುಖಿಯಾಗಿ ಕಾಣುತ್ತದೆ.

ಆರೋಗ್ಯದ ಬಗೆಗೆ ಮುತ್ತುಪ್ಪಾಡಿಯ ಗ್ರಾಮದ ಆಸುಪಾಸಿನ ಗುಡ್ಡೆ ಎಂಬ ಗ್ರಾಮದಲ್ಲಿ "ಕುಟುಂಬ ಯೋಜನೆ" ಎಂಬ ಪ್ರಸಂಗವು ಊರಿನ ಜನರ ಆರೋಗ್ಯದ ಒಳತಿಗಾಗಿ ಅಸ್ಪತ್ರೆಯ ಚಿತ್ರಣ ತೆರೆದುಕೊಳ್ಳುತ್ತದೆ. ಈ ನಿಟ್ಟಿನಲ್ಲಿ ಸರ್ಕಾರಿ ಆಸ್ಪತ್ರೆಯಲ್ಲಿ ಉಚಿತವಾಗಿ ಮಾಡಲಾಗುತ್ತಿರುವ ಶಸ್ತ್ರಕ್ರಿಯೆಗೆ ಒಳಪಡಿಸಿ, ಅದರ ದಾಖಲು ಪತ್ರಗಳನ್ನು ಶಿಕ್ಷಣದ ಇಲಾಖೆಗೆ ಕಳಿಸಬೇಕೆಂಬ ಸುತ್ತೋಲೆಯನ್ನು ಕಳುಹಿಸುವ ಕ್ರಮವನ್ನು ಸೂಚಿಸುವುದು ಪ್ರಮುಖವಾಗಿ ಕಾಣುವುದು ಸ್ಪಷ್ಟಗೊಂಡಿದೆ. ನಾರಾಯಣ ಮಾಸ್ಟರಿಗೆ ಮೂವರು ಮಕ್ಕಳು ಇದ್ದುದ್ದರಿಂದ ತನ್ನ ಹೆಂಡತಿಯ ಮನವೊಲಿಸಿ ಶಸ್ತ್ರಕ್ರಿಯೆಗೆ ಮಂಗಳೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಒಳಪಡಿಸಿ, ಅದರ ದಾಖಲು ಪತ್ರವನ್ನು ಶಿಕ್ಷಣ ಇಲಾಖೆಗೆ ಕಳುಹಿಸಿ ವೇತನದಲ್ಲಿ ಹದಿನಾರು ರೂಪಾಯಿ ಹೆಚ್ಚಳ ಮಾಡಿಸಿಕೊಂಡಿದ್ದರು. ಆದರೆ ಕಳೆದ ವರ್ಷ ಶಸ್ತ್ರಕ್ರಿಯೆಗೆ ಯಾರೂ ಸಿಗದ ಕಾರಣ ನಾರಾಯಣ ಮಾಸ್ಟರ ವೇತನದ ಬಡ್ತಿಯನ್ನು ಅಮಾನತಿನಲ್ಲಿಡಲಾಗುತ್ತದೆ. ಈ ವರ್ಷವು ಕೂಡ ಯಾರು ಸಿಗದೆ ಹೋದರೆ ವೇತನ ಬಡ್ತಿ ಹೆಚ್ಚಳವಾಗದೆ ಇರುವ ಸಂದರ್ಭ ಎದುರಾಗುತ್ತದೆ. ಈ ನಡುವೆ ನಾರಾಯಣ ಮಾಸ್ಟರು ತನ್ನ

ಮನೆಯಲ್ಲಿ ಬಾಡಿಗೆಗೆ ಇದ್ದ ಬಡ ಹೆಂಗಸನ್ನು ಶಸ್ತ್ರಕ್ರಿಯೆಗೆ ಒತ್ತಾಯಿಸುವ ಸಂದರ್ಭಗಳು ವಿಭಿನ್ನ ನೆಲೆಯಲ್ಲಿ ಹಗರಣವೆಂದೆ ಸೂಚಿಸಲಾಗುತ್ತದೆ. ಸಂಜೀವನ ಕುಟುಂಬದ ಪ್ರಸಂಗವು ತನ್ನ ಹೆಂಡತಿ ಗಿರಿಜಳ ಪಾತ್ರದ ಮೂಲಕ ತೆರೆದುಕೊಳ್ಳುತ್ತದೆ. ಗಿರಿಜಳು ಇತನನ್ನು ಮದುವೆಯಾದ ಆರೆ ತಿಂಗಳಿಗೆ, ಸಂಪೂರ್ಣವಾಗಿ ತನ್ನ ಕಡೆ ಸೆಳೆದುಕೊಂಡಿರುವ ದೃಶ್ಯ ಗೋಚರಿಸಲಾಗುತ್ತದೆ. ಈತ ಗಿರಿಜಳಿಗಾಗಿ ತಂದೆ ಕೊಟ್ಟ ಸಂಪತ್ತುಗಳನ್ನೆಲ್ಲ ಮುಗಿಯುವ ಮೊದಲು ಗುಡ್ಡೆ ಗ್ರಾಮದ ಶಾಲೆಯ ಜವಾನನ ಹುದ್ದೆಯನ್ನು ಅಲಂಕರಿಸಿರುವುದು ಕಾಣುತ್ತೇವೆ.

ಸಂಸಾರವನ್ನು ಜವಾಬ್ದಾರಿತನದಿಂದ ನಡೆಸುತ್ತಿರುವ ಗಿರಿಜಳ ಸಾಮಾಜಿಕ ಅರಿವು ಮತ್ತು ಆರೋಗ್ಯದ ಅರಿವನ್ನು ಬಾಡಿಗೆಯಲ್ಲಿದ್ದ, ನಾಸೀರ್ ಮಸ್ಕತ್ ಹೆಂಡತಿಯಾದ ಕುಂಞಲಿಮ್ಮಾಳ ಬಸರಿತನದ ಆರೋಗ್ಯದ ಚಿಂತನೆಯನ್ನು ಗಿರಿಜ ತನ್ನ ಗಂಡ ಸಂಜೀವನೊಡನೆ ಪ್ರಸ್ತಾಪಿಸುತ್ತಾಳೆ. ಕುಂಞಲಿಮ್ಮಾಳಿಗೆ ಮೂರು ಪುಟ್ಟ ಹೆಣ್ಣು ಮಕ್ಕಳು, ಆಕೆ ಬೀಡಿ ಕಟ್ಟಿ ಸಂಪಾದಿಸುವ ಹಣದಿಂದ ತನ್ನ ಕುಟುಂಬದ ಜೀವನದ ನಿರ್ವಹಣೆಯನ್ನು ನಾಸಿರ್‌ನಷ್ಟೇ ಸರಿಸಮಾನವಾಗಿ ಮನೆಯಲ್ಲಿ ದುಡಿಯುತ್ತಿರುತ್ತಾಳೆ. ಈ ಸಂದರ್ಭದಲ್ಲಿ ತುಂಬಿದ ಗರ್ಭಿಣಿಯಾಗಿ ತನ್ನ ದುಡಿಮೆಯು ಕುಂಠಿತವಾಗುವ ಸ್ಥಿತಿಯನ್ನು ಅನುಭವಿಸುವ ಆರೋಗ್ಯ ಪ್ರಜ್ಞೆಯನ್ನು ಗಿರಿಜ ತನ್ನ ಗಂಡನೊಡನೆ ಚರ್ಚಿಸುವುದರಿಂದ ಹೆಡ್‌ಮಾಸ್ಟರ್ ನಾರಾಯಣಭಟ್ಟರಿಗೆ ತಿಳಿಯುತ್ತದೆ. ಈ ಎಲ್ಲಾ ಸನ್ನಿವೇಶಗಳನ್ನು ಹೆಡ್‌ಮಾಸ್ಟರ್‌ಗೆ ಚಾಂದ್ ಅಲೀ ನೆನಪಾಗುತ್ತಾನೆ. ಚಾಂದ್‌ಅಲೀ ಮನೆಗೆ ಹೋಗಿ ವಿಷಯ ಪ್ರಸ್ತಾಪಿಸಿದಾಗ "ನಿಜ ಹೇಳ್ತೇನೆ ಅಲೀಯವರೇ, ಇದರಲ್ಲಿ ಆ ಹೆಂಗಸಿಗೆ ಸಹಾಯ ಮಾಡುವುದಕ್ಕಿಂತ ನನ್ನ ಸ್ವಾರ್ಥವೇ ಹೆಚ್ಚು ಇದೆ ಅಂತ ನನಗೂ ಅನ್ನಿಸ್ತದೆ. ಆದರೆ ಅವಳಲ್ಲದಿದ್ದರೆ ನಾನು ಇನ್ನೊಬ್ಬಳು ಹೆಂಗಸನ್ನು ಆಪರೇಷನ್ನಿಗೆ ಹುಡುಕಲೇಬೇಕಾಗುತ್ತದೆ. ಹುಡುಕುತ್ತೇನೆ ಕೂಡಾ. ಸಂಜೀವ ಹೇಳುವುದನ್ನು ಕೇಳಿದರೆ ಆ ಮೂರು ಮಕ್ಕಳ ತಾಯಿ ಇನ್ನೊಂದು ತಿಂಗಳಲ್ಲಿ ಇನ್ನೊಂದು ಹೆರುತ್ತಾಳೆ. ಮುಂದಿನ ವರ್ಷ ಮತ್ತೊಂದು ಹೆರುತ್ತಾಳೆ. ಕುಟುಂಬ ಯೋಜನೆಯ ಆಪರೇಷನ್ ಮಾಡಿಸಿಕೊಂಡರೆ ಲಾಭ ಅವಳಿಗೆ ಅಂತ ಅವಳಿಗೆ ಖಂಡಿತವಾಗಿ ಗೊತ್ತಿರಲಾರದು. ಅವಳಿಗೆ ಅದನ್ನ ತಿಳಿಸಿ ಹೇಳುವವರು ಬೇಕು. ಯಾರಾದರೂ ಹೆಂಗಸರು ಇದ್ದರೆ ಕೆಲಸ ಸುಲಭ."[೪೦] ಎಂದು ಮನವಲಿಸುವ ಬಗೆಗೆ ವಿಭಿನ್ನ ಚಿಂತನೆಯನ್ನು ಕೈಗೊಳ್ಳುತ್ತಾರೆ. ಅಷ್ಟರಲ್ಲಿ ಮನೆತನಕ ಬಂದಿದ್ದ ಹೆಡ್‌ಮಾಸ್ಟರಿಗೆ ಕೃತಜ್ಞತೆಗೆ ಆಯಿಷಾಳು ಮರುದಿನವೇ ಮಿಡ್‌ವೈಫ್ ಕಮಲಕ್ಕನನ್ನು ಕರೆದುಕೊಂಡು ಕುಂಞಲಿಮ್ಮಾಳ ಮನೆ ಹತ್ತಿರ ಹೋಗುವುದನ್ನು ಕಾಣುತ್ತೇವೆ. ಕುಟುಂಬ ಯೋಜನೆ ಅರಿವು ಮೂಡಿಸುವ ನಿಟ್ಟಿನಲ್ಲಿ ಸರ್ಕಾರಿ

ಆಸ್ಪತ್ರೆಯ ಡಾಕ್ಟರ್ ಸಾವಿತ್ರಮ್ಮ ಅವರು ಯಥೇಚ್ಛವಾಗಿ ಅರಿವು ಮೂಡಿಸುವ ಪ್ರಜ್ಞಾಪೂರಕ ವೈದ್ಯರಾಗಿರುತ್ತಾರೆ. ಕುಂಞಲಿಮ್ಮಾಳ ಆಪರೇಷನ್ ಬಗೆಗೆ ಅನುಕೂಲ ಮತ್ತು ಅನಾನುಕೂಲವನ್ನು ಸವಿಸ್ತಾರವಾಗಿ ಅರಿವು ಮೂಡಿಸುವ ಜವಾಬ್ದಾರಿ ಸಾವಿತ್ರಮ್ಮನವರಿಗೆ ಇದ್ದರೂ ಕೂಡ, ಗಿರಿಜಾ, ಆಯಿಷಾ, ಮಿಡ್‌ವೈಫ್ ಕಮಲಕ್ಕೆ, ಇವರಿಗೆ ಕುಟುಂಬ ಯೋಜನೆಯ ಆದೇಶದಂತೆ ಹಾಗೆ ಮನೆಯ ಒಡತಿಯರ ಆರೋಗ್ಯದ ಬಗೆಗೆ ಅರಿವು ಮೂಡಿಸುವ ಆಸಕ್ತಿಯು ಮೆಚ್ಚುವಂತಹದ್ದು. ಒಟ್ಟಾರೆ ಪ್ರಸಂಗದ ಪರಿಣಾಮವಾಗಿ ಕುಂಞಲಿಮ್ಮಾ ಮತ್ತು ನಾಸಿರ್ ನಡುವೆ ಸಂಸಾರದಲ್ಲಿ ಬಿರುಕು ಬಿಟ್ಟು ಹಲವು ಸಮಸ್ಯೆಗಳು ಎದುರಾಗುವ ಸನ್ನಿವೇಶ ಕಾಣುತ್ತದೆ. ಕುಂಞಲಿಮ್ಮಾಳಿಗೆ ಮಕ್ಕಳಾಗದಂತೆ ಆಪರೇಷನ್ ಮಾಡಿರುವ ಕಾರಣದಿಂದ ತಲಾಕ್ ಕೊಟ್ಟಿರುವ ಪ್ರಕರಣವು ಸುಳ್ಯದವರೆಗೂ ಹಬ್ಬುತ್ತದೆ. ಇಂತಹ ಪಾತ್ರಗಳು ಕಾದಂಬರಿ ಉದ್ದಕ್ಕೂ ಅರಿವು ಇಲ್ಲದ ಬಾವಿಯೊಳಗಿನ ಕಪ್ಪೆಗಳಂತೆ ಮುಸ್ಲಿಂ ಮಹಿಳೆಯರಿಗೆ ವಿಭಿನ್ನ ನೆಲೆಗಳಲ್ಲಿ ಸಮಸ್ಯೆಗಳನ್ನು ಎದುರಿಸುವ ಪ್ರಕರಣಗಳು ಬಹುಮುಖ್ಯವಾಗಿ ಕಾಣುತ್ತದೆ. ಅದರಲ್ಲಿ ವಿಧವೆ ರುಖಿಯಾ, ಝೀನತ, ಫಾತುಮಾ, ನೇಬಿಸಮ್ಮ, ಉನ್ನಿಸಾ, ರೀನಾ ಇಂತಹ ಪಾತ್ರಗಳ ಮೂಲಕ ಆರೋಗ್ಯದ ವರ್ತಮಾನದ ನೆಲೆಗಳು "ಕುಟುಂಬ ಯೋಜನೆ" ಆರೋಗ್ಯದ ಬಗೆಗೆ ಪ್ರಜ್ಞೆವಹಿಸಿರುವ ಮಹಿಳೆಯರು ಮತ್ತು ಶಿಕ್ಷಕರಾದ ನಾರಾಯಣಭಟ್ಟರು, ಚಾಂದ್‌ಅಲೀ, ಸಂಜೀವ ಮತ್ತಿತ್ತರ ಪಾತ್ರಗಳ ಮೂಲಕ ಇಡೀ ಆರೋಗ್ಯದ ಬಗೆಗೆ ಲೇಖಕರು ಚಿತ್ರಿಸಿರುವ ಪ್ರಸಂಗ ಮುಖ್ಯವಾದದ್ದು.

ಕಾದಂಬರಿಯಲ್ಲಿ ಬೂಬಮ್ಮ ಎಂಬ ಪಾತ್ರ ವಿಶಿಷ್ಟವಾಗಿ ಕಾಣುತ್ತದೆ. ಅಂದರೆ ಇಡೀ ಮುಸ್ಲಿಂ ಧರ್ಮದ ಮಹಿಳಾ ಸಂವೇದನೆಯನ್ನು ಬೂಬಮ್ಮ ಆಕ್ರೋಶ ವ್ಯಕ್ತಪಡಿಸುವುದು "ಈ ಗಂಡಸು ನಮ್ಮನ್ನು ಏನೂಂತ ತಿಳ್ಕೊಂಡಿದ್ದಾರೆ? ಒಟ್ಟಿಗೆ ಮಲಗಿಕೊಂಡ್ರೆ ಮಾತ್ರ ಗಂಡ ಹೆಂಡ್ತಿಯಾ? ನಿಖಾ ಆದ ನಂತ್ರ ತಲಾಕ್ ಕೊಟ್ರೂ ಕೊಡದಿದ್ರೂ ಅವಳು ಅವ್ನಿಗೆ ಲೆಕ್ಕಾಕ್ಕಾದ್ರೂ ಹೆಂಡ್ತಿ ಹೆಂಡ್ತಿಯೇ ಅಲ್ವಾ? ಅನಂತ್ರ ಬೇರೆಯವನನ್ನು ಮದ್ವೆಯಾದ್ರೂ ಅವಳು ಅವ್ನಿಗೆ ಎರಡನೆಯ ಹೆಂಡ್ತಿಯೇ ಅಲ್ವಾ? ಹುಂ.....? ಹೆಂಡ್ತಿಯೆಂದರೆ ತಲೆದಿಂಬು ಇದ್ದ ಹಾಗೆ, ಇದು ಬೇಡದಿದ್ರೆ, ತಲೆಗೆರಡು, ಕಾಲಿಗೆರಡು ಇಟ್ಕೊಂಡ್ರೂ ಸಾಕಾಗುವುದಿಲ್ಲ. ನಮ್ಮ ಕಷ್ಟ ನಾವು ಯಾರಲ್ಲಿ ಹೇಳ್ಕೊವುದೂ? ಈ ಗಂಡಸ್ರ ಹಾಗೆ ನಾವು ಮಾಡ್ತಾ ಹೋದ್ರೆ ಏನಾದೀತು ಅಂತ ಒಮ್ಮೆ ಯಾರಾದ್ರೂ ಯೋಚ್ನೆ ಮಾಡಿದ್ದಾರಾ?"[೪೧] ಎಂದು ತನ್ನ ಮನೋವೇದನೆಯನ್ನು ಅಭಿವ್ಯಕ್ತಿಸುತ್ತಾರೆ ಬೂಬಮ್ಮ.

ಇಡೀ ಮುಸ್ಲಿಂ ಸಮಾಜವನ್ನೇ ಬಡಿದೆಬ್ಬಿಸುವ ನಿಟ್ಟಿನಲ್ಲಿ ಹಿಮ್ಮುಖವಾಗಿ ಬೂಬಮ್ಮ ಪಾತ್ರ ಬಲು ವಿಶಿಷ್ಟವಾಗಿ ಮುಸ್ಲಿಂ ಸಮುದಾಯವನ್ನು ಮಹಿಳೆಯರ ಬಗೆಗೆ, ಹೇಗೆ ಕಾಳಜಿ

ತೋರಬೇಕು ಆಕೆ ನಿಮಗೆ ವಸ್ತುವಲ್ಲ ಭಾವನಾತ್ಮಕ ಇರುವ ಮನುಷ್ಯಳು ಎಂದು ತನ್ನ ಪ್ರತಿಭಟನೆಯನ್ನು ಬಲಿಷ್ಟವಾಗಿ ಹೇಳಲು ಪ್ರಯತ್ನಿಸುವ ರೀತಿ, ನೀತಿ ಧರ್ಮವನ್ನು ನಿರಾಕರಿಸುವ ಚಿಂತನೆ ಏಕೆಂದರೆ ಆ ಧರ್ಮದಲ್ಲಿ ಮಹಿಳೆಯರಿಗೆ ಹಲವು ಸ್ವಾತಂತ್ರ ಇಲ್ಲದೆ ಇದ್ದರೂ, ಕೆಲವು ನಿಯಮಗಳು ಇರಬೇಕೆಂದು ಮತ್ತು ಮುಸ್ಲಿಂ ಮಹಿಳೆಯರಿಗೆಲ್ಲ ಅಸ್ತಿತ್ವ ಇದೆ. ಅವರು ಬಳಸುವ ವಸ್ತುವಲ್ಲ, ಹಲವು ಭಾವನೆ ಹೊಂದಿರುವ ಮಾನವವೆಂಬ ಜೀವಿಯೆಂದು ಬೂಬಮ್ಮ ಆಕೆ ಸರಳತೆಯಲ್ಲೂ ವಿಭಿನ್ನ ನೆಲೆಯಲ್ಲಿ ಚಿಂತಿಸತೊಡಗುತ್ತಾಳೆ.

ಅಪ್ಪರಲ್ಲಿ ಲತೀಫ್ ಮಾಸ್ಟರ್ ತಮ್ಮ ಹೆಂಡತಿಯತ್ತ ನೋಡಲು ಭಯಪಡುತ್ತಾರೆ. ಅಂದರೆ ಆಕೆ ಸ್ವತಂತ್ರಳು ಅವಳು ಹೇಳುವ ಮಾತಿಗೆ ಎಷ್ಟೊಂದು ಅರ್ಥಗಳಿವೆ ಎನ್ನುವ ನಿಟ್ಟಿನಲ್ಲಿ ಭಯದಿಂದ ಆಕೆಯನ್ನು ದಿಟ್ಟಿಸುತ್ತಾರೆ. ಅಷ್ಟೇ ಅಲ್ಲದೆ ಬೆಳೆದು ನಿಂತಿರುವ ಮಗಳನ್ನು ಕೂಡ ನೋಡುತ್ತ ಪಕ್ವವಾಗಿ ಅರ್ಥೈಸಿಕೊಳ್ಳಲು ಪ್ರಯತ್ನಿಸುವುದನ್ನು ಕಾಣುತ್ತೇವೆ. ಇಷ್ಟೆಲ್ಲ ರಾದಂತವಾಗಲು ಬೂಬಮ್ಮ ತನ್ನ ಮಗಳನ್ನು ಎರಡನೇ ಸಂಬಂಧಕ್ಕೆ ಮದುವೆ ಮಾಡುತ್ತಾರೆ ಎಂದು ಗಂಡನ ವಿರೋಧ ಮುಗಿಬಿಳುತ್ತಾಳೆ. ಆದರೆ ಅಪ್ಪರಲ್ಲಿ ಗಂಡನಾದ ಲತಿಫ್ ಮಾಸ್ಟರ್, ಎಲ್ಲ ರೀತಿ ಅರ್ಥೈಸಿಕೊಂಡು ಮತ್ತೆ ಹೆಂಡತಿಯನ್ನು ಮನವೊಲಿಸುವುದು ಬಲು ವಿಶಿಷ್ಟವಾದುದು. ಹಾಗೆಯೇ ಚಾಂದ್ ಅಲೀ ಮತ್ತು ಲತೀಫ್ ಮಾಸ್ಟರ್ ಕೂಡ ಸ್ನೇಹಿತರು. ಆದರೆ ಇವರಿಬ್ಬರ ಒಡನಾಟ ಚೆನ್ನಾಗಿರುತ್ತದೆ. ಆದರೆ ಚಾಂದ್ ಅಲೀ ತನ್ನ ಹೆಂಡತಿಗೆ ತಲಾಕ್ ಕೊಡುವ ಬಗೆಗೆ ಹಲವು ವಿಚಾರ ಹೊರಹಾಕಿರುತ್ತಾನೆ, ಅದನ್ನು ಕೈಜಮ್ಮಳು, ಬೂಬಮ್ಮಳಿಗೆ ವಿಷಯವನ್ನು ಮುಟ್ಟಿಸಿರುವುದನ್ನು ಕಾಣುತ್ತೇವೆ, ಈ ಪ್ರಸಂಗದಲ್ಲಿ ಇಲ್ಲಿ ಬೂಬಮ್ಮಳಿಗೆ ತನ್ನ ಮಗಳನ್ನು ಚಾಂದ್ ಅಲೀಗೆ ಎರಡನೆಯ ಸಂಬಂಧ ಮಾಡಿಕೊಡಬೇಕಲ್ಲವೆಂಬ ಕೊರಗು ಯತೇಚ್ಛವಾಗಿ ಗೋಚರವಾಗುತ್ತದೆ. ಆದರೆ ಒಂದು ಬಲವಾದ ಚಿಂತೆ ಎಂದರೆ ತನ್ನ ಗಂಡ ಚಾಂದ್ ಅಲೀ ಇಬ್ಬರು ಸ್ನೇಹಿತರು ಎಲ್ಲಿ ಆತನ ಮಾತಿಗೆ ಮರುಳಾಗಿ ತನ್ನ ಮಗಳನ್ನು ನಿಖಾ ಮಾಡಲು ಒಪ್ಪಿ ಬಿಡುತ್ತಾರೋ ಎಂಬ ಚಿಂತೆಯಲ್ಲಿ ಭಾವುದ್ರಕಳಾಗಿರುತ್ತಾಳೆ.

"ಹಲೀಮಾಳನ್ನು ಸುಮ್ಮಸುಮ್ಮನೆ ನಿಖಾ ಆಗಿ ತಲಾಕ್ ಕೊಡಲು ಆ ನಿಮ್ಮ ಚಾಂದ್ ಅಲೀ ಒಪ್ಪಿದ್ದಾನಂತೆ. ಸ್ವತಃ ಕೈಜಮ್ಮನೇ ನನಗೆ ಹೇಳಿದ್ದು. ಅವರಿಗೆ ಅದು ಇಷ್ಟವೇ ಇಲ್ಲವಂತೆ. ಆದ್ರೆ, ಹರ್ಘಾನಿಗೆ ಮಾತುಕೊಟ್ಟಾಗಿದೆ ಅಂತ ಅಲೀ ಹಠ ಹಿಡಿದಿದ್ದಾನಂತೆ. ಹಾಗಿರುವಾಗ ನಾವು ಮುಂದೆ ಆಯಿಷಾಳನ್ನು ಚಾಂದ್ ಅಲೀಗೆ ಕೊಡುವುದಾದರೆ ಎರಡನೆಯ ಸಂಬಂಧಕ್ಕೆ ಕೊಟ್ಟ ಹಾಗೆ ಆಗುವುದಿಲ್ವಾ?" [೪೨] ಎನ್ನುವ ಮಾತು ಅದೇಷ್ಟ ತನ್ನ ಮಗಳ ಬಗೆಗೆ ಕಾಳಜಿಯನ್ನು ಆಕೆ ಹೊಯಸಿಕೊಮಡಿದ್ದಾಳೋ ಎಂಬುವುದು ಪ್ರಶ್ನಾತ್ಮಕವಾಗಿ

ಹಾಗೆ ಆಕೆಯ ಅಂತಃಕರಣ ಎಷ್ಟರಮಟ್ಟಿಗೆ ವಿಶಾಲತೆ ಮನೋಭಾವ ಇತ್ತು ಎನ್ನುವುದು ಕಾಣಲಾಗುತ್ತದೆ. ಇಂತಹ ಪ್ರಸಂಗಗಳು ತಲಾಕ್ ಬಗೆಗೆ ಮುಸ್ಲಿಂ ಸ್ತ್ರೀಯರಿಗೆ ಇದ್ದಂತಹ ಭಯಭೀತಿಯನ್ನು ತೋರಿಸುತ್ತದೆ. ಗಂಡಸರಿಗೆ ಸಮಾಜದಲ್ಲಿ ಗೌರವ ಸ್ಥಾನಮಾನ ಕೊಟ್ಟಿದೆ. ಆದರೆ ಸ್ತ್ರೀಯರಿಗೆ ಧರ್ಮದ ಗ್ರಂಥದಲ್ಲಿ ಎರಡನೇ ದರ್ಜೆಯಾಗಿ ಅಥವಾ ಇನ್ನೂ ಹೀನಾಯವಾಗಿ ನೋಡಿದೆಯಲ್ಲ ಎನ್ನುವ ನಿಟ್ಟಿನಲ್ಲಿ ಬೂಬಮ್ಮನ ವಾದ ಬಲಿಷ್ಠವಾಗಿಯೇ ಕಾಣುತ್ತದೆ. ಅಲ್ಲಿ ಬುರ್ಖಾ ಹಾಕಿ ಮನೆಗೆಲಸ ಮತ್ತು ಇನ್ನಿತರ ಕೆಲಸದಲ್ಲಿ ಗಂಡಿಗೆ ಸಮನಾಗಿದ್ದರೂ ಕೂಡ ಯಾವುದೇ ಪ್ರಶ್ನೆ ಇಲ್ಲಿಯವರೆಗೂ ಬಂದಿರಲಿಲ್ಲ. ಆದರೆ ಹೊಸ ಚಿಂತೆಯಂತೆ, ಆಕೆ ಧೈರ್ಯದಿಂದ ತನ್ನ ಗಂಡನಿಗೆ ಹೇಳುವ ಹಲವು ಭಿನ್ನ ನೆಲೆಗಳನ್ನು ಸಮಾಜದ ಹಲವು ಅನಿಷ್ಠ ಪದ್ಧತಿಯನ್ನು ಕಿತ್ತು ತೂರಬೇಕು ಎನ್ನುವ ಪ್ರತಿಭಟನೆ ಆಕೆಯಲ್ಲಿತ್ತು. ಹಾಗೆಯೇ ಇಡೀ ಪದ್ಧತಿಯಲ್ಲಿ ಯಾವ ಪದ್ಧತಿಯನ್ನು ಕಿತ್ತುಹಾಕಿಲ್ಲ ಅಂದರು ಪರವಾಗಿಲ್ಲ. ಆದರೆ ತಲಾಕ್ ಎಂಬ ಅನಿಷ್ಠ ಪದ್ಧತಿಯನ್ನು ನೆಲಮೂಲದಿಂದ ಬೇರು ಸಮೇತ ಕೀಳಬೇಕು ಎಂದು ಪ್ರತಿಭಟನೆ ನಡೆಸುತ್ತಾಳೆ.

ಈ ನಿಟ್ಟಿನಲ್ಲಿ ಲತೀಫ್ ಮಾಸ್ಟರ್ ಕೂಡ ತುಂಬಾ ಯೋಚಿಸಿ ಹೆಂಡತಿಯ ಮಾತಿನಲ್ಲಿ ಅರ್ಥಗಳನ್ನು ಹುಡುಕುವ ನಿಟ್ಟಿನಲ್ಲಿ ಸ್ಪಂದಿಸುತ್ತಾನೆ. ಒಟ್ಟಾರೆ ಈ ಪ್ರಸಂಗವು ನಿಖಾ ಮಾಡುವಾಗ ಇದ್ದಂತಹ ಸಂಭ್ರಮ ಹಾತೂರ, ಜೀವನದ ಬಗೆಗೆ ಕಾಳಜಿ ತಲಾಕ್ ಕೊಡುವಾಗ ಏಕೆ ಇಲ್ಲ ಎಂಬ ಪ್ರಶ್ನೆಯೊಂದಿಗೆ ಇಡೀ ಮುಸ್ಲಿಂ ಗಂಡಸರನ್ನು ವಿರೋಧಿಸುವ ಮತ್ತು ಧರ್ಮವನ್ನು ಪ್ರಶ್ನೆ ಮಾಡುವ ಚಿಂತನೆ ಮತ್ತು ಪ್ರತಿಭಟನೆಯನ್ನು ಹಾಗೆ ಸಮಾಜವನ್ನು ಬದಲಾಯಿಸುವ ಕ್ರಿಯೆ ಇಲ್ಲಿ ಬೂಬಮ್ಮನ ಪಾತ್ರದಿಂದ ಸೂಚಿಸುತ್ತದೆ.

ಆದರೆ ಚಾಂದ್ ಅಲೀಗೆ ಅಂತಹ ಆಸೆಗಳು ಇರುವುದೇ ಇಲ್ಲ. ಅದನ್ನು ಅನುಮಾನದಲ್ಲಿ ಆತ ಪ್ರಶ್ನಿಸುತ್ತಾನೆ. ಕೈಜಮ್ಮಳು ಇದಕ್ಕೆಲ್ಲ ಕಾರಣವೆಂದು ಕೂಡ ಅನುಮಾನವಾಗಿಯೇ ಉಳಿಯುತ್ತಾರೆ.

ಅಷ್ಟರಲ್ಲಿ ಮತ್ತೊಂದು ಪ್ರಸಂಗ ಎದುರಾಗುತ್ತದೆ. ಅದು ಮುತ್ತುಪಾಡಿಯ ಗ್ರಾಮದಲ್ಲಿನ ಪುರುಷರ ಅಪರೂಪಕ್ಕೊಮ್ಮೆ ಸಿಗುವ ಪುಕ್ಕಟೆಯ ಮನರಂಜನೆ, ಅದೇ "ಜಮಾತ್ ಪಂಚಾಯಿತಿ" ಈ ಪಂಚಾಯಿತಿಯಲ್ಲಿ ಪೊಡಿಯಬ್ಬ ಆತನ ಮಗಳ ಬಗೆಗೆ ತಲಾಕ್ ಕೊಡಬೇಕೆಂಬ ದೃಶ್ಯ ಕಂಡು ಆ ಪಂಚಾಯತ್ ಹಾಸ್ಯಮಯವಾಗಿ ಕೂಡಿರುವ ಒಂದು ಸನ್ನಿವೇಶವಾಗಿದೆ. ಅಷ್ಟರಲ್ಲಿ ಅಲ್ಲಿ ತೀರ್ಮಾನ ಮುಂದಿನ ಶುಕ್ರವಾರ ಸಾಯಂಕಾಲ, ಜಮಾತಿನ ವಿಶೇಷ ಸಭೆ ಕರೆಯಲಾಗಿದೆ ಎಂಬ ರೋಚಕ ಸುದ್ದಿಗಿಂತಲೂ ಹೆಚ್ಚು ಆಕರ್ಷಕವಾಗಿದ್ದು ಇದ್ದಂತ ಸಂಗತಿಯೆಂದರೆ, ಸುಳ್ಯದ ಮಾಸ್ಟರು ಅಬ್ದುಲ್ ಗಫ್ಫಾರ್

ಸಾಹೇಬರು ಆ ದಿನ ಬರುವವರಿದ್ದು, ಗಂಡ ಹೆಂಡತಿಗಳ ನಡುವಿನ ಸಂಬಂಧ ಹೇಗಿರಬೇಕು ಎಂಬ ಬಗ್ಗೆಯೇ ಮತ ಪ್ರಸಂಗ ಮಾಡಲಿರುತ್ತದೆ. ಆತ ಕಾಣಲು ತೆಳುವಿನಂತೆ ಕಂಡರೂ, ಗಫ್ಫಾರ್ ಮಾಷ್ಟ್ರು ತರ್ಕಕ್ಕೆ ನಿಂತರೆ ಅದೇ ವಿಶೇಷವಾದದ್ದು, ಅದೆಂಥಾ ಕಠಿಣವಾದ್ದರೂ ಮನ್ನು ಮುಕ್ಕುವಂತೆ ತಿಳಿಸುತ್ತಿದ್ದರೂ ಇದೊಂದು ಇಡೀ ಮುಸ್ಲಿಂ ಸಮುದಾಯಕೆ ವಿಶೇಷ ಸವಾಲಾಗಿಯೇ ಬಿಡುತ್ತದೆ. ಅವರ ಧರ್ಮದ ಪವಿತ್ರ ಗ್ರಂಥವಾದ ಕುರಾನ್ ಬಗೆಗೆ ಹೇಳುವ ತರ್ಕ ಬಲು ಧೈರ್ಯ ತರುತ್ತದೆ.

"ಪ್ರವಾದಿ ಮಹಮದರಿಗೆ ಅಲ್ಲಾಹು ಕುರಾನಿನ ಯಾವ ಯಾವ ಪುಟದಲ್ಲಿ ಏನು ಏನು ಹೇಳಿ ಬರೆಸಿದ್ದಾರೆ, ಯಾವ ಹದೀಸಿನ ಯಾವ ಪುಟದಲ್ಲಿ ಯಾವ ಯಾವ ಸಹಾಬಿಗಳು ಏನು ಏನು ಹೇಳಿದ್ದಾರೆ, ಅವರು ಹಾಗೆ ಹೇಳಲು ಕಾರಣಗಳೇನು ಎಂಬಿತ್ಯಾದಿಯಾಗಿ ಪುಟಸಂಖ್ಯೆಗಳ ಸಹಿತ ವಿವರಿಸುವ ಅವರ ಎದುರು ಎಂತಹ ಮತ ಪಮಡಿತರೂ ಗಪ್‌ಚುಪ್ ಆಗಿಬಿಡುತ್ತಾರೆ ಎಂದು ಸೈಕಲ್‌ಷಾಪಿನ ಖಾನರು ಹೇಳುತ್ತಾರೆ".[೪೩]

ಇಂತಹ ಗಂಭೀರ ಚಿಂತನೆಯನ್ನು ಒಬ್ಬ ಸೈಕಲ್ ಷಾಪಿನ ಮಾಲೀಕ ಅಪಾರವಾದ ನಂಬಿಕೆ ತೋರುತ್ತಾನೆ. ಇಲ್ಲಿ ಪಂಡಿತರನ್ನು ಮೀರುವ ಚಿಂತನೆ ಇದೆಲ್ಲ ಎಂದರೆ ಆ ಮಾಸ್ಟರ್‌ಗೆ ಮಹಿಳೆ ಪ್ರಜೆ ಎಷ್ಟರಮಟ್ಟಿಗೆ ಇದೆ ಎಂಬುವುದು ಗೊಂದಲಕ್ಕೀಡು ಮಾಡುತ್ತದೆ.

ಈ ನಿಟ್ಟಿನಲ್ಲಿ ಮತ್ತೊಂದು ಪ್ರಸಂಗ ಎದುರಾಗುತ್ತದೆ. "ಮದುವೆಯ ಒಪ್ಪಂದವನ್ನು ಮುರಿಯುವದೆಂದರೆ ದೇವಸಿಂಹಾಸನವನ್ನು ನಡುಗಿಸಿದಂತೆ; ನ್ಯಾಯೋಚಿತವಲ್ಲದ ತಲಾಕ್ ನೀಡುವುದೆಂದರೆ ದೇವಗ್ರಂಥಕ್ಕೆ ಅವಮಾನ ಮಾಡಿದಂತೆ. ತಮಾಷೆಗಾಗಿಯೋ, ಕೋಪೋದ್ರೇಕದಿಂದಲೋ, ಬೇರೆಯವರ ಒತ್ತಾಯಕ್ಕೆ ಮಣಿದೋ ನೀಡುವ ತಲಾಕುಗಳು, ಕುಡುಕನ ಅಥವಾ ಹುಚ್ಚನ ತಲಾಕ್‌ಗಳಂತೆ ಅಸಿಂಧುವಾಗಿರುತ್ತದೆ"[೪೪] ಇದೊಂದು ಪ್ರಶ್ನೆಯಾಗಿ ಉಳಿಯುವುದನ್ನು ಕಾಣುತ್ತೇವೆ. ತಲಾಕ್ ಎಂಬ ಭೀಕರ ತಪ್ಪಿಗೆ ಸ್ತ್ರೀಯರು ಸಂಕಷ್ಟಕ್ಕೆ ಸಿಲುಕುವುದನ್ನು ಕಾಣಲಾಗುತ್ತದೆ. ಅಂದರೆ ಅಲ್ಲಿ ಪುರಾಣ ಗ್ರಂಥಗಳನ್ನೆ ವಿರೋಧಿಸುವ, ಕಲಾತ್ಮಕ ಚಿತ್ರಣವನ್ನು ಕಾದಂಬರಿಯಲ್ಲಿ ವಿಶೇಷವಾಗಿ ಗುರುತಿಸಲಾಗುತ್ತದೆ.

"ಮನೆಯ ಮತ್ತು ಊರ ಗುರು ಹಿರಿಯರು ನಡೆಸಿದ ಎಲ್ಲ ಸಂಧಾನ ಸಾಮರಸ್ಯ ಪ್ರಯತ್ನಗಳು ಸಂಪೂರ್ಣ ವಿಫಲವಾದ ಬಳಿಕ, ಹೆಣ್ಣಿನ ಮುಟ್ಟು ಅಥವಾ ಹೆರಿಗೆ ಸ್ರಾವವಲ್ಲದ ದಿನಗಳಲ್ಲಿ, ಇಬ್ಬರು ನ್ಯಾಯವಂತ ನಿಷ್ಪಕ್ಷಪಾತಿ ಸಾಕ್ಷಿಗಳ ಸಮ್ಮುಖದಲ್ಲಿ, ಸರಿಯಾದ ತಿಳಿವಳಿಕೆ ಮತ್ತು ಸ್ವಸ್ಥ ಮನಸ್ಸಿನಿಂದ, ಸ್ಪಷ್ಟ ಭಾಷೆಯ ಮಾತಿನ ಅಥವಾ ಬರಹದ ಮೂಲಕ ನೀಡಲಾದ ಒಮ್ಮತದ ತಲಾಕ್‌ಗಳನ್ನಷ್ಟೇ ಇಸ್ಲಾಮ್ ಸಮ್ಮತಿಸುತ್ತದೆಯೋ ಹೊರತು ಒಂದೇ ಉಸಿರಿನಲ್ಲಿ ನೀಡಿದ ಮೂರು ತಲಾಕ್‌ಗಳನ್ನಲ್ಲ"[೪೫] ಎನ್ನುವುದು ಹೊಸ ಚಿಮತನೆಯನ್ನು ಕೈಗೊಳ್ಳುತ್ತದೆ.

ಏಕೆಂದರೆ ಹಲವು ಕಾರಣ ಹೇಳಿ ತಲಾಕ್ ಕೊಟ್ಟು ಬೇರೆ ಬೇರೆ ಮದುವೆ ಆಗುತ್ತಾರೆ. ಆ ಸ್ತ್ರೀಯರಿಗೆ ಜೀವನದ ದಾರಿಗಳು ಸಿಗಲು ಅವಕಾಶ ತೀರ ಕಡಿಮೆ ಇರುತ್ತದೆ ಎಂದು ಇಂತಹ ಸ್ಥಿತಿಗೆ ಪಾರಾಗುವ ಉಪಾಯವನ್ನು ಮಾಡುವುದು ಈ ಪ್ರಸಂಗದಲ್ಲಿ ಸೂಕ್ಷ್ಮಿಸಬಹುದಾಗಿದೆ.

ಹೀಗೆ ಮುಸ್ಲಿಂ ಮಹಿಳೆಯರಿಗೆ ಸವಾಲಾಗಿ ನಿಂತಿರುವ ಪವಿತ್ರ ಗ್ರಂಥವಾದ ಕುರಾನ್ ಬಗೆಗೆ ಚಿಂತನೆ ನಡೆಸುತ್ತಾರೆ. "ಇದ್ದತ್ ಅವಧಿ ಮುಗಿಯುವ ಮುನ್ನ ಹೆಂಡತಿಯನ್ನು ಮರಳಿ ಸ್ವೀಕರಿಸಲು ಕುರಾನ್ ಒಪ್ಪಿರುತ್ತದೆ. ಆದರೆ ಮೂರನೆಯ ಬಾರಿಯೂ ತಲಾಕ್ ಹೇಳಿದ ಬಳಿಕ ಅವಳನ್ನು ಮತ್ತೆ ಸ್ವೀಕರಿಸಲು ಅನುಮತಿಯಿಲ್ಲ. ಹಾಗೆ ತಲಾಕ್ ಪಡೆದ ಹೆಣ್ಣುಮ ಮುಮದೆ ಕಾಲಾನುಸಾರ ಬೇರೊಬ್ಬರೊಡನೆ ಮದುವೆಯಾಗಿ ದಾಂಪತ್ಯ ಜೀವನ ನಡೆಸಿದ ಬಳಿಕ ಆತನ ಮರಣವಾಗಿದ್ದರೆ ಅಥವಾ ಆತನಿಂದ ಸ್ವಾಭಾವಿಕ ಕಾರಣಗಳಿಗಾಗಿ ತಲಾಕ್ ಪಡೆದಿದ್ದರೆ, ತನ್ನ ಇದ್ದತ್ ಅವಧಿಯನ್ನು ನಿಯಮದಂತೆ ಪೂರೈಸಿಕೊಂಡು ಆಕೆ ಮೊದಲ ಗಂಡನನ್ನು ಹೊಸದಾಗಿ ಮದುವೆಯಾಗಿ ಒಂದುಗೂಡಬಹುದು". [೪೬] ಇದೊಂದು ವಿಚಿತ್ರವಾದ ಸಂಗತಿ ಎನ್ನಲಾಗುತ್ತದೆ. ಇಡೀ ಜೀವನ ಪರ್ಯಂತ ಒಬ್ಬ ಮತ್ತೊಬ್ಬರು ಮದುವೆಯಾಗಿ ಸಮಾಜದಲ್ಲಿ ಹಲವು ನೋವು ಅನುಭವಿಸುವ ಮಹಿಳೆಯರಿಗೆ ಇದರಿಂದ ಹೊರಬರುವ ಅಗತ್ಯತೆ ನಗರೀಕರಣದಿಂದ ಸಾಧ್ಯತೆ ಹೆಚ್ಚಾಗಿ ಕಾಣುತ್ತದೆ. ಹಳೆ ಸಂಪ್ರದಾಯ, ಒಡಂಬಡಿಕೆಗಳ ವಿರೋಧಿಸುವ ನಿಟ್ಟಿನಲ್ಲಿ ತಮ್ಮ ತಮ್ಮ ಜೀವನವನ್ನು ತಾವು ನಡೆಸುವ ಹಕ್ಕು ಇಲ್ಲವಲ್ಲ ಎಂಬ ಒಳವೇದನೆಯನ್ನು ಕಾದಮಬರಿಯಲ್ಲಿ ಹಲವು ಸ್ತ್ರೀಪಾತ್ರಗಳು ದನಿ ಎತ್ತಿರುವುದನ್ನು ನಾವು ಕಾಣಬಹುದು. ಮದುವೆ ಎಂಬುದು ಬರೀ ಲೈಂಗಿಕ ಕ್ರಿಯೆ ಮಾತ್ರ ಜೀವಿಸುವವರಿಗೂ ನೆಮ್ಮದಿಯಿಂದ ಸಂಸಾರ ನಡೆಸಲು ಅಲ್ಲ, ಎನ್ನುವ ವಾದ ಮತ್ತು ಪ್ರತಿವಾದದೊಂದಿಗೆ ತಲಾಕ್ ಎಂಬ ಪ್ರಶ್ನೆಯನ್ನು ಸಮಾಜದ ಮುಖ್ಯವಾಹಿನಿಗೆ ಲೇಖಕರ ಒಡ್ಡುವುದನ್ನು ಕಾಣಲಾಗುತ್ತದೆ.

ಅಷ್ಟೆ ಅಲ್ಲದೆ ತಲಾಕ್ ಎಂಬ ಪ್ರಸಂಗವು ಬಹಳ ವಿಶಾಲವಾಗಿ ತರ್ಕಕ್ಕೆ ಒಳಗಾಗುತ್ತದೆ. ಅಂದರೆ ಇಲ್ಲಿ ಹುಡುಗನನ್ನು ಒತ್ತಾಯದ ಮೇರೆಗೆ ತಲಾಕ್ ಎಂದು ಮೂರು ಸಲ ಘೋಷಿಸುವುದು ಒಂದು ಕ್ರಮ, ಆತ ಸ್ವಬುದ್ಧಿ ಇಲ್ಲದೆ ಘೋಷಿಸುವುದು ಇದು' ಇನ್ನೊಂದು ಆತ ಯೋಚಿಸಿ ತಲಾಕ್ ಎಂಬ ಘೋಷಣೆ ಕೂಗುವುದೇ ಒಂದು ಕ್ರಮವಾಗಿ ಕಾಣುತ್ತದೆ ಎನ್ನುವುದು ಮಹಿಳೆಯರ ಪ್ರತಿಭಟನೆ. ಇಡೀ ಸಮಾಜವನ್ನೇ ಬೆಚ್ಚಿಸುವ ಮಟ್ಟಿಗೆ ಹಲವು ಮಹಿಳಾ ಪದ್ಧತಿ ವಿರೋಧ ಹಾಗೆ ಅದರ ಬಗೆಗೆ ಸವಿಸ್ತಾರವಾಗಿ ಚರ್ಚಿಸುವ ಧೈರ್ಯತನವನ್ನು ಲೇಖಕರು ತಮ್ಮ ಬೃಹತ್ ಕಾದಂಬರಿಯಲ್ಲಿ ಅಭಿವ್ಯಕ್ತಿಸುತ್ತಾರೆ. ಅಂದರೆ ಮುಸ್ಲಿಂ ಅವರಲ್ಲಿ ಹೆಣ್ಣು ಎಂಬುವುದು ಭೋಗದ, ಹಡೆಯುವ ವಸ್ತುವಾಗಿ

ಬಳಸಿಕೊಳ್ಳುವುದನ್ನು, ಲೇಖಕರು ತಮ್ಮ ಬರೆಹ ಮೂಲಕ ಚಿತ್ರಿಸಿರುವುದನ್ನು ಕಾಣುತ್ತೇವೆ. ಇಂದೂ ಕಾಲಾಕ್ರಮೇಣ ಅಲ್ಪಸ್ವಲ್ಪ ಬದಲಾವಣೆ ಆಇರಬಹುದು. ಆದರೆ ಶೋಷಣೆಗೆ ಇಂದೂ ಕೂಡ ಮುಸ್ಲಿಂ ಮಹಿಳೆಯರು ಇರುವುದು ಗೋಚರವಾಗುತ್ತದೆ. ಬುರ್ಖಾ ಹಾಕಿ ಹಒರಬರುವಿಕೆ ಬಹಳ ಚಿಂತನೆಗೆಕ್ಕೀಡಾಗುವಿಕೆಯನ್ನು ತೋರುತ್ತದೆ.

ಹೀಗೆ ಹಲವು ಪ್ರಸಂಗದ ಮುಸ್ಲಿಂ ಧರ್ಮ ಜೀವನ ಪುರುಷರ ಪರವಾಗಿಯೇ ಇದೆ ವಿನಃ ಮಹಿಳೆಯರ ಪರ ತೀರಾ ಕಡಿಮೆ. ಹಾಗೆಯೇ ವಾಕ್ ಸ್ವತಂತ್ರವು ಇವರ ಚಿಂತನೆಯ ಸುಳಿ ಎನ್ನಲಾಗಿದೆ. ಇಂತಹ ಪ್ರಸಂಗಗಳ ಮೂಲಕ ಲೇಖಕರು ತಮ್ಮದೇ ಆದ ಪ್ರತಿಭೆಯಲ್ಲಿ ಇಡೀ ಸಮಾಜಕ್ಕೆ ಹಿತವನ್ನು ಬಯಸಿ ಬರೆದ ಬೃಹತ್ ಕಾದಂಬರಿ 'ಸ್ವಾತಂತ್ರ್ಯದ ಓಟ' ವಿಶೇಷವಾಗಿ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ವಿಶೇಷ ಸ್ಥಾನಮಾನ ಗಳಿಸಿಕೊಳ್ಳುತ್ತದೆ.

೧.೫. ಕಾದಂಬರಿ ಪ್ರತಿಪಾದಿಸುವ ತಾತ್ವಿಕತೆ

ಇಡೀ ಕಾದಂಬರಿಯಲ್ಲಿ ಕುರುಡು ನಂಬಿಕೆಯ ದ್ವೇಷಭಾವಗಳನ್ನು ನಿಷ್ಠುರವಾಗಿ ವಿಮರ್ಶೆಗೆ ಒಡ್ಡುವ ಲೇಖಕರ ಪ್ರತಿಭೆ ಕಾದಂಬರಿಯಲ್ಲಿ ಸ್ಪಷ್ಟಗೊಳ್ಳುತ್ತದೆ. ಧರ್ಮ ಧರ್ಮಗಳ ನಡುವೆ ಜಿಜ್ಞಾಸೆಯನ್ನು ತಾತ್ವಿಕ ಪರಿಭಾಷೆಯಲ್ಲಿ, ತರ್ಕಬದ್ಧ, ವಾಗ್ವಾದಗಳನ್ನು ಮಂಡಿಸುವ ಕಾರ್ಯಗಳನ್ನು ಮಾಡುವುದಿಲ್ಲ. ಬದಲಾಗಿ ಜೀವಂತಿಕೆಯ ಇರುವಿಕೆಯನ್ನು, ಮನುಷ್ಯನ ನಡವಳಿಕೆಯನ್ನು ಹಲವು ಪಾತ್ರಗಳ ಮುಖಾಂತರ ಇಡೀ ಸಮಾಜಕ್ಕೆ ಮುಖಾಮುಖಿ–ಗೊಳಿಸುವ ಲೇಖಕರ ಬರಹ ಔಚಿತ್ಯ ಪೂರ್ಣವಾದುದ್ದು.

ಸ್ಥಳೀಯತೆಯಲ್ಲಿ ಬೇರು ಬಿಟ್ಟು ದೇಶ ವ್ಯಾಪ್ತಿಯಲ್ಲಿ ಬದುಕಿನ ಗತಿ, ಗತವ್ಯಗಳನ್ನು ಅಭಿಸಿಕೊಂಡು ಬೆಳೆದ "ಸ್ವಾತಂತ್ರದ ಓಟ"ದ ಕಥನವಿದು. ಕಾದಂಬರಿಯಲ್ಲಿ ಮಹಿಳಾ ಪ್ರಜ್ಞೆ, ಸಮಾಜದ ಸ್ಥಿತಿಗತಿಗಳು, ಧರ್ಮಾತೀತದ ಜೀವಂತಿಕೆಗಳು ಪ್ರಮುಖವಾಗಿ ಚಾಂದ್‌ಅಲೀ, ಮೊಹಿಂದರ್ ಭಾಬಿ, ತನ್ವೀರ್ ಕೌರ್ ಇವರ ಪಾತ್ರಗಳ ಮೂಲಕ ಮುತ್ತುಪ್ಪಾಡಿ ಎಂಬ ಗ್ರಾಮದ ಸಾಮಾಜಿಕ ಅರಿವು ಮತ್ತು ಮಾನವೀಯ ಅಂತಃಕರಣಗಳ ಬೆಸೆಯುವ ಚಿತ್ರಣವನ್ನು ಕಾದಂಬರಿಯಲ್ಲಿ ವಿಭಿನ್ನ ನೆಲೆಗಳ ಮೂಲಕ ಅಭಿವ್ಯಕ್ತಿಸುತ್ತಿದೆ. ಅಷ್ಟೇ ಅಲ್ಲದೆ ಆರೋಗ್ಯ, ಶಿಕ್ಷಣ, ಇಂತಹ ವರ್ತಮಾನದ ನೆಲೆ ಬೆಲೆಗಳನ್ನು ಹೆಡ್‌ಮಾಸ್ಟರ್ ನಾರಾಯಣಭಟ್ಟರು, ಸಂಜೀವ ಹೆಂಡತಿ ಗಿರಿಜಳು, ಡಾ॥ ಸಾವಿತ್ರಮ್ಮ, ಆಯಿಷಾ, ನಾಸಿರ್ ಹೆಂಡತಿಯಾದ ಕುಂಞಲಿಮ್ಮಾ ಇಂತಹ ಪಾತ್ರಗಳ ಮುಖಾಂತರ ಆರೋಗ್ಯದ ಕಡೆಗೂ ಬೊಳುವಾರರ ಮನಸ್ಸು ವಾಲಿರುವುದು ತಮ್ಮ ಬರಹಗಳ ಮೂಲಕ ಕಾದಂಬರಿಯಲ್ಲಿ ಕಾಣುತ್ತೇವೆ. ಇಡೀ ಕಾದಂಬರಿಯಲ್ಲಿ ಸಮಾಜದ ಅರುಹು ಕುರುಹನ್ನು ಮುಖ್ಯವಾಹಿನಿಗೆ ತೆರೆಯುವ ಮುಖಾಂತರ, ಧರ್ಮಗಳ ಬಗೆಗೆ ಹೆಚ್ಚು ಪ್ರಸ್ತಾಪ ಕಾಣುವ ನಿಟ್ಟಿನಲ್ಲಿ ಧಾರ್ಮಿಕ ವಸ್ತು,

ದ್ರವ್ಯಗಳನ್ನು ನಿರೀಕ್ಷಿಸುವ 'ಸ್ವಾತಂತ್ರ್ಯದ ಓಟ' ಕಾದಂಬರಿಯು ಹಿಂದೂ-ಮುಸ್ಲಿಂ ನಡುವಿನ ಬದುಕು, ಬವಣೆ, ಆಚಾರ, ವಿಚಾರ, ನಡೆ ನುಡಿ, ಮುಂತಾದ ಸಂಸ್ಕೃತಿಗಳು, ವೈಚಾರಿಕ ನೆಲೆಗಳಾಗಿ ತಿಳಿಸುವ ಕಾದಂಬರಿಯ ಜಾಣ್ಮೆ ಎನ್ನುವಂತಹದ್ದು.

ಬೊಳುವಾರರ ಅನುಭವದ ಗಟ್ಟಿತನವನ್ನು ಧರ್ಮಾತೀತವಾಗಿ ಪ್ರಮಾಣಬದ್ಧವಾಗಿ, ಇಡೀ ಸಮಾಜದ ಅವ್ಯವಸ್ಥೆಯನ್ನು ವಿರೋಧಿಸುವ ಮೂಲಕ ತಮ್ಮ ಬರಹಗಳಲ್ಲಿ ಸಾದರಪಡಿಸಿರುವುದು ಮೆಚ್ಚುವಂತಹದ್ದು.

ಅಡಿ ಟಿಪ್ಪಣಿ

೧. ಸಿ.ಎನ್. ರಾಮಚಂದ್ರನ್ – ಸಾಹಿತ್ಯ ವಿಮರ್ಶೆ, ಪು.ಸಂ. ೮೪

೨. ಸಿ.ಎನ್. ರಾಮಚಂದ್ರನ್ – ಸಾಹಿತ್ಯ ವಿಮರ್ಶೆ, ಪು.ಸಂ. ೮೪

೩. ಬೊಳವಾರ ಮಹಮ್ಮದ್ ಕುಂಞ – 'ಸ್ವಾತಂತ್ರ್ಯದ ಓಟ', ಪು.ಸಂ. ೧೩

೪. ಅದೇ., ಪು.ಸಂ. ೧೭

೫. ಅದೇ., ಪು.ಸಂ. ೨೦

೬. ಅದೇ., ಪು.ಸಂ. ೨೦

೭. ಅದೇ., ಪು.ಸಂ. ೨೨

೮. ಅದೇ., ಪು.ಸಂ. ೨೩

೯. ಅದೇ., ಪು.ಸಂ. ೨೩

೧೦. ಅದೇ., ಪು.ಸಂ. ೨೩

೧೧. ಅದೇ., ಪು.ಸಂ. ಪು.ಸಂ. ೨೭

೧೨. ಅದೇ., ಪು.ಸಂ. ೨೭

೧೩. ಅದೇ., ಪು.ಸಂ. ೩೦

೧೪. ಅದೇ., ಪು.ಸಂ. ೩೦

೧೫. ಅದೇ., ಪು.ಸಂ. ೩೨

೧೬. ಅದೇ., ಪು.ಸಂ. ೩೨

೧೭. ಅದೇ., ಪು.ಸಂ. ೩೩

೧೮. ಅದೇ., ಪು.ಸಂ. ೩೩

೧೯. ಅದೇ., ಪು.ಸಂ. ೩೩

೨೦. ಅದೇ., ಪು.ಸಂ. ೩೪

೨೧. ಅದೇ., ಪು.ಸಂ. ೩೪

೨೨. ಅದೇ., ಪು.ಸಂ. ೩೫

೨೩. ಅದೇ., ಪು.ಸಂ. ೩೫

೨೪. ಅದೇ., ಪು.ಸಂ. ೩೮

೨೫. ಅದೇ., ಪು.ಸಂ. ೩೯

೨೬. ಅದೇ., ಪು.ಸಂ. ೧೦೮೫

೨೭. ಅದೇ., ಪು.ಸಂ. ೮೯

೨೮. ಅದೇ., ಪು.ಸಂ. ೧೦೦

೨೯. ಅದೇ., ಪು.ಸಂ. ೧೦೦

೩೦. ಅದೇ., ಪು.ಸಂ. ೧೦೧

೩೧. ಅದೇ., ಪು.ಸಂ. ೧೦೧

೩೨. ಅದೇ., ಪು.ಸಂ. ೧೦೨

೩೩. ದೇವನೂರು ಮಹಾದೇವ - ಕುಸುಮಬಾಲೆ, ಪು.ಸಂ. ೨೨

೩೪. ಅದೇ., ಪು.ಸಂ. ೧೪

೩೫. ಅದೇ., ಪು.ಸಂ. ೯೬

೩೬. ಅದೇ., ಪು.ಸಂ. ೬೨೯

೩೭. ಅದೇ., ಪು.ಸಂ. ೨೮೧

೩೮. ಅದೇ., ಪು.ಸಂ. ೨೮೫

೩೯. ಅದೇ., ಪು.ಸಂ. ೨೮೮

೪೦. ಅದೇ., ಪು.ಸಂ. ೩೩೫

೪೧. ಅದೇ, ಪು. ೨೫೧

೪೨. ಅದೇ, ಪು. ೨೫೨

೪೩. ಅದೇ, ಪು. ೨೫೬

೪೪. ಅದೇ, ಪು. ೨೫೭

೪೫. ಅದೇ, ಪು. ೨೫೮

೪೬. ಅದೇ

ಅಧ್ಯಾಯ - ೫

ಕಾದಂಬರಿಯ ಅಭಿವ್ಯಕ್ತಿ,/ಶೈಲಿ, ಭಾಷೆ, ತಂತ್ರ

ಭಾಷೆ ತಂತ್ರಗಾರಿಕೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಕಲಾತ್ಮಕ ಗುಣವನ್ನು ಅಭಿವ್ಯಕ್ತಿಸುವ ಬೋಳುವಾರರ ಕೃತಿಯಲ್ಲಿ ಬಹಳ ಸೂಕ್ಷ್ಮ ರೀತಿಯಲ್ಲಿ ಬಳಸಿರುವುದನ್ನು ಕಾಣುತ್ತೇವೆ. ಹಾಗೂ ವಸ್ತು ವಿಷಯ ಘಟನೆಗಳಿಗೆ ಪಾತ್ರಗಳ ಮೂಲಕ ಭಾಷೆ, ತಂತ್ರವನ್ನು ಅಭಿವ್ಯಕ್ತಿಸಿರುವ ಕ್ರಮ ವಿಶಿಷ್ಟವಾದದ್ದು. ಉರ್ದು ಮಿಶ್ರಿತ ಕನ್ನಡ ಭಾಷಾ ಸ್ವರೂಪವನ್ನು ಪಡೆದ ಬೊಳುವಾರರ ಬರಹ ಔಚಿತ್ಯಪೂರ್ಣವಾದದ್ದು. ಅಷ್ಟೇ ಅಲ್ಲದೆ ಇಂಗ್ಲೀಷ್ ಭಾಷೆಯು ಅಲ್ಲಲ್ಲಿ ಮಿಶ್ರಿತವಾಗಿ ಸಮಾಜದ ಅಭಿವೃದ್ಧಿಗೆ ಆಧುನಿಕತೆಯನ್ನು ಗುರುತಿಸುವ ನಿಟ್ಟಿನಲ್ಲಿ ಲೇಖಕರು ಉರ್ದು, ಕನ್ನಡ, ಇಂಗ್ಲಿಷನ್ನು ಒಂದೇ ಸಮುದ್ರದಲ್ಲಿ ತೇಲುವ ದೋಣಿಗಳಂತೆ, ಸಹೃದಯರಿಗೆ ಭಾಷೆಯ ಪರಿಚಯವನ್ನು ನೀಡಿ ಸೃಜನಾತ್ಮಕ ಕಲೆಯನ್ನು ಅಭಿವ್ಯಕ್ತಿಸಿರುವುದನ್ನು ಕಾಣುತ್ತೇವೆ.

ಚಾಂದ್ ಅಲೀಯ ಭಾಷಾ ಸ್ವರೂಪವು ಮಿಶ್ರಣಗೊಳ್ಳುವ ಬಗೆಗೆ ಗಮನಿಸಿದರೆ "ನಿಮ್ಮ ಹತ್ರ ಇರುವ ದೋಸೆ ಅರೆಯುವ ಬೆಳ್ತಿಗೆ ಅಕ್ಕಿಯ ಸ್ವಲ್ಪ ಸ್ಯಾಂಪಲ್ಲನ್ನು ಕಾಗದದಲ್ಲಿ ಕಟ್ಟಿಕೊಡಿ. ಸುಮತಿಯಕ್ಕನತ್ರ ತೋರಿಸಿ ಅವಳು ಆಗಬಹುದು ಅಂತ ಹೇಳಿದ್ರೆ ನಾಳೆ ಬರ್ತೆನೆ" ಎನ್ನುವಲ್ಲಿ ಭಾಷೆಯ ಸೂಕ್ಷ್ಮ ಹಿಡಿತವನ್ನು ಗಮನಿಸಬಹುದು. ಹಾಗೆಯೇ ಲತೀಫ್ ಮಾಸ್ಟರ್‌ನ ಹಾಸ್ಯದ ಮಾತಿನ ಸ್ವರೂಪ "ಪಂಡುಂ ಪಾಡು, ತೊಂಡುಂ ಕೋಲು, ಅಂತ ಬೇಡ್ಲಿಕ್ಕೆ ಹೋಗ್ಬೇಕಾದೀತು. ಆದ್ರಿಂದ ತಡ ಮಾಡ್ದೆ ಆ ಮನೆಯ ಬಗ್ಗೆ ಈಗ್ಲೇ ತೀರ್ಮಾನ ತೆಗೆದುಕೊಳ್ಳುವುದು ಜಮಾತಿನ ಜವಾಬ್ದಾರಿ."[೧] ಎನ್ನವ ಭಾಷೆಯ ಹಿಡಿತವನ್ನು ಸೂಕ್ಷ್ಮಿಸಬಹುದು. ಹಾಗೇ ಲತೀಫ್ ಮಾಸ್ಟರ್‌ನ ಹಾಸ್ಯದ ಮಾತಿನ ಸ್ವರೂಪ "ಪಂಡುಂ ಪಾಡು, ತೊಂಡುಂ ಕೋಲು, ಅಂತ ಬೇಡ್ಲಿಕ್ಕೆ ಹೋಗ್ಬೇಕಾದಿತು. ಆದ್ರಿಂದ ತಡ ಮಾಡ್ದೆ ಆ ಮನೆಯ ಬಗ್ಗೆ ಈಗ್ಲೇ ತೀರ್ಮಾನ ತೆಗ್ದುಕೊಳ್ಳುವುದು ಜಮಾತಿನ ಜವಾಬ್ದಾರಿ"[೨] ಎನ್ನುತ್ತ ಖಾದ್ರಿ ಬ್ಯಾರಿಯವರು ಬಾಗಿ ತೆಗೆಯಲಿಲ್ಲವಾದರೂ ತುಟಿಗಳೆಡೆಯಲ್ಲಿ ಸಣ್ಣ ನಗುವಿಗೆ ಪಾತ್ರರಾಗುತ್ತಾರೆ. ಅಷ್ಟರಲ್ಲಿ ಮತ್ತೆ "ಆ ಮನೆಯ ಬಗ್ಗೆಯೂ ಅಥವಾ ಮನೆಯಲ್ಲಿರುವ ಮನುಷ್ಯರ ಬಗ್ಗೆಯೂ"[೩] ಲತೀಫ್ ಮಾಸರ್ತ ಬಾಯಿಯಿಂದ ತಪ್ಪಿಸಿಕೊಂಡು ಸದ್ದು ಮಾಡಿತು. ಖಾದ್ರಿ ಬ್ಯಾರಿಯವರ ಮುಖದಲ್ಲಿ ಈಗ ನಗು ಸ್ಪಷ್ಟವಾಗಿ ಅರಳಿತು. ಆದರೂ ತಮಾಷೆ ನೋಡುವವರಂತೆ ಸುಮ್ಮನೆ ಕುಳಿತು ಹಾಸ್ಯದ ಪ್ರತಿಭೆಯನ್ನು ಪೋಸ್ಟ್ ಮಾಸ್ತರರಾದ ಲತೀಫ್, ಖಾದ್ರಿ ಬ್ಯಾರಿ, ಪೊಡಿಯ, ಇಮಾಮ್ ಇಬ್ರಾಹಿಮ್ ಮೌಲವಿ, ಮತ್ತಿತರರ ನಡುವೆ ಮುತ್ತುಪ್ಪಾಡಿ ಗ್ರಾಮದ ಆಸುಪಾಸಿನ ಪ್ರದೇಶಗಳ ಭಾಷಾ ವೈಖರಿ ವಿಶಿಷ್ಟವಾಗಿದೆ. ಮತ್ತೊಂದು

[illegible]

ವ್ಯಂಗದ ಸ್ವರೂಪವು ಪೊಡಿಯ ಮತ್ತು ಉಸ್ಮಾನ್‌ರವರ ಸಂಭಾಷಣೆ "ಆದ್ರೂ ಹಿರಿತನಕ್ಕೆ ಒಂದು ಬೆಲೆ ಅಂತ ಇರಬೇಕಲ್ಲಾ"[೪] ಪೊಡಿಯೊಬ್ಬನವರು ಸೋಲೊಪ್ಪಿಕೊಳ್ಳಲು ಸಿದ್ಧರಿರಲಿಲ್ಲ. "ಖಂಡಿತಾ ಇರಬೇಕು. ನೀವು ದೊಡ್ಡವರು, ಜಮಾತಿನ ಹಿರಿಯ ಸದಸ್ಯರು. ಹೇಳಿ ನಿಮ್ಮ ಅಭಿಪ್ರಾಯವೇನೊ"[೫] ಮುರಕಲ್ಲಿ ಕಡಿಯುವುದರ ಜೊತೆಗೆ ಖಬರ್ ಗುಮಡಿ ತೋಡುವುದರಲ್ಲಿಯೂ ರುಸ್ತುಂ ಆಗಿರುವ ಉಸ್ಮಾನ್ ವ್ಯಂಗ್ಯವಾಗಿ ಪ್ರಶ್ನಿಸುವ ಭಾಷಾ ಪರಿಯನ್ನು ಕಾದಂಬರಿಯು ವೈಶಿಷ್ಟತೆಯನ್ನು ಗುರುತಿಸುತ್ತದೆ. ಹೀಗೆ ಭಾಷಾ ಶೈಲಿಯ ವ್ಯಂಗ್ಯ, ವಿಡಂಬನೆ ಹಾಸ್ಯದ ರೂಪವನ್ನು ಪಡೆದಿರುವುದು ಮತ್ತು ಶೈಲಿಯ ತಂತ್ರಗಾರಿಕೆ ಕನ್ನಡದಲ್ಲಿ ಅಪರೂಪವಾಗಿ ಗುರುತಿಸಿಕೊಂಡಿರುವುದು ಗಮನಾರ್ಹವಾದದ್ದು. ಸಂದರ್ಭಕ್ಕೇ ತಕ್ಕಂತೆ ಪ್ರಾದೇಶಿಕ ಭಾಷೆಯ ಸೊಗಡನ್ನು ಬೊಳುವಾರರ ಬೃಹತ್ ಕಾದಂಬರಿಯಾದ "ಸ್ವಾತಂತ್ರ್ಯದ ಓಟ"ದ ಬರಹದ ಸ್ವರೂಪವನ್ನು ಸವಿಸ್ತಾರವಾಗಿ ಗಮನಿಸಬಹುದು.

ಕಾದಂಬರಿಯಲ್ಲಿ ಲೇಖಕರು ಗಡಿ ಪ್ರದೇಶದ ಆಸುಪಾಸಿನಲ್ಲಿರುವಂತ ದೆಹಲಿಯ ನಿಜಾಮುದ್ದೀನ್ ದರ್ಗಾದಿಂದ ನಾಲ್ಕು ಮೈಲು ಪೂರ್ವಕ್ಕಿದ್ದ ಬಟ್ಟೆ ಗಿರಣಿಯ ಆವರಣದಲ್ಲಿ ಸಿರಿವಂತ ದೇಶಪ್ರೇಮಿಯೊಬ್ಬರು ತೆರೆದಿದ್ದ 'ನಿರಾಶ್ರಿತರ ಶಿಬಿರ' ಇಂತಹದ್ದೊಂದು ಕೂಟವನ್ನು ದೇಶದ ಜನರ ಉಳುವಿಗಾಗಿ, ರಕ್ಷಣೆಗಾಗಿ, ಇಂತಹ ಶಿಬಿರವನ್ನು ಬೆಳೆಸಿ, ಉಳಿಸಿ, ಗಡಿಪ್ರದೇಶದ ಅಸಾಹಾಯಕ ಸ್ಥಿತಿಯಲ್ಲಿ ಬಳಲುತ್ತಿರುವ ಸ್ವದೇಶಿ ಜನರನ್ನು ತಮ್ಮ ತಮ್ಮ ನಾಡಿಗೆ ಸುರಕ್ಷಿತಾಗಿ ಕಳುಹಿಸಲು ಹಮ್ಮಿಕೊಂಡಿರುವ ಹಾಗೆ ಜವಾಬ್ದಾರಿತನದಿಂದ ನಡೆಸುತ್ತಿರುವ ಒಬ್ಬ ಶ್ರೀಮಂತ ದೇಶಪ್ರೇಮಿಯ ಅಂತಃಕರಣ ಬಹಳ ವಿಶಿಷ್ಟವಾದುದ್ದು.

ಈ ಹಿನ್ನೆಲೆಯಲ್ಲಿ ಬೊಳುವಾರರವರು ಈ ಶಿಬಿರದೊಳಗೆ "ಬೋಲೋ ಭಾರತ್ ಮಾತಕೀ....., ವಂದೇ.... ಮಾತರಂ."[೬] ಎಂಬ ಸೂಕ್ತಿಯಿಂದ ಪ್ರಾರಂಭಗೊಂಡ ಕಾದಂಬರಿಕಾರರನ್ನು ತಂತ್ರಕಾರಿಕೆಯ ಸಹೃದಯರಿಗೆ ಮೆಚ್ಚುಗೆ ವ್ಯಕ್ತಪಡಿಸುವಂತಹ್ದು. ಇಡೀ ಕಾದಂಬರಿಯಲ್ಲಿ ಹಿಂದೂಸ್ತಾನದ ಸಿಖ್ ಹೆಣ್ಣು ಮಕ್ಕಳಿಬ್ಬರನ್ನು ಪಾಕಿಸ್ತಾನದ ಮುಸ್ಲಿಮ್ ಯುವಕ ಈ ಮೂವರು ಇಡೀ ಕಾದಂಬರಿಯನ್ನು ಜೀವಂತಗೊಳಿಸುವ ತಂತ್ರ ಹೂಡುವ ಕ್ರಮವನ್ನು ನಿಚ್ಚಳವಾಗಿ ಕಾಣುತ್ತೇವೆ. ಇವರಲ್ಲಿ ಬದುಕಿನ ಕ್ರಮ ವಿಭಿನ್ನತೆ ಇದ್ದರೂ ಕೂಡ ಹೊಂದಾಣಿಕೆ ಸ್ವಭಾವ ವಿಶೇಷವಾಗಿ ಗುರುತಿಸಲ್ಪಡಲಾಗಿದೆ. ಮೊಹಿಂದರ್ ಭಾಬಿ ಮತ್ತು ತನ್ವೀರ್‌ಕೌರ್ ಅವರ ಆಭರಣಗಳನ್ನು ಬಚ್ಚಿಡುವ ಸ್ಥಿತಿಯನ್ನು ಗಮನಿಸಿದರೆ, ಉತ್ತಮ ಬದುಕಿನ ಕ್ರಮ ಬರಲಾರದು. ಬರುವುದು ಸಂದರ್ಭಕ್ಕೆ ಅನ್ವಯವಾಗುವ, ಸ್ಥಿತಿಗೆ ತಕ್ಕಂತೆ ನಂಬಿಕೆಯುಳ್ಳ, ಆಯಾಯ ಕ್ಷಣದ ಬದುಕಿನ ಕ್ರಮ ಮಾತ್ರ. "ಒಡವೆಗಳನ್ನೆಲ್ಲ ಒಂದೇ ಗಂಟುಕಟ್ಟಿಕೊಟ್ಟರೆ ತಾನು ಬಚ್ಚಿಟ್ಟುಕೊಂಡು ಕಾಪಾಡಬಲ್ಲೆ"[೭] ಎನ್ನುವ ರಾಜಿಂದರ್ ಸಿಂಗ್

ಅವರ ವಾದಕ್ಕೆ ಪ್ರತಿವಾದವಾಗಿ "ಬೇರೆ ಬೇರೆ ಸಣ್ಣ ಸಣ್ಣ ಗಂಟುಗಳಲ್ಲಿ ಒಡವೆಗಳನ್ನು ಇರಿಸಿ ಮನೆಯ ಸದಸ್ಯರೆಲ್ಲರು ತಮ್ಮ ದೇಹಕ್ಕೆ ಕಟ್ಟಿಕೊಂಡು, ತೊಟ್ಟುಕೊಳ್ಳುವ ಬಟ್ಟೆಗಳಲ್ಲಿ ಮರೆಮಾಡುವುದು ಒಳ್ಳೆಯದು ಎಂಬುದು ಹಿರಿಯಣ್ಣನ ಪ್ರತಿವಾದದ ಸಲಹೆ ಇಂತಹ ವಾಗ್ವಾದಗಳ ನಡುವೆ ತನ್ವೀರಳ ಪ್ರತಿಕ್ರಿಯೆ ಒಂದರ ಮೇಲೊಂದರಂತೆ ಮೂರ್ನಾಲ್ಕರಷ್ಟು ಕುರ್ತಾ ಪೈಜಾಮಗಳನ್ನು ಧರಿಸಿ ಅವುಗಳ ಮರೆಯಲ್ಲಿ ಎಲ್ಲರೂ ಸ್ವಲ್ಪ ಸ್ವಲ್ಪ ಒಡವೆಗಳನ್ನು ಬಚ್ಚಿಟ್ಟುಕೊಂಡರೆ ಹೇಗೆ?"[೮] ಎಂಬ ತನ್ವೀರಳ ಪ್ರಶ್ನೆಗೆ ಎಲ್ಲರ ಸಮ್ಮತಿಯೂ ಸಿಕ್ಕಿತ್ತು.

ಇಂತಹ ಪ್ರಸಂಗವನ್ನು ಗಮನಿಸಿದರೆ ಭಾಷೆ, ತಂತ್ರಗಾರಿಕೆ, ಅದರ ಶೈಲಿ, ಇಂತಹವುಗಳಲ್ಲಿ ಕಾದಂಬರಿಯ ಒಳ ಹೋರಣ ತಿರುಳನ್ನು ಲೇಖಕರು ತಮ್ಮ ಕಾದಂಬರಿಯಲ್ಲಿ ಹಲವು ಸನ್ನಿವೇಶಗಳ ನಡುವೆ ಪ್ರಸ್ತಾಪಿಸುವ ಬಗೆಗೆ ತಿಳಿಯಲಾಗುತ್ತದೆ. ಊರ್ದು ಮಿಶ್ರಿತ ಕನ್ನಡ ನಡುವೆ ಆಯಾಯ ಸಂಸ್ಕೃತಿಯ ಉಡುಪುಗಳನ್ನು ಸಾಂಪ್ರದಾಯಿಕವಾಗಿ ತಿಳಿಸಿರುವ ತಂತ್ರಗಾರಿಕೆಯನ್ನು ಗಮನಿಸಬಹುದಾಗಿದೆ. ಕಾದಂಬರಿಯಲ್ಲಿ ಮೂಡಿರುವ ತಂತ್ರಗಾರಿಕೆಯನ್ನು ಗಮನಿಸಬಹುದಾಗಿದೆ. ಕಾದಂಬರಿಯಲ್ಲಿ ಮೂಡಿರುವ ತಂತ್ರಗಾರಿಕೆ ಚಾಂದ್ ಅಲೀ ಪಾಕಿಸ್ತಾನದವನಾದರು ಮಾನವೀಯತೆಯ ಗುಣವುಳ್ಳ–ವನಾಗಿರುತ್ತಾನೆ. ಇಡೀ ಕಾದಂಬರಿಯನ್ನು ಚಾಂದ್ ಅಲೀ ಸವಿಸ್ತಾರವಾಗಿ ಹೇಳಿರುವ ಕಥೆ, ಲೇಖಕರು ಬರೆದಿರುವ ಸ್ವಾತಂತ್ರ್ಯದ ಓಟ ಕಾದಂಬರಿಯ ಜೀವನಾಡಿಯಾಗಿ ಪ್ರಾರಂಭದಿಂದ ಅಂತ್ಯದವರೆಗೂ ನಿರಂತರವಾಗಿ ಘಟಿಸುವ ಹಲವು ಸನ್ನಿವೇಶಗಳನ್ನು ಲೇಖಕರು ಚಾಂದ್ ಅಲೀಯೊಡನೆ ಪರಸ್ಪರ ಮಾತುಕತೆಗಳಲ್ಲಿ ಬೆಸೆದು, ಇಡೀ ಕಾದಂಬರಿಯಲ್ಲಿ ಅಲೀಯ ಬದುಕಿನ ಚಿತ್ರನವನ್ನು ಸಮಗ್ರವಾಗಿ ಹೇಳಲ್ಪಟ್ಟು, ಹಲವಾರು ಘಟನಾವಳಿಗಳು, ನಡೆದಿರುವ ಮಾರ್ಮಿಕ ಸಂಘರ್ಷಗಳು, ವಿಭಿನ್ನ ಸ್ಥಿತಿಗತಿಗಳು ಎದುರಾಗುವ ಪ್ರಸಂಗಗಳನ್ನು ಕಾಣುತ್ತೇವೆ.

ಲೇಖಕರು ಬರೆಹಗಳನ್ನು ಪ್ರಸ್ತುತಕ್ಕೆ ತೀರ ಹತ್ತಿರವಾಗುವಂತೆ ಘಟನೆ ಸಂಘರ್ಷ, ಚಿಂತನೆ ಬದಲಾದ ಕಾರಣದಿಂದ ರಚಿಸಿರಬಹುದು. ಹಾಗೆಯೇ ಮಾನವೀಯ ಅಂತಃಕರಣ, ಮನುಷ್ಯತ್ವವನ್ನು ಪರಸ್ಪರದಿಂದ ಹೊಂದಿಕೊಳ್ಳುವ ನಿಟ್ಟಿನಲ್ಲಿ ಧರ್ಮಾತೀತ ನೆಲೆಯಲ್ಲಿ ವಾಸ್ತವಕ್ಕೆ ಹತ್ತಿರವಾಗಿ, ಭಾರತೀಯ ಧರ್ಮ, ಧರ್ಮಗಳ ನಡುವಿನ ಸಂಸ್ಕೃತಿ, ಆ ಸಂಸ್ಕೃತಿಯ ಒಳಗಿನ ಅರುಹು–ಕುರುಹುಗಳನ್ನು ಸಮಾಜಕ್ಕೆ ಮುಖಾಮುಖಿಗೊಳಿಸುವ ಮೂಲಕ ಬದುಕಿನ ಚಹರೆಗಳನ್ನು ಲೇಖಕರು ಸ್ವ ಅರ್ಥಪೂರ್ಣವಾಗಿ ಸಮಾಜಕ್ಕೆ ಪರಿಚಯಿಸಲಾಗಿದೆ. ಅಲೀಯ ಬದುಕಿದ ಚಿತ್ರಣವನ್ನು ಉರ್ದು ಮಿಶ್ರಿತ ಕನ್ನಡ ನಡುವಿನ ನಗರೀಕರಣದ ಆಂಗ್ಲೋ ಭಾಷೆ ಹಾಗು ಜನರ ಬದುಕಿನ ಶೈಲಿ, ಉನ್ನತ ತಂತ್ರಗಾರಿಕೆಯನ್ನು ಬೊಳುವಾರರು ತಮ್ಮ ಕಾದಂಬರಿಯನ್ನು ಪ್ರಾರಂಭಿಸುವ ರೀತಿ ನೀತಿಗಳನ್ನು ಗಮನಿಸಿದರೆ,

ಸಮಾಜಪರ ಕಾಳಜಿ, ಬದುಕಿನ ಶೈಲಿ ಆಯಾಯ ಜನರ ಭಾಷೆ ಇಂತಹವುಗಳನ್ನು ಇಟ್ಟುಕೊಂಡು ತಮ್ಮ ಬರೆಹಗಳಲ್ಲಿ ತೊಡಗಿಸಿಕೊಂಡಿರುವ ಲೇಖಕರ ತಂತ್ರಗಾರಿಕೆ ಮೆಚ್ಚುವಂತಹದ್ದು.

ವಿಶೇಷವಾಗಿ ಮುತ್ತುಪ್ಪಾಡಿ ಎಂಬ ಗ್ರಾಮದಲ್ಲಿ ಹಿಂದೂ-ಮುಸ್ಲಿಂ ಸಂಸ್ಕೃತಿಯನ್ನು ಗಮನಿಸಿದರೆ "ನಾನು ಕೇಳಿದ್ದು ನಿಮ್ಮನ್ನೇ" ಎಂದು ಸುಮತಿ ಪೊರಕೆಯನ್ನು ಅಲ್ಲೇ ನೆಲದ ಮೇಲಿರಿಸಿ, ಬಾಲ್ದಿಯ ನೀರಿನಲ್ಲಿ ಕೈ ತೊಳೆದುಕೊಂಡು ಸೊಂಟಕ್ಕೆ ಸಿಕ್ಕ ಸಿದ್ದ ಸೀರೆಯ ಕುಂಚನ್ನು ಬಿಡಿಸಿ ಸೆರಗಿನ ತುದಿಯಿಂದ ಮುಖ ಒರಸಿಕೊಳ್ಳುತ್ತಾ ಅಂಗಳದಿಂದ ಜಗಲಿಗೇರಿದವಳು. ಹೊಟ್ಟೆ ತುಂಬಿಸುವ ವಿಚಾರದಲ್ಲಿ ಉದಾಸೀನ ತೋರಿಸಿದ್ರೆ ಉಪವಾಸದಿಂದ ಇರಬೇಕಾದಿತು. ಹಾಂ..."[೯] ಎಂದಳು. ಈ ಪ್ರಸಂಗದ ಸನ್ನಿವೇಶವು ಸಂಸ್ಕೃತಿಯ ಒಳತಿರುಳನ್ನು ಬಿಂಬಿಸುವ ಚಾತುರ್ಯತೆಯನ್ನು ಕಾದಂಬರಿಯದ್ದಕ್ಕೂ ತಿಳಿಸಲ್ಪಡುತ್ತಾರೆ. "ಅವಲಕ್ಕಿ ಕಡ್ಲೆ ಉಪ್ಪರಿಯ ಜೊತೆಗೆ ಚಹದ ಗ್ಲಾಸನ್ನೂ ಹಿಡಿದುಕೊಂಡು ಹಜಾರಕ್ಕೆ ಬಂದ ಕೈಜಮ್ಮನವರು 'ಒಳಗೆ ಬಾ ಇವನೇ' ಎಂದು. ಅಲ್ಲಿಂದಲೇ ಚಾಂದ್ ಅಲೀಗೆ ಆಹ್ವಾನ ನೀಡಿದರು."[೧೦] ಇಂತಹ ಸಂಸ್ಕೃತಿಯು ಕೈಜಮ್ಮಳಿಗೆ ಹುಟ್ಟಿನಿಂದಲೇ ಬೆಳೆದು ಬಂದಿರುವುದನ್ನು ಚಾಂದ್ ಅಲೀ ಲೇಖಕರೊಂದಿಗೆ ವಿವರವಾಗಿ ಹೇಳಲ್ಪಡುತ್ತಾನೆ. ಕಾದಂಬರಿಯ ಒಳಗೂ ಸಂಸ್ಕೃತಿಯನ್ನು ಸೂಚಿಸಿರುವ ತಂತ್ರಗಾರಿಕೆ ಕಾದಂಬರಿಯಲ್ಲಿ ಹೆಗ್ಗುರುತಾಗಿದೆ.

ಹೀಗೆ ಸಮಾಜದ ಕೆಟ್ಟ ವ್ಯವಸ್ಥೆಯ ವಿರುದ್ಧ ಲೇಖಕರು ಕೃತಿಯಲ್ಲಿ ಹಲವು ಪಾತ್ರಗಳ ಮೂಲಕ ಪ್ರತಿರೋಧದಿಂದ ಮಾತನ್ನಾಡಿಸುವ ಮತ್ತು ಜೀವ ತುಂಬಿರುವ, ಬದುಕಿನ ಶೈಲಿಯನ್ನು ಮುತ್ತುಪ್ಪಾಡಿ ಎಂಬ ಗ್ರಾಮದ ಹಂದರದಲ್ಲಿ ಕಟ್ಟಿಕೊಟ್ಟಿರುವ ತಂತ್ರಗಾರಿಕೆ ವಿಶಿಷ್ಟವಾದದ್ದು. ಹೀಗೆ ಇಡೀ ಕಾದಂಬರಿಯ ಕಥೆಗಳನ್ನು ಮುತ್ತುಪ್ಪಾಡಿಯ ಆಸುಪಾಸಿನಲ್ಲಿ ಹೆಣೆದು, ಸಮಾಜದ ಅವ್ಯವಸ್ಥೆಯ ಬಗೆಗೆ ಗಡಿಪ್ರದೇಶದ ಸಂಕೋಲೆ ಜಾತಿ, ಧರ್ಮ, ಮಹಿಳೆ, ಸಂಸ್ಕೃತಿ, ಮುಂತಾದವುಗಳನ್ನು ಆರು ಅಧ್ಯಾಯ ಮಾಡಿಕೊಂಡು ತಮ್ಮ ಮಾತೃಭಾಷೆ ಉರ್ದು ಆದರೂ, ಕನ್ನಡ ಇಂಗ್ಲೀಷ್ ಮತ್ತಿತ್ತರ ಆಧುನಿಕತೆಯ ಭಾಷೆಗಳಲ್ಲಿ ಮಿಶ್ರಣಗೊಳಿಸಿ, ಕಾದಂಬರಿಯನ್ನು ಕಟ್ಟಿಕೊಟ್ಟಿರುವುದನ್ನ ಗಮನಿಸಿದರೆ ಲೇಖಕರ ಪ್ರತಿಭೆ ತಂತ್ರಗಾರಿಕೆ ಬೇರೆ ಲೇಖಕರಿಗಿಂತ ವಿಶೇಷವಾಗಿ ಕಾಣುತ್ತದೆ.

ಅಡಿ ಟಿಪ್ಪಣಿಗಳು

೧. ಬೊಳವಾರ ಮಹಮ್ಮದ್ ಕುಂಞ – 'ಸ್ವಾತಂತ್ರ್ಯದ ಓಟ', ಪು ಸಂ. ೧೫೬.

೨. ಅದೇ ಪುಟ, ಸಂ. ೧೪೩

೩. ಅದೇ ಪುಟ, ಸಂ. ೧೪೩

೪. ಅದೇ ಪುಟ, ಸಂ. ೧೯

೫. ಅದೇ ಪುಟ, ಸಂ. ೧೯

೬. ಅದೇ ಪುಟ, ಸಂ. ೧೧೦

೭. ಅದೇ ಪುಟ, ಸಂ. ೧೧೦

೮. ಅದೇ ಪುಟ, ಸಂ. ೧೫೧

೯. ಅದೇ ಪುಟ, ಸಂ. ೫೦

೧೦. ಅದೇ ಪುಟ, ಸಂ. ೮೫

ಅಧ್ಯಾಯ – ೬

ಉಪಸಂಹಾರ

ಆಧುನಿಕ ಕನ್ನಡ ಸಾಹಿತ್ಯದಲ್ಲಿ ನವೋದಯ, ನವ್ಯ, ಪ್ರಗತಿಶೀಲ, ಬಂಡಾಯ, ದಲಿತ, ಮುಂದುವರಿದಂತೆ ಸ್ತ್ರೀವಾದಿ ಮತ್ತು ಮುಸ್ಲಿಂ ಸಾಹಿತ್ಯ ಕಂಡುಬರುತ್ತದೆ. ಆಯಾಯ ಧರ್ಮದ ಸಾಹಿತ್ಯಕ್ಕೆ ಅನ್ವಯಿಸುವಂತೆ ಕಾವ್ಯ, ಕಥೆ, ನಾಟಕ, ಕಾದಂಬರಿ ಇವು ಪ್ರಮುಖವಾಗಿ ಸಮಾಜದ ಮುಖ್ಯವಾಹಿನಿಗೆ ತೆರೆದುಕೊಂಡಿದೆ. ಎಪ್ಪತ್ತರ ದಶಕದ ಮುಸ್ಲಿಂ ಸಂವೇದನೆಯ ಲೇಖಕರು ಮುಸ್ಲಿಂ ಜೀವನದ ಬದುಕು ಬವಣೆಯನ್ನು ಸಾಹಿತ್ಯ ಕ್ಷೇತ್ರಕ್ಕೆ ಕೊಟ್ಟಿದ್ದಾರೆ. ಸಾಂಸ್ಕೃತಿಕವಾಗಿಯೂ ಸಾಹಿತ್ಯಕ್ಕೆ ಅವರ ಕೊಡುಗೆ ಇದೆ. ಅದರಲ್ಲಿ ಪ್ರಮುಖರಾದವರು ಸಾರಾ ಅಬೂಬಕ್ಕರ್, ಫಕೀರ್ ಮಹಮ್ಮದ್ ಕಟ್ಪಾಡಿ, ಬಾನು ಮುಷ್ತಾಕ್, ಅಬ್ದುಲ್ ರಶೀದ್, ಮುಮ್ತಾಜ್ ಬೇಗಂ ಹಾಗೂ ರಹಮತ್ ತರೀಕೆರೆ, ರಂಜಾನ್ ದರ್ಗಾ ಅವರಂತೆ ಪ್ರಮುಖರೆನ್ನಿಸಿರುವ ಸತ್ವಯುಳ್ಳ ಬರೆಹಗಾರರಾದ ಬೊಳುವಾರು ಮಹಮದ್ ಕುಂಞಗೆ ಅವರು ಕೃತಿಗಳು ಅಪಾರ ಜನಪ್ರಿಯತೆಗಳಿಸಿವೆ. ಅವರ ಸಣ್ಣ ಕಥೆಗಳು, ಕಾದಂಬರಿಗಳು, ನಾಟಕಗಳು, ಜೀವನ ಚರಿತ್ರೆಯಂತಹ ಪ್ರಕಾರಗಳಲ್ಲಿ ಸಾಹಿತ್ಯ ಕೃಷಿ ಮಾಡಿದ್ದಾರೆ. ಕಾದಮಬರಿಯಲ್ಲಿ ಗಾತ್ರದ ದೃಷ್ಟಿಯಿಂದ ಬೃಹತ್ ಆಗಿರುವ ಈ ಕೃತಿ ಕಥಾ ವಸ್ತುವಿನ ದೃಷ್ಟಿಯಿಂದಲೂ ಅತ್ಯಮತ ಕುತೂಹಲದಿಮದ ಕೂಡಿದೆ. ಆದ್ದರಿಂದ 'ಸ್ವಾತಂತ್ರ್ಯದ ಓಟ' ಎಂಬ ಕಾದಂಬರಿಯನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿದ್ದು **ಪೀಠಿಕೆಯಲ್ಲಿ** ಸ್ಪಷ್ಟಪಡಿಸಿದ್ದೇನೆ.

ಈ ಅಧ್ಯಾಯನಕ್ಕೆ ಆರು ವಿಭಾಗಗಳನ್ನು ಮಾಡಿಕೊಂಡು ವಿಶ್ಲೇಷಿಸಲಾಗಿದೆ.

ಮೊದಲ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ ಸ್ವರೂಪ ಮತ್ತು ವ್ಯಾಪ್ತಿಯನ್ನು ಲೇಖಕರು ನಮ್ಮ ಕಾಲದ ಒಂದು ಮಹಾಕಥನದ ಪ್ರತಿಭೆಯನ್ನು ಸಮಾಜದ ಮುಖ್ಯವಾಹಿನಿಗೆ ಧರ್ಮಾತೀತ ನೆಲೆಗಳನ್ನು ತಮ್ಮ ಬರೆಹಗಳ ಮೂಲಕ ಮಹಿಳಾ ಪ್ರಜ್ಞೆ ಆರೋಗ್ಯ, ಶಿಕ್ಷಣ, ಸಮಾಜದ ಬದುಕು ಬವಣೆಗಳನ್ನು ಅರಿತು ಸಮಾಜದ ಹಲವು ಸಮಸ್ಯೆಗಳನ್ನು ಅವರ ಬೃಹತ್ ಕಾದಂಬರಿಯಾದ 'ಸ್ವಾತಂತ್ರ್ಯದ ಓಟ'ದಲ್ಲಿ ಸಹೃದಯರ ಮನ ಮಿಡಿಯುವಂತೆ ಈ ಅಧ್ಯಾಯದಲ್ಲಿ ತಿಳಿಸಲಾಗಿದೆ.

ಎರಡನೇ ಅಧ್ಯಾಯದಲ್ಲಿ ಕಾದಂಬರಿ ಎಲ್ಲ ಆಧುನಿಕ ಸಾಹಿತ್ಯಗಳಲ್ಲಿರುವಂತೆ ಕನ್ನಡದಲ್ಲಿಯೂ ಅತ್ಯಂತ ಲೋಕ ಪ್ರಿಯವಾದ ಸಾಹಿತ್ಯ ಪ್ರಕಾರವಾಗಿ ಬೆಳೆದುಬಂದಿದೆ. ೧೯ನೇ ಶತಮಾನದಲ್ಲಿ ಪ್ರಾರಂಭವಾದ ಕಾದಂಬರಿ ಸಾಹಿತ್ಯವು ಅದ್ಭುತವಾಗಿ ಪ್ರಸಿದ್ಧಿಯನ್ನು

[illegible]

[illegible]
[illegible]
[illegible]

[illegible]
[illegible]
[illegible]
[illegible]

ಬಂದಿತ್ತು [illegible]
[illegible]

[illegible]
[illegible]
ದಂಡಿಯಿಂದಲೇ [illegible]
[illegible]
[illegible]
[illegible]

[illegible]
[illegible]
[illegible]
[illegible]

[illegible]
[illegible]
[illegible]

ಹೊಂದಿದೆ. ಇಂಗ್ಲೀಷ್ ಕಾದಂಬರಿಕಾರರ ಪ್ರಭಾವಕ್ಕೆ ನಮ್ಮ ದೇಶ ಒಳಗಾಗಿ ಅದರ ಪರಿಣಾಮ ಬಂಗಾಳ ಮತ್ತು ಮಹಾರಾಷ್ಟ್ರಗಳಲ್ಲಿ ಮೊದಲು ಕಾಣಬಹುದು. ಮುಂದೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಎಂ.ಎಸ್.ಪುಟ್ಟಣ್ಣನವರ ಮಾಡಿದ್ದುಣ್ಣೊ ಮಹಾರಾಯ ಎಂಬ ಸ್ವತಂತ್ರ ಕಾದಂಬರಿ ಕನ್ನಡದ ಮೊಟ್ಟ ಮೊದಲು ಎಂಬುದು ಗಮನಾರ್ಹವಾದದ್ದು. ೨೦ನೇ ಶತಮಾನವನ್ನು ಕಾದಂಬರಿಗಳ ಹೆಚ್ಚಳಯುಗ ಎಂದು ಕರೆಯಬಹುದು ಎನ್ನುವ ನಿಟ್ಟಿನಲ್ಲಿ ಇತ್ತೀಚಿನ ಬೃಹತ್ ಕಾದಂಬರಿಯಾದ 'ಸ್ವಾತಂತ್ರ್ಯದ ಓಟ' ಲೇಖಕರಾದ ಬೊಳುವಾರು ಮಹಮದ್ ಕುಂಞ ಅವರ ಮುಸ್ಲಿಂ ಸಾಹಿತ್ಯವು ಕೂಡ ಅಷ್ಟೇ ಸತ್ವಯುಳ್ಳ ಸಾಹಿತ್ಯವಾಗಿ ಕನ್ನಡ ಸಾಹಿತ್ಯ ಚರಿತ್ರೆಗೆ ಮುಸ್ಲಿಂ ಸಾಹಿತ್ಯ ಬರೆಹಗಾರರಲ್ಲಿ ಬೊಳುವಾರರ ಕೊಡುಗೆ ಅಪಾರವಾದದ್ದು.

ಬೊಳುವಾರ ಮಹಮದ್ ಕುಂಞ ಅವರ ಬದುಕು ಮತ್ತು ಬರೆಹ: ಅವರ ಜನ್ಮ ಸ್ಥಳದಿಂದ ಸಾಧನೆಯವರೆಗು ಸವಿಸ್ತಾರವಾಗಿ ಅವರ ಬದುಕಿನ ಕ್ರಮಗಳನ್ನು ಕೂಡ ಅಧ್ಯಾಯ ಎರಡರಲ್ಲಿ ತಿಳಿಸಲಾಗಿದೆ.

ಅಧ್ಯಾಯ ಮೂರರಲ್ಲಿ ಹಿಂದೂ ಮುಸ್ಲಿಂ ಧರ್ಮಗಳ ಬದುಕು ಬರೆಹಗಳ ಮತ್ತು ಅವರ ನಡುವಿನ ಸಾಮ್ಯತೆ ಅದರೊಳಗೆ ಬಡತನ, ಧರ್ಮದ ಹಂದರದಲ್ಲಿ ವ್ಯಕ್ತಿಗಳಲ್ಲಿ ಕೇಂದ್ರಬಿಂದುವಾಗಿ ಇಟ್ಟುಕೊಂಡು ಸೋದಾಹರಣವಾಗಿ ಚಿತ್ರಿಸಲಾಗಿದೆ. ಕಾದಂಬರಿಯ ಪಾತ್ರಗಳಲ್ಲಿ ಪ್ರಮುಖವೆನ್ನಿಸುವ ಚಾಂದ್ ಅಲೀ ಪಾತ್ರ, ಮೊಹಿಂದರ್ ಭಾಬಿ ಮತ್ತು ತನ್ವೀರ್ ಕಾರ್. ಹಾಗೆ ಕೈಜಮ್ಮ ಮುಂತಾದ ಪಾತ್ರಗಳ ನಡುವೆ, ಸ್ಥಳಗಳನ್ನು ಕೇಂದ್ರವಾಗಿ ಇಟ್ಟುಕೊಂಡು ಮಹಿಳೆ ಮತ್ತು ಪುರುಷರ ನಡುವಿನ ಕ್ರೂರಭಿನ್ನತೆಗಳನ್ನು ವಸ್ತುವನ್ನಾಗಿಟ್ಟು-ಕೊಂಡು ಲೇಖಕರು ತಮ್ಮ ಕಾದಂಬರಿಯಲ್ಲಿ ಅಭಿವ್ಯಕ್ತಿಸಲಾಗಿದೆ.

ಹಾಗೇ ಧರ್ಮಾತೀತ ನೆಲೆಗಳಿಂದ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಸಮಸ್ಯೆಗಳ ಜೊತೆಗೆ ಮಹಿಳಾ ಸಂವೇದನೆಯನ್ನು ಪುರುಷ ಪ್ರಧಾನ ಕೌಟುಂಬಿಕ ನೆಲೆಗಳಲ್ಲಿ ವಿಭಿನ್ನ ಸ್ಥಿತಿಗಳನ್ನು ಕೇಂದ್ರವಾಗಿಟ್ಟುಕೊಂಡು ಸಮಾಜದ ಓರೆ-ಕೋರೆಗಳನ್ನು ಲೇಖಕರ ಅನುಭವದ ದಾರುಣ ಸ್ಥಿತಿಯನ್ನು ಸಮಾಜದ ಮುಖ್ಯಾವಾಹಿನಿಗೆ ಒಡ್ಡಿರುವುದನ್ನು ಅಧ್ಯಾಯ ಎರಡರಲ್ಲಿ ೨ನೇ ಭಾದಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಕಾದಂಬರಿಯಲ್ಲಿ ಕಂಡುಬರುವ ಭಿನ್ನ ನೆಲೆಗಳು ಇದರಲ್ಲಿ ಮಹಿಳಾ ಪ್ರಜ್ಞೆಯ ಕಾದಂಬರಿಯುದ್ದಕ್ಕು ಮೊಹಿಂದರ್‌ಭಾಬಿ, ತನ್ವೀರಕೌರ್, ಕೈಜಮ್ಮ, ಸುಮತಿ, ಮುಂತಾದ ಮಹಿಳೆಯರನ್ನು ಕುರಿತು ಸವಿಸ್ತಾರವಾಗಿ ಚರ್ಚಿಸಲಾಗಿದೆ.

ಹಾಗೇ ವ್ಯಕ್ತಿ, ವ್ಯಕ್ತಿಗಳ ನಡುವಿನ ಅಂತಃಕರಣ ಬೆರೆತಿರುವುದನ್ನು ಮತ್ತು ಸಮಾಜದಲ್ಲಿನ ಕಟ್ಟು ವ್ಯವಸ್ಥೆಯ ವಿರೋಧವು ವಿಭಿನ್ನ ನೆಲೆಗಳಲ್ಲಿ ಅಭಿವ್ಯಕ್ತಿಸಲಾಗಿದೆ. ತದನಂತರ ದೇಶ ದೇಶಗಳ ನಡುವೆಯು ಸಂಘರ್ಷವಿದ್ದರೂ, ಅಲ್ಲಲ್ಲಿ ಧರ್ಮ, ಧರ್ಮಗಳ ನಡುವೆ, ಧರ್ಮವನ್ನೇ ತ್ಯಜಿಸಿ ಪರಸ್ಪರ ಸಂಬಂಧ ಬೆಸೆಯುವ ಮತ್ತು ಸಹಾಯಶೀಲರಾಗಿ ಕಾದಂಬರಿಯುದ್ದಕ್ಕೂ ಕಂಡು ಬರುವುದನ್ನು ಸೂಚಿಸಲಾಗಿದೆ.

ಜೊತೆಗೆ ಮುತ್ತುಪ್ಪಾಡಿ ಗ್ರಾಮದ ಆಸುಪಾಸಿನಲ್ಲಿ ಗುಡ್ಡೆ ಎಂಬ ಶಾಲೆಯ ಹಲವು ಶಿಸ್ತುವುಳ್ಳ ನಿಷ್ಠೆಯ ಸೇವೆಗಳನ್ನು ಗ್ರಹಿಸಿದರೆ, 'ಕುಟುಂಬ ಯೋಜನೆ' ಎಂಬ ಯೋಜನೆಯಡಿಯಲ್ಲಿ ನಾರಾಯಣ ಮಾಸ್ತರು, ಸಂಜೀವ್, ಗಿರಿಜ, ನಾಸೀರ್, ಕುಂಞಲಿಮ್ಮಾ, ಡಾ.ಸಾವಿತ್ರಮ್ಮ, ಆಯಿಷಾ, ಇಂತಹ ಪಾತ್ರಗಳ ಮೂಲಕ ಆರೋಗ್ಯ, ಶಿಕ್ಷಣದ ಬಗ್ಗೆ ಹಲವು ಘಟನಾವಳಿಗಳು ಕಾಣುವುದನ್ನು ಈ ಭಾಗದಲ್ಲಿ ಚರ್ಚಿಸಲಾಗಿದೆ.

ಹೀಗೆ ಇಡೀ ಕಾದಂಬರಿಯುದ್ದಕ್ಕೂ ಸಮಾಜದ ವ್ಯವಸ್ಥೆಯನ್ನು ಬದಲಾಯಿಸುವ ಮತ್ತು ರಕ್ಷಿಸುವ ನಿಟ್ಟಿನಲ್ಲಿ ಸಮಾಜದ ಸುವ್ಯವಸ್ಥೆಯ ಸಲುವಾಗಿ ಕಾದಂಬರಿ ಹಲವು ನಡವಳಿಕೆಯ ಕ್ರಮ ಮಾನವೀಯ ಮೌಲ್ಯ ಗುಣಗಳನ್ನು ಅರಿವಿಗೆ ಮೂಡಿಸಿರುವುದನ್ನು ಅಧ್ಯಾಯ ನಾಲ್ಕರಲ್ಲಿ ಭಿನ್ನ ಭಿನ್ನ ನೆಲೆಗಳ ಮೂಲಕ ಚರ್ಚಿಸಲಾಗಿದೆ.

ಅಧ್ಯಾಯ ಐದರಲ್ಲಿ ಭಾಷೆ ತಂತ್ರಗಾರಿಕೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಕಲಾತ್ಮಕ ಗುಣವನ್ನು ಅಭಿವ್ಯಕ್ತಿಸಿರುವ ಬೊಳುವಾರರ ಕೃತಿಯಲ್ಲಿ ಬಹಳ ಸೂಕ್ಷ್ಮ ರೀತಿಯಲ್ಲಿ ಬಳಸಿರುವುದನ್ನು ಕಾಣುತ್ತೇವೆ. ಹಾಗೂ ವಸ್ತು ವಿಷಯ ಘಟನೆಗಳಿಗೆ ವ್ಯಕ್ತರೂಪಕೊಡುವಾಗ ಮೂಡಿದ ಭಾಷೆಯೇ ಅಲ್ಲಿಗೆ ಒಪ್ಪುವ ಹಾಗೆ ಉರ್ದು ಕನ್ನಡ, ಮಿಶ್ರಿತಗೊಂಡ ಭಾಷೆಯಾಗಿರುವುದರಿಂದ ಲೇಖಕರರ ಬರೆಹ ಸಹೃದಯರಿಗೆ ಜೀರ್ಣಿಸಿಕೊಳ್ಳುವಂತಿದೆ. ಈ ನಿಟ್ಟಿನಲ್ಲಿ ಭಾಷೆಯ ಶೈಲಿಯು ವ್ಯಂಗ್ಯ, ವಿಡಂಬನೆ, ಹಾಸ್ಯದ ರೂಪ ಪಡೆಯುತ್ತದೆ. ಶೈಲಿಯ ತಂತ್ರಗಾರಿಕೆ ಕನ್ನಡದಲ್ಲಿ ಅಪರೂಪವಾಗಿಯು ಗಮನಾರ್ಹವಾಗಿದೆ. ಹೀಗೆ ದೇಶದ ಆಗು ಹೋಗುಗಳ ಪರಿಯನ್ನು ಲೇಖಕರು ಅಲ್ಲಲ್ಲಿ ಪ್ರಾದೇಶಿಕ ಭಾಷೆಯಾದರು ಕೂಡ ಅಲ್ಲಲ್ಲಿ ಆಂಗ್ಲೋ ಭಾಷೆಯು ಕಂಡುಬರುವ ಸೊಗಡನ್ನು ಸಂದರ್ಭಕ್ಕೆ ತಕ್ಕಂತೆ ಚರ್ಚಿಸಲಾಗುತ್ತದೆ.

ಈ ಅಧ್ಯಾಯಗಳೆಲ್ಲವನ್ನು ಗಮನಿಸಿದರೆ ಇಡೀ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಕಥೆ ಮತ್ತು ಕಾದಂಬರಿಯ ಸ್ವರೂಪವನ್ನು ಬೊಳುವಾರರು ತಮ್ಮದೇ ಆದ ಪ್ರತಿಭೆಯಲ್ಲಿ ಹಲವು ಗುಣಗಳನ್ನು ಏಕಕಾಲದಲ್ಲಿ ಸಮಾಜದ ಮುಖ್ಯವಾಹಿನಿಗೆ ಮುಖಮುಖಿಗೊಳಿಸುವ ನಿಟ್ಟಿನಲ್ಲಿ 'ಸ್ವಾತಂತ್ರ್ಯದ ಓಟ' ಎಂಬ ಕಾದಂಬರಿಯನ್ನು ರಚಿಸಿ ಪ್ರಸ್ತುತ ಕಾಲಘಟ್ಟದ ಯುವ ಬರಹಗಾರರಿಗೆ ಮಾರ್ಗದರ್ಶಿಯಾಗಿ ಸಮಾಜದ ಹಿತ ಸಂದೇಶಗಳನ್ನು ಚಾಂದ್ ಅಲೀ,

ಮೊಹಿಂದರ್ ಭಾಬಿ, ತನ್ವೀರ್ ಕೌರ್, ನಡುವಿನ ಇನ್ನು ಹಲವು ಧರ್ಮಾತೀತ ಸಂಬಂಧಗಳು ಬೆಸೆದಿರುವುದನ್ನು ಇಂದು ಸಹೃದಯರಿಗೆ ಅಚ್ಚು ಹೊಡೆದ ಲಾಂಛನದ ಚಿಹ್ನೆ ಇದ್ದಂತೆ. ಅಂದರೆ ಸಮಾಜ ಮುಖಿಯಾಗಿರುವ ಇವರ ಚಿಂತನೆ ಸಾಹಿತ್ಯ ಕ್ಷೇತ್ರಕ್ಕೆ ದ್ವಿಮುಖವಾಗಿ ಚರ್ಚೆಗೆ ಒಳಗಾಗುತ್ತದೆ. ತಮ್ಮದೇ ಆದ ಜಾಣ್ಮೆಯ ಬರೆಹಗಳ ಮೂಲಕ ಅದರಲ್ಲೂ ಸ್ವಾತಂತ್ರ್ಯದ ಓಟ ಕಾದಂಬರಿಯಲ್ಲಿ ಧರ್ಮಾತೀತ ನೆಲೆಯಲ್ಲಿ ರಚಿತವಾಗಿರುವ ಇಡೀ ಸಮಾಜದ ವ್ಯವಸ್ಥೆಯನ್ನು ಏಕಕಾಲದಲ್ಲಿ ಕನ್ನಡ ಸಾಹಿತ್ಯ ಚರಿತ್ರೆಯ ಪ್ರಕಾರಗಳಲ್ಲಿ ಎಲ್ಲ ತರಹಕ್ಕೆ ಹೊಂದಿರುವ ಸಾಹಿತ್ಯವೆಂದರೆ ಅದು 'ಸ್ವಾತಂತ್ರ್ಯದ ಓಟ' ಎಂಬ ಕಾದಂಬರಿಯಲ್ಲಿ ಬೊಳುವಾರರು ಪ್ರಸ್ತುತ ಲೇಖಕರಿಗೆ ಅಪಾರ ಕಾಳಜಿಯಿಂದ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹಿಂದೂ ಮುಸ್ಲಿಂ ಬದುಕಿನ ಚಿತ್ರಣವನ್ನು ಮಂಡಿಸಿರುವುದನ್ನು ಸವಿಸ್ತಾರವಾಗಿ ಈ ಆರು ಅಧ್ಯಾಯನದಲ್ಲಿ ವಿಸ್ತಾರವಾಗಿ ತಿಳಿಸಲಾಗಿದೆ.

ಇಡೀ ಕಾದಂಬರಿಯಲ್ಲಿ ಶೀರ್ಷಿಕೆಯೆ ಹೇಳಿದಂತೆ ಸ್ವಾತಂತ್ರ್ಯ ಇರುವ ಮನುಷ್ಯ ಹಾಗೂ ಸ್ವಾತಂತ್ರ್ಯ ಇಲ್ಲದ ಮನುಷ್ಯನ ಬದುಕಿನ ಚಿತ್ರಣವನ್ನು, ಮಾನವೀಯ ಮೌಲ್ಯಗಳನ್ನು, ಧರ್ಮಾತೀತ ಜೀವಂತಿಕೆಗಳನ್ನು, ಸಮಾಜದ ಕಾಳಜಿಯನ್ನು, ಹಿಂದೂಸ್ತಾನ ಮತ್ತು ಪಾಕಿಸ್ತಾನದ ಗಡಿಯಲ್ಲಿ ಹಾಗು ಮುತ್ತುಪ್ಪಾಡಿ ಗ್ರಾಮದಲ್ಲಿ ಕಂಡು ಬರುವ ಹೀನ ವ್ಯವಸ್ಥೆಗಳ ವಿರೋಧ, ಪ್ರತಿಭಟಿಸುವ ಪಾತ್ರಗಳು ಮತ್ತು ಘಟನಾವಳಿಗಳನ್ನು ಸವಿಸ್ತಾರವಾಗಿ ಇಡೀ ಜಗತ್ತೇ ಅರಿತುಕೊಳ್ಳುವ ಮಟ್ಟಿಗೆ ಮುಸ್ಲಿಂ ಲೇಖಕರರೂ ಕೂಡ ಕನ್ನಡ ಸಾಹಿತ್ಯಕ್ಕೇ ಅಪಾರವಾದ ಕೊಡುಗೆ ನೀಡಿದ್ದಾರೆ. ಬೊಳವಾರರು ಕನ್ನಡ ಸಾಹಿತ್ಯಕ್ಷೇತ್ರಕ್ಕೆ ದ್ವಿಮುಖವಾಗಿ ವಿಭಿನ್ನ ನೆಲೆಗಳನ್ನು ಪರಿಚಯಿಸುತ್ತಾರೆ. ಹಾಗೆ ಅವರ ಇಡೀ ಕಾದಂಬರಿಯು ಏಕಕಾಲದಲ್ಲಿ ಹಲವು ಪಾತ್ರಗಳನ್ನು ಪರಸ್ಪರ ಮಾತಾನಾಡಿಸುವ ಕ್ರಿಯೆ ಕನ್ನಡ ಸಾಹಿತ್ಯ ಚರಿತ್ರೆಗಳ ಪ್ರಕಾರಗಳಿಗೆ ಇದೊಂದು ವಿಶೇಷ ಸ್ಥಾನ ಮಾನ ಗಳಿಸಿಕೊಂಡಿದೆ. ಹಾಗೆ ಯುವ ಬರಹಗಾರರಿಗೆ ಮತ್ತು ದೇಶ ಪ್ರೇಮಿಗಳಿಗೆ ಸಜ್ಜನರು ಮತ್ತು ದುರ್ಜನರ ಬಗೆಗೆ ಸವಿಸ್ತಾರವಾಗಿ ಚಾಂದ್ ಅಲೀ ಪಾತ್ರದಿಂದ ತಿಳಿಸಲು ಪ್ರಯತ್ನಿಸುತ್ತಾರೆ. ಕುವೆಂಪು ಅವರ ಸೂಕ್ತಿಯಂತೆ ಇಲ್ಲಿ, ಯಾರೂ ಮುಖ್ಯರಲ್ಲ; ಯಾರೂ ಅಮುಖ್ಯರಲ್ಲ. ಯಾವುದೂ ಯಃಕಶ್ಚಿತವಲ್ಲ!" ಎಂಬ ವಿಚಾರವನ್ನು ಗ್ರಹಿಸಿದರೆ, ಹಿಮ್ಮುಖವಾಗಿ ಲೇಖಕರು ತಮ್ಮ ಕಾದಂಬರಿಯನ್ನು ಸಮಾಜ ಮುಖ ಮುಖಿ ಮಾಡುವುದು ಅವರ ಪ್ರತಿಭೆಯಾಗಿದೆ. ಈ ನಿಟ್ಟಿನಲ್ಲಿ ಎಲ್ಲಾ ದೇಶದಲ್ಲಿ ಎಲ್ಲರೂ ಎನ್ನುವ ಹಿಂದೆ ಕೆಲವರು ಸಜ್ಜನ ಸಂಪನರು ಇದ್ದೇ ಇರುತ್ತಾರೆ ಎನ್ನುವುದು ಇವರು ಸಮಾಜಕ್ಕೆ ಮತ್ತು ಕನ್ನಡ ಸಾಹಿತ್ಯ ಕೊಟ್ಟಂತ ಪ್ರಮುಖ ಆಶಯ ಎನ್ನಲಾಗುತ್ತದೆ.

[illegible]
[illegible]
[illegible]
[illegible]

[illegible]
[illegible]
ದಕ್ಷತೆ [illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]

[illegible]
[illegible]
[illegible]

ಮುಂಬರುವ ಯುವ ಲೇಖಕರು ತಮ್ಮ ಚಿಂತನೆಯ ಛಾಪನ್ನು, ನಾಗರಿಕ ಪ್ರಜ್ಞೆಯನ್ನು ವಿಶಾಲ ಮನೋಭಾವದಿಂದ ಅರಿತುಕೊಂಡು, ಧರ್ಮ, ಜಾತಿ, ಬಡವ, ಶ್ರೀಮಂತ ಮತ್ತಿತ್ತರ ಯಾವುದೇ ಬೇದಭಾವವಿಲ್ಲದೆ, ನಿಸ್ವಾರ್ಥಿಯಾಗಿ ತಮ್ಮ ಬರೆಹದ ಕೃಷಿಯನ್ನು ತೊಡಗಿಸಿಕೊಳ್ಳಬೇಕೆಂದು ತಮ್ಮ ಕಾದಂಬರಿಯ ರಚನೆಯ ಹಿಂದೆ ಸೂಚಿಸಿದೆ.

ಇಡೀ ಕಾದಂಬರಿಯ 'ಸ್ವಾತಂತ್ರ್ಯ ಓಟ' ಎನ್ನುವ ಶೀರ್ಷಿಕೆಯಡಿಯಲ್ಲಿ ತಿಳಿಸುವುದೆಂದರೆ ಸ್ವಾತಂತ್ರ್ಯ ದೇಶ, ದೇಶಗಳ ನಡುವೆ ಅಲ್ಲದೆ ಮಾನವೀಯ ಅಂತಃಕರಣ ತುಂಬಿರುವ ವ್ಯಕ್ತಿಗಳಿಗೂ ದೊರಕಬೇಕು ಅದನ್ನು ತನ್ವೀರಳಿಗೆ ಸ್ವಾತಂತ್ರ್ಯ ಇಲ್ಲದ ಸಂದರ್ಭದಲ್ಲೂ ಆಕೆ ಯೋಚಿಸದ ಪ್ರಜ್ಞೆ ಸಂಕಷ್ಟದಿಂದ ಪಾರಾಗಲು, ತಮ್ಮ ಜೀವನ ಸುಗಮವಾಗಿ ನಡೆಯಲು ಕಾರಣವಾಯಿತು. ಕಾದಂಬರಿ ಪ್ರಮುಖವಾಗಿ ಸೂಚಿಸುವ ನಿಟ್ಟಿನಲ್ಲಿ ಸ್ವಾತಂತ್ರ್ಯ ಎಂಬುದು ಮನುಷ್ಯ, ಮನುಷ್ಯನ ನಡುವಿನ ಮಾನವಿಯ ಚಿಂತನೆ ಇದ್ದರೆ ಮಾತ್ರ, ಸ್ವಾತಂತ್ರ್ಯ ಎಂಬ ಅಸ್ತಿತ್ವ ಕಾಣಲು ಸಾಧ್ಯ. ಹಾಗೆಯೇ ಇನ್ನೂ ಹಲವು ಸನ್ನಿವೇಶದಲ್ಲಿ ಸ್ವಾತಂತ್ರ್ಯ ದೇಶ ಕಟ್ಟಿರುವ ಕಪಿಮುಷ್ಠಿಯಿಂದ ಬಿಡುಗಡೆ ಅಷ್ಟೆ ಅಲ್ಲದೆ, ಅಲ್ಲಿನ ಜನರ ಬದುಕಿ ನಡುವೆ ಇರುವ ಸಂಘರ್ಷ, ವೇದನೆಗಳೇ ಓಟ ಎನ್ನಬೇಕಾಗುತ್ತದೆ. ಇಂತಹವುಗಳನ್ನು ಲೇಖಕರು ತಮ್ಮ ಕಾದಂಬರಿಯಲ್ಲಿ, ಯುವ ಪೀಳಿಗೆಗಳಿಗೆ ಸಹೃದಯಿಗಳಿಗೆ ಕೊಡುವುದು ಸಾಹಿತ್ಯ ಚರಿತ್ರೆಯಲ್ಲಿ ಹೊಸ ತಿರುವು, ನವ ಚಿಂತನೆ ಎನ್ನಲಾಗಿದೆ. ಶೀರ್ಷಿಕೆ ಹೇಳುವಂತೆ "ಸ್ವಾತಂತ್ರ್ಯ ಓಟ" ಇದೊಂದು ಧರ್ಮತೀತ ನೆಲೆಯಲ್ಲಿ ಜನರ ಬದುಕಿನ ತಿರುವು ಎನ್ನಲಾಗಿದೆ.

ಈ ನಿಟ್ಟಿನಲ್ಲಿ ಅಧ್ಯಾಯನಕ್ಕೆ ಸೂಕ್ತವೆನ್ನಿಸಿ, ಬೃಹತ್ ಕಾದಂಬರಿಯನ್ನು ಗಂಭೀರವಾದ ಅಧ್ಯಯನಕ್ಕೆ ಒಳಪಡಿಸಿ, ಅಧ್ಯಾಯನದಲ್ಲಿ ದೊರೆಯುವ ವಿಚಾರಗಳನ್ನು ಪ್ರಾಮಾಣಿಕವಾಗಿ ಸಾದರಪಡಿಸುವ ಉದ್ದೇಶದಿಂದ ಈ ವಿಷಯವನ್ನು ಅಧ್ಯಯನಕ್ಕೆ ತೆಗೆದುಕೊಳ್ಳಲಾಗಿದೆ.

ಪರಾಮರ್ಶನ (ಗ್ರಂಥಋಣ)

೧. ಅಸ್ಗರ್ ಅಲಿ ಎಂಜಿನಿಯರ್ – ಇಸ್ಲಾಂ ಮತ್ತು ಮಹಿಳೆ, ೨೦೧೩, ಪ್ರಕಾಶನ-ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್, ಬೆಂಗಳೂರು.

೨. ಆಬಿದಾ ಸಮೀಉದ್ದೀನ್ – ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಮುಸ್ಲಿಂ ಮಹಿಳೆಯರ ಕೊಡುಗೆ, ೨೦೧೩, ಪ್ರಕಾಶನ-ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್, ಬೆಂಗಳೂರು.

೩. ನೇಮಿಚಂದ್ರ – ಹೋರಾಟದ ಹಾದಿಯಲ್ಲಿ ಧೀಮಂತ ಮಹಿಳೆಯರು, ೨೦೧೩, ಪ್ರಕಾಶ-ವನಿತಾ ಚಿಂತನೆ ಮಾಲೆ, ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು.

೪. ಬೊಳುವಾರು ಮಹಮದ್ ಕುಂಞ – ಸ್ವಾತಂತ್ರ್ಯದ ಓಟ, ೨೦೧೨, ಪ್ರಕಾಶನ-ಮುತ್ತುಪ್ಪಾಡಿ ಪುಸ್ತಕ, ಬೆಂಗಳೂರು.

೫. ರಾಮಚಂದ್ರನ್.ಸಿ.ಎನ್-ಸಾಹಿತ್ಯವಿಮರ್ಶೆ, ೨೦೦೮, ಪ್ರಕಾಶನ-ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೬. ಶೇಷಗಿರಿರಾವ್.ಎಲ್.ಎಸ್-ಹೊಸಗನ್ನಡ ಸಾಹಿತ್ಯ ಚರಿತ್ರೆ (ಸಂ-೧೦), ೨೦೧೩, ಪ್ರಕಾಶನ-ಕರ್ನಾಟಕ ಬುಕ್ ಏಜೆನ್ಸಿ, ಬೆಂಗಳೂರು.

೭. ಶೇಷಗಿರಿರಾವ್.ಎಲ್.ಎಸ್- ಸಮಗ್ರ ವಿಮರ್ಶಾ ಸಾಹಿತ್ಯ, ೨೦೧೦, ಪ್ರಕಾಶನ-ಕನ್ನಡ ಮತ್ತು ಸಂಸ್ಕೃತಿ ಇಲಾಕೆ, ಬೆಂಗಳೂರು.

೮. ಶೇಷಗಿರಿರಾವ್.ಎಲ್.ಎಸ್- ಸಮಗ್ರ ವಿಮರ್ಶಾ ಸಾಹಿತ್ಯ (ಸಂ -೭), ೨೦೧೦, ಪ್ರಕಾಶನ-ಕನ್ನಡ ಮತ್ತು ಸಂಸ್ಕೃತಿ ಇಲಾಕೆ, ಬೆಂಗಳೂರು.

೯. ಸಾರಾ ಅಬೂಬಕ್ಕರ್-ಚಿಂಎ-ಚಿಂತನೆ, ೨೦೧೨, ಪ್ರಕಾಶನ-ಚಂದ್ರಗಿರಿ ಪ್ರಕಾಶನ, ಮೈಕ್ರೊವೇವ್ ಸ್ಟೇಶನ್ ರಸ್ತೆ, ಮಂಗಳೂರು.

*****

AKSHARA GRANTHALAYA
ACC.NO.131915